بِسْمِ اللهِ الرَّحْمٰنِ الرَّحِيْم نَحْمَدُهٗ وَنُصَلِّى عَلٰى رَسُوْلِهِ الْكَرِيْم وَعَلٰى عَبْدِهِ الْمَسِيْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 06

ಕನ್ನಡ **ಬದರ್** ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 43–44

ವಾರ್ಷಿಕ ಶುಲ್ಕ ರೂ.600/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**23, 30 ಅಕ್ಟೋಬರ್ 2025, 23, 30 ಅಖಾ 1404 ಹಿಜರಿ ಶಮ್ಸಿ, 30 ರಬೀಉಸ್ಸಾನಿ, 07 ಜಮಾದಿಉಲ್ ಅವ್ವಲ್ 1447 ಹಿಜರಿ ಖಮರಿ.**


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِىْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

نَزَّلَ عَلَيْكَ الْكِتٰبَ
بِالْحَقِّ مُصَدِّقًا لِّمَا بَيْنَ يَدَيْهِ
وَاَنْزَلَ التَّوْرٰىةَ وَالْاِنْجِيْلَ ۝

**(ಆಲಿ ಇಮ್ರಾನ್ : 04)**

**ಅಂದರೆ: ಅವನು ನಿನಗೆ ಈ ಗ್ರಂಥವನ್ನು, ಇದಕ್ಕೆ ಮುಂಚೆ ಅವತೀರ್ಣವಾದುವುಗಳನ್ನು ದೃಢೀಕರಿಸುವಂತೆ ಸತ್ಯಪೂರ್ಣವಾಗಿ ಅವತೀರ್ಣಗೊಳಿಸಿರುವನು. ಜನರಿಗೆ ಮಾರ್ಗದರ್ಶಕವಾಗಿ (ಇದಕ್ಕೆ) ಮುಂಚೆ ತೌರಾತನ್ನೂ ಇಂಜೀಲನ್ನೂ ಅವನು ಅವತೀರ್ಣಗೊಳಿಸಿದ್ದನು.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಹಝ್ರತ್ ಮಿಖ್ದಾದ್ ಬಿನ್ ಅಸ್ವದ್(ರ) ರವರ ಮಹಾಕಾರ್ಯ

ತಾರಿಖ್ ಬಿನ್ ಶಿಹಾಬ್ ರವರು ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್(ರ) ಅವರು "ಮಿಖ್ದಾದ್ ಬಿನ್ ಅಸ್ವದ್ ರವರ ಇಂತಹ ಕಾರ್ಯವನ್ನು ನಾನು ನೋಡಿದ್ದೇನೆ, ನನ್ನ ಎಲ್ಲಾ ಸತ್ಕಾರ್ಯಗಳು ಅದಕ್ಕೆ ಹೋಲಿಸಲಾಗದು ಮತ್ತು ನಾನು ಈ ಕಾರ್ಯವನ್ನು ಮಾಡಬೇಕಾಗಿತ್ತು ಎಂದು ನಾನು ಆಶಿಸುತ್ತೇನೆ" ಎಂದು ಹೇಳುತ್ತಿರುವುದನ್ನು ನಾನು ಕೇಳಿದೆ ಎಂದು ವಿವರಿಸುತ್ತಾರೆ. ಹಝ್ರತ್ ಪೈಗಂಬರ್(ಸ) ಬದರ್ ಯುದ್ಧದ ಸಂದರ್ಭದಲ್ಲಿ ಸತ್ಯನಿಷೇಧಿಗಳ ವಿರುದ್ಧ ಹೋರಾಡಲು ಕರೆ ನೀಡುತ್ತಿದ್ದರು (ಮತ್ತು ಅವರು ಹೋರಾಟಕ್ಕೆ ಸಿದ್ಧರಿದ್ದೀರಾ ಅಥವಾ ಇಲ್ಲವೇ ಎಂದು ತಮ್ಮ ಸಹಚರರನ್ನು ಕೇಳುತ್ತಿದ್ದರು). ಆ ಸಮಯದಲ್ಲಿ, ಮಿಖ್ದಾದ್ ಬಿನ್ ಅಸ್ವದ್ ಎದ್ದುನಿಂತು ಹಝ್ರತ್ ಪೈಗಂಬರ್(ಸ) ರವರಿಗೆ, "ಓ ಅಲ್ಲಾಹನ ಸಂದೇಶವಾಹಕರೇ, ಮೂಸಾ ಅವರ ಜನರು ಹೇಳಿದಂತೆ ನಾವು 'ಹೋಗಿ ನೀವು ನಿಮ್ಮ ಪ್ರಭುವಿನೊಂದಿಗೆ ಹೋರಾಡಿ' ಎಂದು ಹೇಳುವುದಿಲ್ಲ (ನಾವು ಇಲ್ಲಿ ಕುಳಿತುಕೊಳ್ಳುತ್ತೇವೆ ಮತ್ತು ಶತ್ರುಗಳ ವಿರುದ್ಧ ಹೋರಾಡಲು ಹೋಗುವುದಿಲ್ಲ) ಬದಲಿಗೆ, ನಾವು ನಿಮ್ಮ ಬಲ ಮತ್ತು ಎಡಭಾಗದಲ್ಲಿ ಹೋರಾಡುತ್ತೇವೆ" ಎಂದು ಹೇಳಿದರು. ಹಝ್ರತ್ ಪೈಗಂಬರ್(ಸ) ಅವರ ಈ ಉತ್ತರವನ್ನುಆಲಿಸಿ ಎಷ್ಟು ಸಂತೋಷಪಟ್ಟರು ಎಂದರೆ ಅವರ ಮುಖ ಸಂತೋಃದಿಂದ ಪ್ರಕಾಶಮಾನವಾಯಿತು. **(ಬುಖಾರಿ, ಕಿತಾಬ್ ಅಲ್–ಮಗ಼ಾಝಿ, ಕಿಸ್ಸಾ ಗಝ್ವಾ ಬದರ್) (ಹದೀಖತುಸ್ಸಾಲಿಹೀನ್, ಹದೀಸ್–997, ಮಲಕ್ ಸೈಫುರ್ರಹ್ಮಾನ್ ಸಾಹಿಬ್ ಅವರಿಂದ ಸಂಕಲಿಸಲಾಗಿದೆ)**


**'ಬದರ್' ವಾರಪತ್ರಿಕೆಯನ್ನು Online ಮುಖಾಂತರ ಓದಲು ಸಂಪರ್ಕಿಸಿ ನಮ್ಮ ವೆಬ್‌ಸೈಟ್: https://akhbarbadr.in/Kannada/#gsc.tab=0**


ಅವರು ಆಡಿದ ನಂತರ ಹಿಂದಿರುಗುತ್ತಾರೆ, ಆದರೆ ನಾನು ಆಡುತ್ತಿರುವ ಕ್ರಿಕೆಟ್ ತೀರ್ಪಿನ ದಿನದವರೆಗೆ ಶಾಶ್ವತವಾಗಿರುತ್ತದೆ.

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

**ಪ್ರಗತಿಗಳಿಗೆ ಅಂತ್ಯವಿಲ್ಲ**

ಅವರು ಹೇಳಿದರು: "ಸ್ವರ್ಗದಲ್ಲಿಯೂ ಸಹ, ಸತ್ಯವಿಶ್ವಾಸಿಗಳಿಗೆ ಪ್ರಗತಿ ಇದೆ ಮತ್ತು ಪ್ರವಾದಿಗಳಿಗೂ ಪ್ರಗತಿ ಇದೆ, ಇಲ್ಲದಿದ್ದರೆ ದುರೂದ್ ಶರೀಫ್ ಅನ್ನು ಏಕೆ ಪಠಿಸಲಾಗುತ್ತದೆ? ಪ್ರಗತಿಗಳಿಗೆ ಅಂತ್ಯವಿಲ್ಲ ಎಂಬುದು ನಮ್ಮ ನಿಲುವು ಆಗಿದೆ."

**ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಮಹಾನ್ ಸಾಧನೆ**

ಅವರು ಹೇಳಿದರು: "ಜನರು ಈಸ ಮಸೀಹರಿಗೆ(ಅ) ಇಷ್ಟು ದೀರ್ಘಾಯುಷ್ಯವನ್ನು ನೀಡಲು ವ್ಯರ್ಥವಾಗಿ ಪ್ರಯತ್ನಿಸುತ್ತಾರೆ. ಅವರ ಅಲ್ಪಾವಧಿಯ ಜೀವನವು ದೀರ್ಘಾಯುಷ್ಯವನ್ನು ಬಯಸಬೇಕಾದ ಯಾವ ಫಲಿತಾಂಶವನ್ನು ನೀಡಿದೆ? ಜಗತ್ತು ಧರ್ಮಯುದ್ಧದಿಂದ ತುಂಬಿದೆ ಮತ್ತು ಬಹುದೇವತಾವಾದವು ಎಲ್ಲೆಡೆ ಹರಡಿದೆ. ಹೌದು, ಯಾರಾದರೂ ಇಷ್ಟು ದೀರ್ಘಾಯುಷ್ಯವನ್ನು ಪಡೆಯಲು ಸಾಧ್ಯವಾದರೆ, ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮರು ಅದಕ್ಕೆ ಅರ್ಹರಾಗಿದ್ದರು, ಅವರು ಅಲ್ಪಾವಧಿಯ ಜೀವನದಲ್ಲಿ ಏಕದೇವೋಪಾಸನೆಯಿಂದ ಜಗತ್ತನ್ನು ತುಂಬಿದರು ಮತ್ತು ಅವರ ಹೃದಯಗಳನ್ನು ದೇವರ ಪ್ರೀತಿಯ ನಿಜವಾದ ಉತ್ಸಾಹವನ್ನು ತುಂಬಿದರು."

**ತೀರ್ಪಿನ ದಿನದವರೆಗೆ ಆಡಲಾಗುವ ಕ್ರಿಕೆಟ್**

ಖಾದಿಯನ್‌ನಲ್ಲಿರುವ ಮದ್ರಸಾ ತಾಲೀಮುಲ್ ಇಸ್ಲಾಮ್‌ನ ಹುಡುಗರು ಚೆಂಡನ್ನು ಆಡುತ್ತಾ ಪಂದ್ಯವನ್ನು ಆಡುತ್ತಿದ್ದರು. ಮಕ್ಕಳ ಸಂತೋಷವನ್ನು ಹೆಚ್ಚಿಸಲು ಕೆಲವು ಹಿರಿಯರು ಸಹ ಮೈದಾನಕ್ಕೆ ಹೋದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಓರ್ವ ಪುತ್ರ ತನ್ನ ಬಾಲ್ಯದ ಮುಗ್ಧತೆಯಲ್ಲಿ ಅವರನ್ನು ಕೇಳಿದರು, "ಅಬ್ಬಾ, ನೀವು ಕ್ರಿಕೆಟ್ ನೋಡಲು ಏಕೆ ಹೋಗಲಿಲ್ಲ?" ಆ ಸಮಯದಲ್ಲಿ ಅವರು(ಅ) ಸೂರಾ ಅಲ್–ಫಾತಿಹಾದ ವ್ಯಾಖ್ಯಾನವನ್ನು ಬರೆಯುವಲ್ಲಿ ನಿರತರಾಗಿದ್ದರು. ಅವರು(ಅ) ಹೇಳಿದರು,

"ಅವರು ಆಡಿದ ನಂತರ ಹಿಂದಿರುಗುತ್ತಾರೆ, ಆದರೆ ನಾನು ಆಡುತ್ತಿರುವ ಕ್ರಿಕೆಟ್ ತೀರ್ಪಿನ ದಿನದವರೆಗೂ ಶಾಶ್ವತವಾಗಿರುತ್ತದೆ."

**(ಮಲ್ಫುಝಾತ್, ಸಂಪುಟ–2, ಪುಟಗಳು–93, 94, ಆವೃತ್ತಿ 2018, ಖಾದಿಯಾನ್)**

## ಮನುಷ್ಯನನ್ನು ಶಾಶ್ವತ ಜೀವನಕ್ಕಾಗಿ ಸೃಷ್ಟಿಸಲಾಗಿದೆ ಎಂದು ಇಸ್ಲಾಂ ಹೇಳುತ್ತದೆ ಮತ್ತು ಅವನಿಗೆ ಶಾಶ್ವತ ಆಧ್ಯಾತ್ಮಿಕ ಪ್ರಗತಿಯ ಮಾರ್ಗವನ್ನು ತೆರೆಯಲಾಗಿದೆ

### ಮರಣದ ನಂತರ ಪುನರುತ್ಥಾನದಲ್ಲಿ ನಂಬಿಕೆಯು ಮನುಷ್ಯನಲ್ಲಿ ಸರ್ವಶಕ್ತನಾದ ಅಲ್ಲಾಹನ ಭಯ ಮತ್ತು ಪ್ರೀತಿಯನ್ನು ಸೃಷ್ಟಿಸುತ್ತದೆ ಮತ್ತು ಅವನ ಕರ್ಮಗಳನ್ನು ಸುಧಾರಿಸುವ ಪ್ರಮುಖ ಸಾಧನವಾಗಿದೆ

ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಸೂರಾ ಅಲ್–ಮುಮಿನೂನ್ ವಚನ 38 ರ ವ್ಯಾಖ್ಯಾನದಲ್ಲಿ ಹೇಳುತ್ತಾರೆ:

**ಇನ್ ಹಿಯ ಇಲ್ಲ ಹಯಾತುನದ್ದುನಿಯಾ ನಮೂತು ವನಹಹಯಾ ವಮಾ ನಹ್‌ನು ಬಿಮಬ್‌ಉಸೀನ–** ಅಂದರೆ: 'ನಮ್ಮ ಇಹಲೋಕ ಜೀವನದ ಹೊರತು ಬೇರೆ ಜೀವನವಿಲ್ಲ. ನಾವು (ಇಲ್ಲಿಯೇ) ಸಾಯುತ್ತೇವೆ; (ಇಲ್ಲಿಯೇ) ಬದುಕುತ್ತೇವೆ. ನಾವು ಪುನಃ ಜೀವಂತಗೊಳಿಸಲ್ಪಡಲಾರೆವು. ಈ ವಚನದಲ್ಲಿ ಪ್ರವಾದಿಗಳ ನಿರಾಕರಣೆಗೆ ಎರಡನೇ ಕಾರಣವೆಂದರೆ ಅವರು ಮರಣದ ನಂತರ ಪುನರುತ್ಥಾನವನ್ನು ನಿರಾಕರಿಸುತ್ತಾರೆ ಮತ್ತು ಇದರಿಂದಾಗಿ, ಅವರ ಕಾರ್ಯಗಳ ಒಳ್ಳೆಯದು ಅಥವಾ ಕೆಟ್ಟದ್ದರ ಬಗ್ಗೆ ಅವರಿಗೆ ಎಂದಿಗೂ ನಿಜವಾದ ಅರಿವು ಇರುವುದಿಲ್ಲ ಎಂದು ಸರ್ವಶಕ್ತನಾದ ಅಲ್ಲಾಹನು ಹೇಳಿದ್ದಾನೆ. ಅವರು ಕುರುಡಾಗಿ ತಿರುಗಾಡುತ್ತಾರೆ, ತಿನ್ನುವುದು ಮತ್ತು ಕುಡಿಯುವುದು ಮತ್ತು ಅವರ ಜೀವನದ ಈ ಕೆಲವು ದಿನಗಳನ್ನು ಆರಾಮ ಮತ್ತು ನಿರಾಳವಾಗಿ ಕಳೆಯುವುದು ಅವರ ಏಕೈಕ ಕೆಲಸ


*(ಪುಟ ಸಂಖ್ಯೆ–08 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಹಝ್ರತ್ ಪೈಗಂಬರ್(ಸ) ಹೀಗೆ ಉಪದೇಶಿಸಿದರು: ಸಲಾಮ್ ಅನ್ನು ಚೆನ್ನಾಗಿ ಹರಡಿರಿ, ಅಂದರೆ ಶಾಂತಿಯನ್ನು ಹರಡಿರಿ, ಜನರಿಗೆ ಆಹಾರವನ್ನು ನೀಡಿರಿ, ಒಬ್ಬ ಗೌರವಾನ್ವಿತ ವ್ಯಕ್ತಿ ತನ್ನ ಕುಟುಂಬದ ಮುಂದೆ ನಾಚುವಂತೆ ಅಲ್ಲಾಹನ ಮುಂದೆ ನಾಚಿಕೊಳ್ಳಿ. ಯಾವುದೇ ತಪ್ಪು ಅಥವಾ ಪಾಪ ಸಂಭವಿಸಿದರೆ, ತಕಣ್ಣ ವೇ ಒಂದು ಒಳ್ಳೆ ಯ ಕೆಲಸ ಮಾಡಿ, ಏಕೆಂದರೆ ಒಳ್ಳೆಯ ಕೆಲಸಗಳು ಪಾಪಗಳನ್ನು ಅಳಿಸಿಹಾಕುತವ್ತೆ.

ಹುನೈನ್ ಯುದ್ಧದಲ್ಲಿ, ದೇವದೂತರ ಸೈನ್ಯವನ್ನು ಇರಿಸಲಾಗಿತ್ತು ಎಂದು ವ್ಯಾಖ್ಯಾನಿಸಲಾದ ಬಗ್ಗೆಯೂ ಉಲ್ಲೇಖವಿದೆ.

"ಸಾಯಲು ಸಿದ್ಧವಾಗಿರುವ ವ್ಯಕ್ತಿಯನ್ನು ಯಾರೂ ಕೊಲ್ಲಲು ಸಾಧ್ಯವಿಲ್ಲ ಎಂಬುದನ್ನು ಚೆನ್ನಾಗಿ ನೆನಪಿಡಿ. ಪ್ರವಾದಿಗಳ ಗುಂಪು ಮಾತ್ರ ನಿಜವಾಗಿಯೂ ಸಾವನ್ನು ಸ್ವೀಕರಿಸುತ್ತದೆ. ಹಾಗಾದರೆ ಅವರನ್ನು ಕೊಲ್ಲಲು ಯಾರಾದರೂ ಇದ್ದಾರೆಯೇ? ಖಂಡಿತ ಇಲ್ಲ. ಶಾಶ್ವತ ಜೀವನವನ್ನು ಪಡೆಯುವ ಸಾರವೆಂದರೆ ಒಬ್ಬ ವ್ಯಕ್ತಿಯು ಸರ್ವಶಕ್ತನಾದ ಅಲ್ಲಾಹನ ಸಲುವಾಗಿ ಸಾವನ್ನು ಸ್ವೀಕರಿಸುತ್ತಾನೆ, ಮತ್ತು ಒಬ್ಬ ವ್ಯಕ್ತಿಯು ಈ ಉದ್ದೇಶದಿಂದ ಎದ್ದುನಿಂತಾಗ, ಸರ್ವಶಕ್ತನಾದ ಅಲ್ಲಾಹನ ದೇವದೂತರು ಅವನನ್ನು ಪುನರುಜ್ಜೀವನಗೊಳಿಸಲು ಎದ್ದು ನಿಲ್ಲುತ್ತಾರೆ. ಅದು ಕುಸ್ತಿ ಪಂದ್ಯ ಪ್ರಾರಂಭವಾದಂತೆ. ಒಬ್ಬ ವ್ಯಕ್ತಿಯು ಸರ್ವಶಕ್ತನಾದ ಅಲ್ಲಾಹನ ಮಾರ್ಗದಲ್ಲಿ ಸಾಯಬೇಕೆಂದು ಒತ್ತಾಯಿಸುತ್ತಾನೆ, ಆದರೆ ದೇವದೂತರು ಅವನನ್ನು ಜೀವಂತವಾಗಿರಿಸಬೇಕೆಂದು ಒತ್ತಾಯಿಸುತ್ತಾರೆ."   (ಹಝ್ರತ್ ಮುಸ್ಲಿಹ್ ಮೌಊದ್(ರ))

## 8 ಹಿಜರಿಯಲ್ಲಿ ನಡೆದ ಕೆಲವು ಯುದ್ಧಗಳು ಹಾಗೂ ದಂಡಯಾತ್ರೆಗಳ ಬೆಳಕಿನಲ್ಲಿ ಹಝ್ರತ್ ಪೈಗಂಬರ್(ಸ)ರ ಪವಿತ್ರ ಜೀವನಚರಿತ್ರೆಯ ಪ್ರಸ್ತಾವನೆ

ಇಬ್ಬರು ದಿವಂಗತರಾದ ಕೆನಡಾದ ಸನ್ಮಾನ್ಯ ಡಾ॥ ಸೈಯದ್ ಶಹಾಬ್ ಅಹ್ಮದ್ ಸಾಹಿಬ್ ಮತ್ತು ಲಾಹೋರ್‌ನ ಸನ್ಮಾನ್ಯ ಮುಬಾರಕ್ ಖೋಕರ್ ಸಾಹಿಬ್ ಅವರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝ್ ಜನಾಝ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **12–09–2025** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَ اِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಹುನೈನ್ ಯುದ್ಧಕ್ಕೆ ಸಂಬಂಧಿಸಿದಂತೆ ಪ್ರಸ್ತಾಪಿಸಲಾಗುತ್ತಿತ್ತು. ಇದರ ಹೆಚ್ಚಿನ ವಿವರಗಳು ಈ ಕೆಳಗಿನಂತಿವೆ. ಹುನೈನ್ ಯುದ್ಧದಲ್ಲಿ, ದೇವದೂತರ ಸೈನ್ಯವನ್ನು ಇರಿಸಲಾಗಿತ್ತು ಎಂದು ವ್ಯಾಖ್ಯಾನಿಸಲಾದ ಬಗ್ಗೆಯೂ ಉಲ್ಲೇಖವಿದೆ.

ಆದ್ದರಿಂದ, ಹುನೈನ್ ಯುದ್ಧದ ಉಲ್ಲೇಖದಲ್ಲಿ, ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ:

**ಸುಮ್ಮ ಅನ್‌ಝಲಲ್ಲಾಹು ಸಕೀನತಹೂ ಅಲಾ ರಸೂಲಿಹೀ ವ ಅಲಲ್ ಮುಮಿನೀನ ವ ಅನ್‌ಝಲ ಜುನೂದಲ್ಲಮ್ ತರೌಹಾ ವ ಅಝ್ಝಬಲ್ಲಝೀನ ಕಫರೂ ವ ಝಾಲಿಕ ಜಝಾಉಲ್ ಕಾಫಿರೀನ.** (ಅತ್ತೌಬ: 26)

ಅನಂತರ ಅಲ್ಲಾಹನು ತನ್ನ ಸಂದೇಶವಾಹಕನಿಗೂ ಸತ್ಯವಿಶ್ವಾಸಿಗಳಿಗೂ ತನ್ನ ಕಡೆಯಿಂದ ಮನಶ್ಶಾಂತಿಯನ್ನು ದಯಪಾಲಿಸಿದನು. ನೀವು ಕಂಡಿಲ್ಲದ ಕೆಲವು ಸೈನ್ಯಗಳನ್ನೂ ಅವನು ಇಳಿಸಿದನು. ಹಾಗೆ ಅವಿಶ್ವಾಸಿಗಳನ್ನು ಅವನು ಶಿಕ್ಷಿಸಿದನು. ಅವಿಶ್ವಾಸಿಗಳಿಗಿರುವ ಪ್ರತಿಫಲ ಅದೇ ಆಗಿದೆ.

ವ್ಯಾಖ್ಯಾನಕಾರರು ಮತ್ತು ಜೀವನಚರಿತ್ರೆಕಾರರು ಈ ಯುದ್ಧದಲ್ಲಿ ದೇವದೂತರು ಇಳಿಯುವಿಕೆಯ ಬಗ್ಗೆ ವಿಭಿನ್ನ ರೀತಿಯಲ್ಲಿ ಚರ್ಚಿಸಿದ್ದಾರೆ. ದೇವದೂತರು ಇಳಿಯುವಿಕೆಯು ಸತ್ಯವಿಶ್ವಾಸಿಗಳಿಗೆ ಕೇವಲ ಶುಭ ಸುದ್ದಿಯ ಸಂದೇಶವಾಗಿ ಮತ್ತು ಅವರ ಆಂತರಿಕ ಶಾಂತಿಗಾಗಿ ಎಂದು ಕೆಲವು ಜನರು ನಂಬುತ್ತಾರೆ, ಇಲ್ಲದಿದ್ದರೆ ದೇವದೂತರು ವಾಸ್ತವವಾಗಿ ಯುದ್ಧದಲ್ಲಿ ಭಾಗವಹಿಸಲಿಲ್ಲ. ಈ ಕಲ್ಪನೆಯು ಕೆಲವು ಅಧಿಕೃತ ಹದೀಸ್‌ಗಳಿಗೆ ವಿರುದ್ಧವಾಗಿದೆ. ದೇವದೂತರು ನಿಜವಾಗಿಯೂ ಯುದ್ಧದಲ್ಲಿ ಭಾಗವಹಿಸಿದ್ದರು ಎಂಬುದು ಅಧಿಕೃತ ವರದಿಗಳಿಂದ ಸಾಬೀತಾಗಿದೆ. ಆದಾಗ್ಯೂ, ಆದರೆ ಸಹಾಯಕ್ಕೆ ಒಬನೇ ದೇವದೂತ ಸಾಕಾಗಿದ್ದರೂ, ಸಾವಿರಾರು ದೇವದೂತರು ಏಕೆ ಇಳಿದರು ಎಂಬ ಒಂದು ಸಂದೇಹ ಇಲ್ಲಿ ಉದ್ಭವಿಸುತದ್ತೆ. ಯುದ್ಧದ ಸಮಯದಲ್ಲಿ ದೇವತೆದೂತರ ಇಳಿಯುವಿಕೆಯ ಬಗ್ಗೆ ಸಹೀಹ್ ಅಹದೀಸ್‌ನಲ್ಲಿರುವ ಹದೀಸ್‌ಗಳನ್ನು ಉಲ್ಲೇಖಿಸಿದ ನಂತರ, ಇಮಾಮ್ ಇಬ್ನ್ ಕಸೀರ್ ಹೀಗೆ ಬರೆದಿದ್ದಾರೆ, ಅಲ್ಲಾಹನ ಕಡೆಯಿಂದ ದೇವದೂತರ ಇಳಿಯುವಿಕೆ ಮತ್ತು ಮುಸ್ಲಿಮರಿಗೆ ಅವರ ಅಧಿಸೂಚನೆಯು ಅದು ಕೇವಲ ಒಂದು ಸುವಾರ್ತೆಯ ರೂಪದಲ್ಲಾಗಿತ್ತು, ಇಲ್ಲದಿದ್ದರೆ ಅಲ್ಲಾಹನು ಇದರ ಹೊರತಾಗಿಯೂ ತನ್ನ ಶತ್ರುಗಳ ವಿರುದ್ಧ ಮುಸ್ಲಿಮರಿಗೆ ಸಹಾಯ ಮಾಡಬಹುದಿತ್ತು, ಆದ್ದರಿಂದ ಅಲ್ಲಾಹನು ನುಡಿದನು, ಸಹಾಯವು ಕೇವಲ ಅಲ್ಲಾಹನಿಂದ ಮಾತ್ರ ಆಗಿದೆ ಮತ್ತು ಸೂರಾ ಮುಹಮ್ಮದ್‌ನಲ್ಲಿ ಅಲ್ಲಾಹನು ನುಡಿಯುತ್ತಾನೆ: ಸರ್ವಶಕ್ತನಾದ ಅಲ್ಲಾಹನು ಬಯಸಿದರೆ, ಅವನು ಸ್ವತಃ ಈ ಅವಿಶ್ವಾಸಿಗಳ ಮೇಲೆ ಸೇಡು ತೀರಿಸಿಕೊಳ್ಳುತ್ತಾನೆ, ಆದರೆ ಅವನು ಅವರನ್ನು ಪರೀಕ್ಷಿಸುತ್ತಾನೆ.
(ಅಲ್–ಫಝ್ಲ್ ಇಂಟರ್ನ್ಯಾಷನಲ್, ದಿನಾಂಕ ಜುಲೈ 24–29, 2023, ಪುಟಗಳು 8–9, ಖುತ್‌ಬ ಜುಮುಅ, ಜುಲೈ 7, 2023)

ಹಝ್ರತ್ ಮಸೀಹ್ ಮೌಊದ್(ಅ) ಸಹ ಈ ವಿಷಯವನ್ನು ಹೀಗೆ ಹೇಳಿದ್ದಾರೆ: ಸತ್ಯವಿಶ್ವಾಸಿಗಳ ಹೃದಯಗಳಿಗೆ ಶಾಂತಿ ಲಭಿಸಲಿಕ್ಕಾಗಿ ಮತ್ತು ಯುದ್ಧದಲ್ಲಿ ಅವರಿಗೆ ಯಾವುದೇ ಭಯವಿರದೇ ಇರಲಿಕ್ಕಾಗಿ ಪವಿತ್ರ ಖುರ್‌ಆನಿನಲ್ಲಿ ದೇವದೂತರ ಸಹಾಯದ ಶುಭ ಸುದ್ದಿ ಇದೆ. ಆದ್ದರಿಂದ, ಐದು ಸಾವಿರ ದೇವದೂತರೊಂದಿಗೆ ಸಹಾಯಕ್ಕಾಗಿ ಬರುವುದಾಗಿ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಸತ್ಯವಿಶ್ವಾಸಿಗಳಿಗೆ ಶುಭವಾರ್ತೆ ನೀಡಿದನು. ಅವರಿಗೆ ಸುವಾರ್ತೆಯಾಗಲಿ ಎಂಬ ಉದ್ದೇಶದಿಂದ ಈ ಸಂಖ್ಯೆಯನ್ನು ಹೆಚ್ಚಿಸಿ ತೋರಿಸಲಾಗಿತ್ತು. ಆದಾಗ್ಯೂ, ದೇವದೂತರಲ್ಲಿ ಒಬ್ಬ ದೇವದೂರಿಗೆ ತನ್ನ ಭಗವಂತನ ಆಜ್ಞೆಯಿಂದ ಭೂಮಿಯನ್ನು ಛಿದ್ರಗೊಳಿಸುವ ಸಾಮರ್ಥ್ಯವಿದೆ. ಆದ್ದರಿಂದ, ಐದು ಸಾವಿರವಲ್ಲ, ಐದರ ಅಗತ್ಯವೂ ಇಲ್ಲ, ಆದರೆ ಸರ್ವಶಕ್ತನಾದ ಅಲ್ಲಾಹನು ಅವರಿಗೆ ಮಹತ್ತಾದ ಸಹಾಯವನ್ನು ತೋರಿಸಲು ಬಯಸಿದನು, ಆದ್ದರಿಂದ ಅವನು ಸಹಾಯ ಮಾಡುವವರ ಸಮೃದ್ಧಿಯನ್ನು ತೋರಿಸುವ ಪದವನ್ನು ಆರಿಸಿಕೊಂಡನು ಮತ್ತು ಅದನ್ನೇ ಅವನು ಅರ್ಥೈಸಿದನು.(ಅತ್ತಬ್‌ಲೀಗ್, ಉರ್ದು ಅನುವಾದ, ರೂಹಾನಿ ಖಝಾಈನ್, ಸಂಪುಟ–5, ಪುಟ–448)

ಹಝ್ರತ್ ಮುಸ್ಲೆಹ್ ಮೌಊದ್(ರ) ತಫ್ಸಿರ್ ಅಲ್–ಸಗೀರ್‌ನಲ್ಲಿ ಇದರ ಬಗ್ಗೆ ಸಂಕ್ಷಿಪ್ತ ಟಿಪ್ಪಣಿಯನ್ನು ಸಹ ನೀಡಿದ್ದಾರೆ. ಸೂರಾ ಅಲಿ ಇಮ್ರಾನ್‌ನ 127 ನೇ ವಚನದ ಅಡಿಟಿಪ್ಪಣಿಯಲ್ಲಿ ಅವರು ಹೀಗೆ ಬರೆದಿದ್ದಾರೆ, "ದೇವದೂತರ ಉಲ್ಲೇಖವು ಕನಸಿನಲ್ಲಿ ಅಥವಾ ದೈವದರ್ಶನದಲ್ಲಿ (ಕಶಫ್) ಶುಭ ಸುದ್ದಿಯನ್ನು ಸ್ವೀಕರಿಸುವುದರಿಂದ ವ್ಯಕ್ತಿಯ ಧೈರ್ಯವನ್ನು ಹೆಚ್ಚಿಸುತ್ತದೆ ಎಂಬ ಕಾರಣಕ್ಕಾಗಿ ಮಾತ್ರ. ಇಲ್ಲದಿದ್ದರೆ,

ನಿಜವಾದ ಅರ್ಥವೇಂದರೆ ಸರ್ವಶಕ್ತನಾದ ಅಲ್ಲಾಹನು ಸಹಾಯ ಮಾಡುತ್ತಾನೆ." (ತಫ್ಸಿರ್ ಅಲ್-ಸಗ್ಗೀರ್, ಪುಟ 96, ಸೂರಾ ಆಲಿ-ಇಮ್ರಾನ್, ವಚನ: 127) ಅಂದರೆ, ಇದು ಕೂಡ ಒಂದು ದಿವ್ಯಜ್ಞಾನದ ಪ್ರಕಟವಾಗಿತ್ತು.

ಮತ್ತೊಂದು ಸ್ಥಳದಲ್ಲಿ ಅವರು(ರ) ಹೀಗೆ ಹೇಳುತ್ತಾರೆ:

"ಸಾಯಲು ಸಿದ್ಧವಾಗಿರುವ ವ್ಯಕ್ತಿಯನ್ನು ಯಾರೂ ಕೊಲ್ಲಲು ಸಾಧ್ಯವಿಲ್ಲ ಎಂಬುದನ್ನು ಚೆನ್ನಾಗಿ ನೆನಪಿಡಿ. ಪ್ರವಾದಿಗಳ ಗುಂಪು ಮಾತ್ರ ನಿಜವಾಗಿಯೂ ಸಾವನ್ನು ಸ್ವೀಕರಿಸುತ್ತದೆ. ಹಾಗಾದರೆ ಅವರನ್ನು ಕೊಲ್ಲಲು ಯಾರಾದರೂ ಇದ್ದಾರೆಯೇ? ಖಂಡಿತ ಇಲ್ಲ. ಶಾಶ್ವತ ಜೀವನವನ್ನು ಪಡೆಯುವ ಸಾರವೆಂದರೆ ಒಬ್ಬ ವ್ಯಕ್ತಿಯು ಸರ್ವಶಕ್ತನಾದ ಅಲ್ಲಾಹನ ಸಲುವಾಗಿ ಸಾವನ್ನು ಸ್ವೀಕರಿಸುತ್ತಾನೆ, ಮತ್ತು ಒಬ್ಬ ವ್ಯಕ್ತಿಯು ಈ ಉದ್ದೇಶದಿಂದ ಎದ್ದುನಿಂತಾಗ, ಸರ್ವಶಕ್ತನಾದ ಅಲ್ಲಾಹನ ದೇವದೂತರು ಅವನನ್ನು ಪುನರುಜ್ಜೀವನಗೊಳಿಸಲು ಎದ್ದು ನಿಲ್ಲುತ್ತಾರೆ. ಅದು ಕುಸ್ತಿ ಪಂದ್ಯ ಪ್ರಾರಂಭವಾದಂತೆ. ಒಬ್ಬ ವ್ಯಕ್ತಿಯು ಸರ್ವಶಕ್ತನಾದ ಅಲ್ಲಾಹನ ಮಾರ್ಗದಲ್ಲಿ ಸಾಯಬೇಕೆಂದು ಒತ್ತಾಯಿಸುತ್ತಾನೆ, ಆದರೆ ದೇವದೂತರು ಅವನನ್ನು ಜೀವಂತವಾಗಿರಿಸಬೇಕೆಂದು ಒತ್ತಾಯಿಸುತ್ತಾರೆ.

ದೇವರ ದಾಸನು ನಾನು ಸರ್ವಶಕ್ತನಾದ ಅಲ್ಲಾಹನಿಗಾಗಿ ಸಾಯಲು ಬಯಸುತ್ತೇನೆ ಎಂದು ಹೇಳಿದಾಗ, ಸರ್ವಶಕ್ತನಾದ ಅಲ್ಲಾಹನ ಎಲ್ಲಾ ದೇವದೂತರು ನಾವು ಅವನನ್ನು ಸಾಯಲು ಬಿಡುವುದಿಲ್ಲ ಎಂದು ಹೇಳುತ್ತಾರೆ, ಮತ್ತು ಅಂತಿಮವಾಗಿ ದೇವದೂತರು ಗೆಲ್ಲುತ್ತಾರೆ. ದಾಸನು ಸಾಯಲು ಬಯಸುತ್ತಾನೆ. ಅದಕ್ಕಾಗಿ ಅವನು ತನ್ನನ್ನು ತಾನು ಅಂತಹ ಸಂದರ್ಭಗಳಲ್ಲಿ ಹಾಕಿಕೊಳ್ಳುತ್ತಾನೆ, ಅದು ಸಾವಿಗೆ ಕಾರಣವಾಗುತ್ತದೆ, ಆದರೆ ಅವನು ಸಾಯುವುದಿಲ್ಲ..... ಹುನೈನ್‌ನ ಘಟನೆಯನ್ನು ನೋಡಿ. ಶತ್ರು ದಾಳಿ ಮಾಡಿ ಮುನ್ನಡೆದಾಗ, ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಕೇವಲ ಹನ್ನೆರಡು ಜನರು ಇದ್ದರು. ಉಳಿದವರೆಲ್ಲರೂ ಶತ್ರುಗಳ ಬಿಲ್ಲುಗಾರಿಕೆಯಿಂದ ಚದುರಿಹೋಗಿದ್ದರು. ಆ ಸಮಯದಲ್ಲಿ, ಹಝ್ರತ್ ಅಬ್ಬಾಸ್(ರ.ಅ) ಹೇಳಿದರು: "ಹುಝೂರ್!! ದಯವಿಟ್ಟು ಸ್ವಲ್ಪ ಹಿಂದೆ ಸರಿಯಿರಿ, ಆದರೆ ಹಝ್ರತ್ ಪೈಗಂಬರ್(ಸ.ಅ)ರು ತಮ್ಮ ಕುದುರೆಯನ್ನು ತಿರುಗಿಸಿ, ಮುಂದೆ ಸಾಗುತ್ತಾ ಹೀಗೆ ಹೇಳುತ್ತಿದ್ದರು, **ಅನನ್ನನಿಯಗಯು ಲಾ ಕರ್ಝಿಬ್, ಅನಾ ಇಬ್ನು ಅಬ್ದುಲ್ ಮುತ್ತಲ್ಲಿಬ್** ಅಂದರೆ: ನಾನು ಅಲ್ಲಾಹನ ನಿಜವಾದ ಪ್ರವಾದಿಯಾಗಿದ್ದೇನೆ, ನಾನು ನನ್ನ ಬೆನ್ನು ಹೇಗೆ ತಿರುಗಿಸಲಿ?" ಇದು ಮಾನವೀಯತೆಯನ್ನು ಸರ್ವಶಕ್ತನಾದ ಅಲ್ಲಾಹನ ಮುಂದೆ ತರುವ ಉದ್ದೇಶದ ಹೇಳಿಕೆಯಾಗಿತ್ತು. ನಾಲ್ಕು ಸಾವಿರ ಬಿಲ್ಲುಗಾರರ ಮುಂದೆ ಒಬ್ಬ ಮನುಷ್ಯ "ನಾನು ಇಲ್ಲಿಂದ ದೂರ ಸರಿಯಲು ಸಾಧ್ಯವಿಲ್ಲ" ಎಂದು ಹೇಳಿದಾಗ, ಅದು ಮನುಷ್ಯನಲ್ಲ, ಬದಲಿಗೆ ಅಲ್ಲಾಹನು ಮಾತನಾಡುತ್ತಿದ್ದನು. ಹಝ್ರತ್ ಪೈಗಂಬರ್(ಸ.ಅ) ಆ ಸಣದರ್ಭದಲ್ಲಿ ಹೇಳಿದರು: "ನಾನು ಅಬ್ದುಲ್ ಮುತ್ತಲಿಬ್ ಅವರ ಮಗ." ನಾನು ಕೂಡ ಒಬ್ಬ ಮನುಷ್ಯ. ಆದ್ದರಿಂದ ಹಝ್ರತ್ ಪೈಗಂಬರ್(ಸ.ಅ)ರು "ನಾನು ಅಲ್ಲಾಹನ ಮಾರ್ಗದಲ್ಲಿ ಸಾಯಲು ಬಯಸುತ್ತೇನೆ" ಎಂದು ಹೇಳಿದಾಗ, ಅಲ್ಲಾಹನ ದೇವದೂತರು ಇಳಿದರು ಮತ್ತು ಹುನೈನ್‌ನ ಸೋಲು ವಿಜಯವಾಗಿ ಮಾರ್ಪಟ್ಟಿತು ಮತ್ತು ಅವರು(ಸ) ಯುದ್ಧಭೂಮಿಯಿಂದ ವಿಜಯಶಾಲಿಯಾಗಿ ಹಿಂದಿರುಗಿದರು."

(ಖಿತ್‌ಬಾತೆ ಶೂರಾ, ಸಂಪುಟ 1, ಪುಟಗಳು 612-613, ಮಜ್ಲಿಸ್-ಎ-ಮುಶಾವಿರತ್, 1935, ನಝ್ಝಾರತ್ ನಶ್ರೂ ಇಶಾಅತ್, ಖಾದಿಯಾನ್, 2013)

ಶತ್ರುವಿನ ಸೋಲು ಮತ್ತು ತಪ್ಪಿಸಿಕೊಳ್ಳುವಿಕೆಯ ವಿವರಣೆ ಈಗಾಗಲೇ ವಿವರಿಸಲಾಗಿದೆ: ಅಂದರೆ ಹಝ್ರತ್ ಪೈಗಂಬರ್(ಸ) ಅನ್ಸಾರಿಗಳನ್ನು ಕರೆದಾಗ ಅವರು ಹಿಂದಿರುಗಿ ನಂತರ ಬಹಳ ಉತ್ಸಾಹದಿಂದ ಹೋರಾಡಲು ಪ್ರಾರಂಭಿಸಿದಾಗ, ಹಝ್ರತ್ ಪೈಗಂಬರ್(ಸ) ಪ್ರಾರ್ಥಿಸಿ ತಮ್ಮ ಕೈಯಿಂದ ಅವಿಶ್ವಾಸಿಗಳ ಮೇಲೆ ಒಂದು ಹಿಡಿ ಕಲ್ಲುಗಳನ್ನು ಎಸೆದರು, ಇದರ ಪರಿಣಾಮವಾಗಿ ಇಂದಿನ ವರೆಗೂ ಹಝ್ರತ್ ಪೈಗಂಬರ್(ಸ)ರು ಯಾವುದೇ ಯುದ್ಧೋಚಿತ ರಾಷ್ಟ್ರವನ್ನು ಎದುರಿಸಿಲ್ಲ ನಾವು ಅವರನ್ನು ಎದುರಿಸಿದರೆ, ಯುದ್ಧ ಎಂದರೇನು? ಎಂದು ಅವರಿಗೆ ತಿಳಿಯುತ್ತದೆ ಎಂದು ಹೇಳುತ್ತಿದ್ದ ಬನೂ ಹವಾಝಿನ್, ವಾಸ್ತವವಾಗಿ ಅವರು ಅರೇಬಿಯಾದ ಅತ್ಯಂತ ಶಕ್ತಿಶಾಲಿ ಗೋತ್ರಗಳಲ್ಲಿ ಒಬ್ಬರಾಗಿದ್ದರು. ಇದು ಕೇವಲ ಮಾತಾಗಿರಲಿಲ್ಲ, ಬದಲಿಗೆ ಅದು ಪ್ರಬಲ ಗೋತ್ರವಾಗಿತ್ತು. ಅವರು ಅಲ್ಪಾವಧಿಯಲ್ಲಿಯೇ ಸೋಲಿಸಲ್ಪಟ್ಟರು ಮತ್ತು ಓಡಿಹೋಗಲು ಪ್ರಾರಂಭಿಸಿದರು. ಅವರಿಗೆ ತಮ್ಮ ಮಡದಿ, ಮಕ್ಕಳು ಮತ್ತು ಜಾನುವಾರುಗಳ ಬಗ್ಗೆ ಯಾರಿಗೂ ಪರಿಜ್ಞಾನವಿರಲಿಲ್ಲ. ಮುಸ್ಲಿಮರಿಂದ ಅನೇಕ ಜನರು ಕೊಲ್ಲಲ್ಪಟ್ಟರು ಮತ್ತು ಸಾವಿರಾರು ಜನರನ್ನು ಸೆರೆಹಿಡಿಯಲಾಯಿತು, ಮತ್ತು ಓಡಿಹೋದವರಲ್ಲಿ ಹೆಚ್ಚಿನ ಸಂಖ್ಯೆಯವರು ಅವ್ತಾಸ್ ಕಡೆಗೆ ಓಡಿಹೋದರು. (ಶರ್ಹ ಝುರ್ಕಾನಿ, ಸಂಪುಟ-3, ಪುಟಗಳು 530-531 ಮತ್ತು ಝುರ್ಕಾನಿ, ಸಂಪುಟ 4, ಪುಟಗಳು 19, ದಾರುಲ್ ಕುತುಬ್ ಅಲ್-ಇಲ್ಮಿಯಾ ಬೈರುತ್ 1996)

ಈ ಯುದ್ಧದಲ್ಲಿ ಹವಾಝಿನ್‌ನ ನೂರಾರು ಜನರು ಕೊಲ್ಲಲ್ಪಟ್ಟರು. ಹಝ್ರತ್ ಅಬು ತಲ್ಹಾ(ರ.ಅ) ಇಪ್ಪತ್ತು ಮುಶ್ರಿಕೀನರನ್ನು ವಧಿಸಿದರು. ಅದೇ ರೀತಿ, ಅವ್ತಾಸ್ ದಂಡಯಾತ್ರೆಯಲ್ಲಿ ಮುನ್ನೂರು ಬಹುದೇವತಾವಾದಿಗಳು ಕೊಲ್ಲಲ್ಪಟ್ಟರು. (ದಾಎರಾ ಮಾ'ರಿಫ್, ಸೀರತ್ ಮುಹಮ್ಮದ್ ರಸೂಲುಲ್ಲಾ(ಸ.ಅ), ಸಂಪುಟ 9, ಪುಟ 285, ಬಾಝ್ಮ್ ಇಕ್ಬಾಲ್ ಲಾಹೋರ್)

ಹವಾಝಿನ್‌ನ ಪಲಾಯನದ ಹೊರತಾಗಿಯೂ, ಸಕೀಫ್‌ನ ಯೋಧರು ದೃಢವಾಗಿ ಉಳಿದರು. ಸಕೀಫ್ ಗೋತ್ರವು ದೃಢವಾಗಿ ಉಳಿದು ಅವರ ಎಪ್ಪತ್ತು ಪುರುಷರು ಕೊಲ್ಲಲ್ಪಡುವವರೆಗೂ ಧೈರ್ಯದಿಂದ ಹೋರಾಡಿದರು. ಅವರ ಕೊನೆಯ ಧ್ವಜಧಾರಿ ಉಸ್ಮಾನ್ ಬಿನ್ ಅಬ್ದುಲ್ಲಾ ಆಗಿದ್ದನು. ಅವನು ಕೊಲ್ಲಲ್ಪಟ್ಟಾಗ, ಸಕೀಫ್ ಕೂಡ ಓಡಿಹೋದರು. ಉಸ್ಮಾನ್‌ನ ಹತ್ಯೆಯ ಸುದ್ದಿ ಹಝ್ರತ್ ಪೈಗಂಬರ್(ಸ) ಅವರನ್ನು ತಲುಪಿದಾಗ, ಅವರು ಇಸ್ಲಾಂನ ಈ ಶತ್ರುವಿನ ಬಗ್ಗೆ ಹೇಳಿದರು: ಅಲ್ಲಾಹನು ಅವನನ್ನು ತನ್ನ ಕರುಣೆಯಿಂದ ದೂರವಿಡಲಿ. ಅವನಿಗೆ ಖುರೈಷಿಗಳ ಮೇಲೆ ದ್ವೇಷವಿತ್ತು, ಆದರೆ ಅವರು ಆತನನ್ನು ವಧಿಸಿದ ಹಝ್ರತ್ ಅಬ್ದುಲ್ಲಾ ಬಿನ್ ಅಬಿ ಉಮಯ್ಯನಿಗೆ ಕರುಣೆಗಾಗಿ ಪ್ರಾರ್ಥಿಸಿದರು ಮತ್ತು ಹಝ್ರತ್ ಅಬ್ದುಲ್ಲಾ ಹೇಳಿದರು, "ಸರ್ವಶಕ್ತನಾದ ಅಲ್ಲಾಹನು ಈ ಸ್ಥಿತಿಯಲ್ಲಿ ನನಗೆ ಹುತಾತ್ಮತೆಯನ್ನು ನೀಡಲಿ ಎಂದು ನಾನು ಭಾವಿಸುತ್ತೇನೆ." ಕೊನೆಗೆ ಅವರು ತಾಯಿಫ್ ಮುತ್ತಿಗೆಯ ಸಮಯದಲ್ಲಿ ಹುತಾತ್ಮರಾದರು. ಕೆಲವು ವರದಿಗಳ ಪ್ರಕಾರ, ಕೊನೆಯ ಧ್ವಜಧಾರಿ ಉಸ್ಮಾನ್ ಬಿನ್ ಅಬ್ದುಲ್ಲಾ ಅವರನ್ನು ಹಝ್ರತ್ ಅಲಿ(ರ) ವಧಿಸಿದರು ಎಂದು ಹೇಳಲಾಗಿದೆ.

(ಮಗಾಝಿ ಅಲ್-ವಾಕಿದಿ, ಸಂಪುಟ-3, ಪುಟಗಳು. 911-912, ಆಲಮ್ ಅಲ್-ಕುತುಬ್, 1984) (ತಬಕಾತ್ ಇಬ್ನ್ ಸಅದ್, ಸಂಪುಟ. 6, ಪುಟ. 55, ದಾರುಲ್ ಕುತುಬ್ ಅಲ್-ಇಲ್ಮಿಯಾ, ಬೈರುತ್) (ಶರ್ಹ ಝುರ್ಕಾನಿ, ಸಂಪುಟ. 3, ಪುಟ. 531, ದಾರುಲ್-ಕುತುಬ್ ಅಲ್-ಇಲ್ಮಿಯಾ) (ಸಬ್ಬುಲ್ ಹುದಾ ವರ್‍ರಶಾದ್, ಸೀರತ್ ಖೈರುಲ್ ಇಬಾದ್, ಸಂಪುಟ-5, ಪುಟ-334, ದಾರ್ ಅಲ್-ಕುತುಬ್ ಅಲ್-ಇಲ್ಮಿಯಾ) ಆದರೆ ಮೊದಲನೆಯದು ಹೆಚ್ಚು ವಿವರವಾಗಿದೆ.

ಈ ಯುದ್ಧದಲ್ಲಿ ನಾಲ್ಕು ಸಹಾಬಿಗಳು ಶಹೀದ್ ಆದರು. ಅವರ ಹೆಸರುಗಳು ಹಝ್ರತ್ ಉಮ್ ಅಯ್ಮನ್ ಅವರ ಪುತ್ರ ಅಯ್ಮನ್ ಬಿನ್ ಉಬೈದ್. ಈ ಉಮ್ಮೆ ಅಯ್ಮಾನ್ ಹಝ್ರತ್ ಪೈಗಂಬರ್(ಸ) ರವರ ದತ್ತು ತಾಯಿಯಾಗಿದ್ದರು. ಸುರಖಾ ಬಿನ್ ಹಾರಿಸ್. ಅವರು ಅನ್ಸಾರಿ ಸಹಾಬಿಯಾಗಿದ್ದರು. ಅವರ ಪುತ್ರ ಹಾರಿಸಾ ಬಿನ್ ಸುರಖಾ ಬದ್ರ್ ಕದನದಲ್ಲಿ ಶಹೀದ್ ಆದರು. ಯಝೀದ್ ಬಿನ್ ಝಮ್‌ಅ ಇಸ್ಲಾಂಗೆ ಮತಾಂತರಗೊಂಡ ಆರಂಭಿಕ ವ್ಯಕ್ತಿಯಾಗಿದ್ದು, ಇಸ್ಲಾಂ ಪೂರ್ವದ ಅವಧಿಯಲ್ಲಿಯೂ ಖುರೈಷಿಗಳಲ್ಲಿ ಉನ್ನತ ಸ್ಥಾನವನ್ನು ಹೊಂದಿದ್ದರು. ಖುರೈಷಿಗಳು ಪ್ರಮುಖ ವಿಷಯಗಳಲ್ಲಿ ಅವರನ್ನು ಸಂಪರ್ಕಿಸುತ್ತಿದ್ದರು. ಅವರು ಉಮ್ಮುಲ್ ಮುಮಿನೀನ್ ಉಮ್ಮೆ ಸಲಮಾ ಅವರ ಸೋದರಳಿಯರಾಗಿದ್ದರು. ಅವರ ಕುದುರೆ ಯುದ್ಧಭೂಮಿಯಲ್ಲಿ ಓಡಿದಾಗ ಅವರು ಶಹೀದ್ ಆದರು. ಅವರು ಕುದುರೆಯಿಂದ ಕೆಳಗೆ ಬಿದ್ದು ಅದರ ಕೆಳಗೆ ಬಂದರು. ಕೆಲವರ ಪ್ರಕಾರ, ಅವರ ಶಹಾದತ್ ತಾಯಿಫ್ ಯುದ್ಧದಲ್ಲಿ ನಡೆಯಿತು, ಅದನ್ನು ನಂತರ ಉಲ್ಲೇಖಿಸಲಾಗುವುದು. ನಾಲ್ಕನೆಯವರು ಅಬು ಆಮಿರ್, ಅವರ ವಿವರಗಳನ್ನು ಅವ್ತಾಸ್ ದಂಡಯಾತ್ರೆಯಲ್ಲಿ ನೀಡಲಾಗುವುದು. (ದಾಎರಾ ಮಾ'ರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾಹ್(ಸ), ಸಂಪುಟ-9, ಪುಟ-284. ಬಾಜ್ಮ್ ಇಕ್ಬಾಲ್ ಲಾಹೋರ್) (ಅಸದುಲ್ ಗಾಬ, ಯಝೀದ್ ಇಬ್ನ್ ಝಮ್‌ಅ, ಸಂಪುಟ-5, ಪುಟ-453, ದಾರುಲ್ ಕುತುಬ್ ಅಲ್-ಇಲ್ಮಿಯ ಬೈರುತ್ 2003)

ಹಝ್ರತ್ ಆಯಿಝ್(ರ) ಹೇಳುತ್ತಾರೆ: ಹುನೈನ್ ಯುದ್ಧದಲ್ಲಿ, ನನ್ನ ಹಣೆಗೆ ಬಾಣವೊಂದು ಬಡಿಯಿತು ಮತ್ತು ರಕ್ತವು ನನ್ನ ಮುಖ ಮತ್ತು ಎದೆಯ ಕೆಳಗೆ ಹರಿಯಲು ಪ್ರಾರಂಭಿಸಿತು. ಹಝ್ರತ್ ಪೈಗಂಬರ್(ಸ)ರು ತಮ್ಮ ಅನುಗ್ರಹದಾಯಕ ಹಸ್ತವನ್ನು ನನ್ನ ಮುಖ ಮತ್ತು ಎದೆಯಿಂದ ನನ್ನ ಹೊಟ್ಟೆಗೆ ಹಾಯಿಸಿದರು ಮತ್ತು ಸ್ವತಃ ರಕ್ತವನ್ನು ಒರೆಸಿದರು, ಅದು ಆ ಕ್ಷಣದಲ್ಲಿ ರಕ್ತಸ್ರಾವವನ್ನು ನಿಲ್ಲಿಸಿತು. ಅದರ ನಂತರ, ಅವರು ನನಗಾಗಿ ಪ್ರಾರ್ಥಿಸಿದರು. ಕೆಲವು ವರದಿಗಾರರು ಹಝ್ರತ್ ಪೈಗಂಬರ್(ಸ) ರ ಅನುಗ್ರಹಿಸಿದ ಹಸ್ತಗಳ ಗುರುತುಗಳು ನಂತರವೂ ಅವರ ದೇಹದ ಮೇಲೆ ಉಳಿದಿದ್ದವು ಎಂದು ಹೇಳುತ್ತಾರೆ.

(ಸೀರತ್ ಅಲ್–ಹಲಾಬಿಯಾ, ಸಂಪುಟ–3, ಪುಟ–162, ದಾರುಲ್ ಕುತುಬ್ ಅಲ್–ಇಲ್ಮಿಯ್ಯಾ, ಬೈರುತ್ 2002) (ಶರ್ಹ ಅಲ್–ಝುರ್ಕಾನಿ, ಸಂಪುಟ–5, ಪುಟ–457, ದಾರುಲ್ ಕುತುಬ್ ಅಲ್–ಇಲ್ಮಿಯ್ಯಾ, 1996)

ಅಶ್ರಮ ದಳದ ಸೇನಾಧಿಪತಿಯಾಗಿದ್ದ ಹಝ್ರತ್ ಖಾಲಿದ್ ಬಿನ್ ವಲೀದ್(ರ) ಆರಂಭಿಕ ಹಂತದಲ್ಲಿ ತೀವ್ರವಾಗಿ ಗಾಯಗೊಂಡರು. ಇದನ್ನು ಮೊದಲೇ ಉಲ್ಲೇಖಿಸಲಾಗಿದೆ. ಸೈನ್ಯವು ಚದುರಿಹೋದಾಗ, ಅವರು ಕೆಳಗೆ ಬಿದ್ದರು. ವರದಿಗಾರರು ಹೇಳುತ್ತಾರೆ: ಅವಿಶ್ವಾಸಿಗಳು ಸೋಲಿಸಲ್ಪಟ್ಟಾಗ ಮತ್ತು ಮುಸ್ಲಿಮರು ತಮ್ಮ ತಮ್ಮ ಡೇರೆಗಳಿಗೆ ಹೋದಾಗ, ಹಝ್ರತ್ ಪೈಗಂಬರ್(ಸ)ರು ಜನರ ನಡುವೆ ನಡೆದು "ನನ್ನನ್ನು ಯಾರು ಖಾಲಿದ್ ಬಿನ್ ವಲೀದ್ ಬಳಿಗೆ ಕರೆದೊಯ್ಯುತ್ತಾರೆ?" ಎಂದು ಕೇಳುವುದನ್ನು ನಾನು ನೋಡಿದೆ. ಅವರು(ಸ) ಅವರನ್ನು ತಲುಪಿದಾಗ, ಖಾಲಿದ್ ಒಂದು ತಡಿಯ ಮೇಲೆ ಒರಗಿದ್ದರು. ಹಝ್ರತ್ ಪೈಗಂಬರ್(ಸ) ಖಾಲಿದ್ ಅವರ ಪಕ್ಕದಲ್ಲಿ ಕುಳಿತು, ಗಾಯವನ್ನು ನೋಡಿ, ಅದಕ್ಕೆ ತಮ್ಮ ಲಾಲಾರಸವನ್ನು ಹಚ್ಚಿದರು, ಅದು ಅವರನ್ನು ಗುಣಪಡಿಸಿತು. ಇದಲ್ಲದೆ, ಹಝ್ರತ್ ಅಬ್ದುಲ್ಲಾ ಬಿನ್ ಅಬಿ ಔಫಾ(ರ.ಅ), ಹಝ್ರತ್ ಅಬುಬಕರ್ ಸಿದ್ದಿಕ್(ರ), ಹಝ್ರತ್ ಉಮರ್(ರ), ಹಝ್ರತ್ ಉಸ್ಮಾನ್(ರ) ಮತ್ತು ಹಝ್ರತ್ ಅಲಿ(ರ) ಸಹ ಗಾಯಗೊಂಡಿದ್ದರು.

(ಮೂಲ: ದಾಏರಾ ಮಾರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾಹ್(ಸ), ಸಂಪುಟ 9, ಪುಟ 279, ಬಾಜ್ಮ್ ಇಕ್ಬಾಲ್ ಲಾಹೋರ್) (ಸೀರತ್ ಅಲ್–ಹಲಾಬಿಯಾಹ್, ಸಂಪುಟ–3, ಪುಟ–162, ದಾರುಲ್ ಕುತುಬ್ ಅಲ್–ಇಲ್ಮಿಯ್ಯಾ ಬೈರುತ್ 2002) (ಅಸ್ಸೀರತುನ್ನಬವೀಯಾ ಅಸ್ಸಹೀಹ ಮಹಾವಿಲುತ್ತಬೀಖ್ ಖವಾಎದುಲ್ ಮುಹದ್ದಿಸೀನ್, ಭಾಗ–2, ಪುಟ–504, ಮಕ್ತಾಬಾ ಅಲ್–ಉಲುಮ್ ವಲ್–ಹಕಮ್ 1914)

ಅವರು ಹುನೈನ್ ವಿಜಯದ ಶುಭವಾರ್ತೆಯನ್ನು ಮಕ್ಕಾ ಮತ್ತು ಮದೀನಾದ ಜನರಿಗೆ ಕಳುಹಿಸಿದರು. ಆರಂಭದಲ್ಲಿ, ಕೆಲವು ಮುಸ್ಲಿಮರು ಹುನೈನ್ ಕ್ಷೇತ್ರದಿಂದ ಓಡಿಹೋದಾಗ, ಅವರಲ್ಲಿ ಕೆಲವರು ಮಕ್ಕಾಗೆ ಹೋಗಿ ಮುಸ್ಲಿಮರು ಸೋಲಿಸಲ್ಪಟ್ಟರು ಮತ್ತು ಮುಹಮ್ಮದ್(ಸ.ಅ) ಕೊಲ್ಲಲ್ಪಟ್ಟರು ಎಂದು ಹೇಳಿದರು. ಕಪಟವಿಶ್ವಾಸಿಗಳು ಮತ್ತು ಮಕ್ಕಾದಲ್ಲಿ ತಮ್ಮ ಹೃದಯದಲ್ಲಿ ದ್ವೇಷ ಹೊಂದಿದ್ದವರು ಈ ಸುದ್ದಿಯಿಂದ ತುಂಬಾ ಸಂತೋಷಪಟ್ಟರು ಮತ್ತು ಈಗ ಅರಬ್ಬರು ತಮ್ಮ ಪೂರ್ವಜರ ಧರ್ಮಕ್ಕೆ ಮರಳುತ್ತಾರೆ ಎಂದು ಹೇಳಿದರು. ಈ ಸಂದರ್ಭದಲ್ಲಿ, ಮಕ್ಕಾದ ಅಮೀರ್ ಆಗಿದ್ದ ಅತ್ತಾಬ್ ಬಿನ್ ಆಸೀದ್ ಅವರು ಹೆಚ್ಚಿನ ಧೈರ್ಯ ಮತ್ತು ಶೌರ್ಯವನ್ನು ಪ್ರದರ್ಶಿಸಿದರು ಮತ್ತು ಮಕ್ಕಾದ ಜನರನ್ನು ಉದ್ದೇಶಿಸಿ ಹೀಗೆ ಹೇಳಿದರು: **ಇನ್ ಖುತಿಲ ಮುಹಮ್ಮದುನ್ ಫಇನ್ನ ದೀನಲ್ಲಾಹಿ ಖಾಯಿಮುನ್, ವಲ್ಲಝೀ ಯಅ್‌ಬುದುಹು ಮುಹಮ್ಮದುನ್ ಹೈಯುನ್ ಲಾ ಯಮೂತು**– ಮುಹಮ್ಮದ್(ಸ) ಹುತಾತ್ಮರಾದರೂ, ಅಲ್ಲಾಹನ ಧರ್ಮವು ಶಾಶ್ವತವಾಗಿ ಉಳಿಯುತ್ತದೆ ಮತ್ತು ಮುಹಮ್ಮದ್(ಸ) ಆರಾಧಿಸುತ್ತಿದ್ದ ವ್ಯಕ್ತಿತ್ವವು (ಅಲ್ಲಾಹನು) ಶಾಶ್ವತವಾಗಿ ಉಳಿಯುತ್ತಾನೆ. ಅವನು ಜೀವಂತವಾಗಿದ್ದಾನೆ ಮತ್ತು ಜೀವಂತವಾಗಿರುತ್ತಾನೆ ಮತ್ತು ಎಂದಿಗೂ ಸಾಯುವುದಿಲ್ಲ. ಮತ್ತು ಮುಸ್ಲಿಮರು ಸೋತಿದ್ದಾರೆ ಮತ್ತು ಬನು ಹವಾಝಿನ್‌ಗಳು ಭೀಕರವಾಗಿ ಸೋತು ಓಡಿಹೋಗಿದ್ದಾರೆ ಎಂಬ ಶುಭ ಸುದ್ದಿ ಹುನೈನ್‌ನಿಂದ ಬಂದು ಸ್ವಲ್ಪ ಸಮಯವಾಗಿತ್ತು. ಅದೇ ರೀತಿ, ಈ ಸುದ್ದಿ ಮದೀನಾವನ್ನು ಮೊದಲೇ ತಲುಪಿತ್ತು. ಸೋಲಿನ ಸುದ್ದಿ ಮೊದಲೇ ತಲುಪಿತ್ತು, ಯಾರೋ ಅದನ್ನು ತಿಳಿಸಿದ್ದರು. ಅಲ್ಲಿ, ಹಝ್ರತ್ ಪೈಗಂಬರ್(ಸ)ರು ವಿಜಯದ ಶುಭ ಸುದ್ದಿಯೊಂದಿಗೆ ಹಝ್ರತ್ ನಹೀಕ್ ಬಿನ್ ಅವ್ಸ್ ಅವರನ್ನು ಕಳುಹಿಸಿದರು. ಅವರು ಹೇಳುತ್ತಾರೆ: ನಾನು ಬೆಳಗಿನ ಜಾವ ಹೊರಟುಹೋದೆ. ದಾರಿಯಲ್ಲಿ, ಮುಹಮ್ಮದ್(ಸ) ರ ಸೈನ್ಯವು ಹಿಂದೆಂದೂ ಅನುಭವಿಸದ ಸೋಲನ್ನು ಅನುಭವಿಸಿದೆ ಮತ್ತು ಮಾಲಿಕ್ ಬಿನ್ ಔಫ್ ಅವರ ಸೈನ್ಯವು ಮುಹಮ್ಮದ್(ಸ) ರ ಸೈನ್ಯವನ್ನು ಸೋಲಿಸಿದೆ ಎಂದು ಜನರು ಹೇಳುತ್ತಿದ್ದರು. ನಾನು ಹೇಳಿದೆ, "ಇದೆಲ್ಲವೂ ಸುಳ್ಳು ಸುದ್ದಿಯಾಗಿದೆ, ಬದಲಿಗೆ ಅಲ್ಲಾಹನು ತನ್ನ ಪ್ರವಾದಿಗೆ ಜಯವನ್ನು ನೀಡಿದ್ದಾನೆ ಮತ್ತು ಅವರ ಮಹಿಳೆಯರು ಮತ್ತು ಮಕ್ಕಳನ್ನು ಸೆರೆಯಾಳುಗಳಾಗಿ ನೀಡಿದ್ದಾನೆ." ಈ ಸುದ್ದಿಯನ್ನು ನೀಡುವಾಗ ನಾನು ಮೂರು ದಿನಗಳಲ್ಲಿ ಮದೀನಾವನ್ನು ತಲುಪಿದೆ ಮತ್ತು ನಾನು ಹಿಂದೆಂದೂ ಇಷ್ಟೊಂದು ಸವಾರಿ ಮಾಡಿರಲಿಲ್ಲ, ಅಂದರೆ, ನಾನು ನಿರಂತರವಾಗಿ ಹೆಚ್ಚಿನ ವೇಗದಲ್ಲಿ ಪ್ರಯಾಣಿಸುತ್ತಿದ್ದೆ ಎಂದು ಅವರು ಹೇಳುತ್ತಾರೆ. ನಂತರ, ನಾನು ಮದೀನಾವನ್ನು ತಲುಪಿದಾಗ, ಮುಹಮ್ಮದ್(ಸ) ಸರ್ವಶಕ್ತನಾದ ಅಲ್ಲಾಹನ ಕೃಪೆಯಿಂದ ಆರೋಗ್ಯವಾಗಿದ್ದಾರೆ ಮತ್ತು ಮುಸ್ಲಿಮರು ದೊಡ್ಡ ವಿಜಯವನ್ನು ಸಾಧಿಸಿದ್ದಾರೆ ಎಂದು ನಾನು ಘೋಷಿಸಿದೆ. ನಾನು ಅಲ್ಲಿಂದ ಹೊರಟಾಗ, ಮುಸ್ಲಿಮರು ಸ್ವಲ್ಪ ಯುದ್ಧಸಂಪತ್ತನ್ನು ಸಂಗ್ರಹಿಸಿದ್ದರು ಮತ್ತು ಇನ್ನೂ ಕೆಲವನ್ನು ಸಂಗ್ರಹಿಸುತ್ತಿದ್ದರು. ನಂತರ ಅವರು ಪವಿತ್ರ ಪತ್ನಿಯರ ಕೋಣೆಗಳಿಗೆ ಹೋಗಿ ಹಝ್ರತ್ ಪೈಗಂಬರ್(ಸ) ರ ಯೋಗಕ್ಷೇಮ ಮತ್ತು ಸುರಕ್ಷತೆಯ ಬಗ್ಗೆ ಅವರಿಗೆ ಶುಭ ಸುದ್ದಿ ನೀಡಿದರು, ಮತ್ತು ಎಲ್ಲರೂ ಅಲ್ಲಾಹನಿಗೆ ಧನ್ಯವಾದ ಅರ್ಪಿಸಿದರು ಮತ್ತು ಸಂತೋಷಪಟ್ಟರು. (ಸಬ್ಲುಲ್ ಹುದಾ, ಸಂಪುಟ 5, ಪುಟಗಳು 320–340, ದಾರುಲ್ ಕುತುಬ್ ಅಲ್–ಇಲ್ಮಿಯ್ಯಾ, ಬೈರುತ್, 1993) (ಝುರ್ಕಾನಿ, ಸಂಪುಟ–3, ಪುಟ–508, ದಾರುಲ್ ಕುತುಬ್ ಅಲ್–ಇಲ್ಮಿಯ್ಯಾ, ಬೈರುತ್, 1996) (ದಾಏರಾ ಮಾ'ರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾ(ಸ), ಸಂಪುಟ 9, ಪುಟಗಳು 280–282, ಬಾಜ್ಮ್ ಇಕ್ಬಾಲ್, ಲಾಹೋರ್)

ಯುದ್ಧಭೂಮಿಯಿಂದ ಬಹಳ ಕಷ್ಟದಿಂದ ತಪ್ಪಿಸಿಕೊಂಡ ಬನು ಹವಾಝಿನ್‌ನ ಸೇನಾಧಿಪತಿ ಮಾಲಿಕ್ ಬಿನ್ ಅವ್ಫ್ ಮತ್ತು ಅವನ ಸಹಚರರು ಒಂದು ಕಂದರದಲ್ಲಿ ನಿಂತರು. ಅವರು ಹೇಳಿದರು, "ದುರ್ಬಲ ಜನರು ಮತ್ತು ನಿಮ್ಮ ಸಹೋದರರು ನಿಮ್ಮ ಬಳಿಗೆ ಬರುವವರೆಗೆ ನಿಲ್ಲಿರಿ." ಹಝ್ರತ್ ಝುಬೈರ್ ಬಿನ್ ಅವಾಮ್(ರ) ಅವರನ್ನು ನೋಡಿದಾಗ, ಅವರು ಅವರ ಮೇಲೆ ದಾಳಿ ಮಾಡಿದರು ಮತ್ತು ಮಾಲಿಕ್ ಅಲ್ಲಿಂದ ಓಡಿಹೋಗಿ ಸಕೀಫ್ ಕೋಟೆಯನ್ನು ಪ್ರವೇಶಿಸಿದರು.

(ಸೀರತ್ ಇಬ್ನ್ ಹಿಶಾಮ್, ಪುಟ 771, ದಾರುಲ್ ಕುತುಬ್ ಅಲ್–ಇಲ್ಮಿಯ್ಯಾ, 2001) (ಸೀರತ್ ಖೈರ್ ಅಲ್–ಇಬಾದ್‌ನಲ್ಲಿ ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ–5, ಪುಟಗಳು 333–334, ದಾರುಲ್ ಕುತುಬ್ ಅಲ್–ಇಲ್ಮಿಯ್ಯಾ, ಬೈರುತ್, 1993)

ಮುಹಲ್ಲಿಮ್ ಬಿನ್ ಜಸ್ಸಾಮ ಒಬ್ಬ ವ್ಯಕ್ತಿಯನ್ನು ವಧಿಸುವುದು ಮತ್ತು ಅವನ ಪರಿಹಾರಧನವನ್ನು ನೀಡುವ ಘಟನೆಯನ್ನು ಈ ಕೆಳಗಿನಂತೆ ಹೆಚ್ಚು ವಿವರವಾಗಿ ವಿವರಿಸಲಾಗಿದೆ. ಮಕ್ಕಾ ವಿಜಯದ ಉಲ್ಲೇಖದ ಮೊದಲು ಖುತ್‌ಬ ಜುಮುಅದಲ್ಲಿ, ಇಝುಮ್ ದಂಡಯಾತ್ರೆಯ ವಿವರಣೆಯಲ್ಲಿ, ಒಬ್ಬ ಸಹಾಬಿ ಮುಹಲ್ಲಿಮ್ ಬಿನ್ ಜಸ್ಸಾಮ ಹಾದುಹೋಗುವಾಗ ಅಸ್–ಸಲಾಮು ಅಲೈಕುಮ್ ಎಂದು ಹೇಳಿದ ವ್ಯಕ್ತಿಯನ್ನು ವಧಿಸಿದರು ಎಂದು ಉಲ್ಲೇಖಿಸಲಾಗಿದೆ, ಆದರೆ ಇದರ ಹೊರತಾಗಿಯೂ, ಅವರು ಅವನನ್ನು ವಧಿಸಿದರು. ಈ ಘಟನೆಯ ಬಗ್ಗೆ ಇನ್ನೂ ಕೆಲವು ವಿವರಗಳನ್ನು ನೀಡಲಾಗಿದೆ, ಅಂದರೆ ಹುನೈನ್ ಯುದ್ಧದ ನಂತರ, ಹಝ್ರತ್ ಪೈಗಂಬರ್(ಸ) ತಾಯಿಫ್ ಯುದ್ಧಕ್ಕೆ ಹೊರಟಾಗ, ಒಂದು ದಿನ ಝುಹರ್ ನಮಾಝಿನ ನಂತರ, ಅವರು ಮರದ ಕೆಳಗೆ ಕುಳಿತರು. ಉಯೈನಾ ಬಿನ್ ಹಿಸ್ನ್ ಎದ್ದು ನಿಂತು ಹತರಾದ ಆಮಿರ್ ಬಿನ್ ಅಝ್‌ಬತ್ ಅಶ್‌ಜಯಿ ಅವರ ಪರಿಹಾರವನ್ನು ಬೇಡಿದರು. ಅದೇ ಸಮಯದಲ್ಲಿ, ಅಕ್ರಾ ಬಿನ್ ಹಾಬಿಸ್ ಎದ್ದು ನಿಂತು, ಮುಹಲ್ಲಿಮ್ ಬಿನ್ ಜಸ್ಸಾಮ ಅವರನ್ನು ಉಳಿಸಲು ಬಯಸಿದರು. ಅವರಿಬ್ಬರೂ ಹಝ್ರತ್ ಪೈಗಂಬರ್(ಸ) ರ ಮುಂದೆ ವಾದಿಸಲು ಪ್ರಾರಂಭಿಸಿದರು. ಉಯೈನಾ ಹೇಳಿದರು, "ಓ ಅಲ್ಲಾಹನ ಸಂದೇಶವಾಹಕರೇ! ಅಲ್ಲಾಹನಾಣೆ! ಕೊಲೆಗಾರನಾದ ಅವನನ್ನು ನಾನು ಬಿಡುವುದಿಲ್ಲ. ಅವನು ನಮ್ಮ ಮಹಿಳೆಯರ ಮೇಲೆ ದುಃಖದ ಪರ್ವತವನ್ನು ತಂದಂತೆ ನಾನು ಅವನ ಮಹಿಳೆಯರ ಮೇಲೆ ದುಃಖದ ಪರ್ವತವನ್ನು ತರುತ್ತೇನೆ." ಹಝ್ರತ್ ಪೈಗಂಬರ್(ಸ) ಅವರಿಗೆ ಹೇಳಿದರು, "ದೀಯತ್ (ಪರಿಹಾರಧನವನ್ನು) ಹಣವನ್ನು ತೆಗೆದುಕೊಳ್ಳಿ. ಈಗ ಐವತ್ತು ಒಂಟೆಗಳನ್ನು ತೆಗೆದುಕೊಳ್ಳಿ ನಂತರ ಮದೀನಾಗೆ ತಲುಪಿದಾಗ ಐವತ್ತು ಒಂಟೆಗಳನ್ನು ತೆಗೆದುಕೊಳ್ಳಿ." ಆದರೆ ಉಯೈನಾ ಪರಿಹಾರಧನವನ್ನು ತೆಗೆದುಕೊಳ್ಳಲು ನಿರಾಕರಿಸಿದರು. ಆದಾಗ್ಯೂ, ಸ್ವಲ್ಪ ಚರ್ಚೆಯ ನಂತರ, ಜನರು ಅಂತಿಮವಾಗಿ ಪರಿಹಾರಧನವನ್ನು ಸ್ವೀಕರಿಸಿದರು. ಕೊಲೆಗಾರನಾದ ಮುಹಲ್ಲಿಮ್ ಒಂದು ಬದಿಯಲ್ಲಿ ನಿಂತಿದ್ದನು, ಅವನು ಸೇಡು ತೀರಿಸಿಕೊಳ್ಳಲು ಸಿದ್ಧನಾಗಿ ಬಂದನು, "ಈಗ ನನ್ನ ಸಾವು ಬಂದಿದೆ" ಎಂದು ಹೇಳಿದನು. ದೀಯತ್ ಇತ್ಯಾದಿಗಳನ್ನು ನಿರ್ಧರಿಸಿದ ನಂತರ, ಮುಹಲ್ಲಿಮ್ ಎದ್ದು ಹಝ್ರತ್ ಪೈಗಂಬರ್(ಸ) ರವರ ಪಕ್ಕದಲ್ಲಿ ಕುಳಿತನು. ಅವರ ಕಣ್ಣುಗಳಿಂದ ಕಣ್ಣೀರು ಹರಿಯುತ್ತಿತ್ತು. ಅವರು ಹೇಳಿದರು, "ನಿಮಗೆ(ಸ) ತಲುಪಿದ ವಿಷಯಕ್ಕಾಗಿ ನಾನು ಅಲ್ಲಾಹನಲ್ಲಿ ಪಶ್ಚಾತ್ತಾಪ ಪಡುತ್ತೇನೆ. ನೀವು ನನಗಾಗಿ ಕ್ಷಮೆಗಾಗಿ ಪ್ರಾರ್ಥಿಸಿರಿ." ಅದಕ್ಕೆ ಹಝ್ರತ್ ಪೈಗಂಬರ್(ಸ)ರು ಕೇಳಿದರು, "ನಿಮ್ಮ ಹೆಸರೇನು?" ಅವರು ಹೇಳಿದರು, "ನಾನು ಮುಹಲ್ಲಿಮ್ ಬಿನ್ ಜಸ್ಸಾಮ." ಅವರು(ಸ) ಹೇಳಿದರು, "ಅವನು ಇಸ್ಲಾಮ್ ಧರ್ಮವನ್ನು ಸ್ವೀಕರಿಸದ ಆರಂಭದಲ್ಲಿಯೇ ನೀವು ಅವನನ್ನು ಕೊಂದಿದ್ದೀರಾ?" ಅಂದರೆ, ಅವನು ಬಂದು ಅಸ್ಸಲಾಮು ಅಲೈಕುಮ್ ಎಂದು ಹೇಳಿದರೂ ನೀವು ಅವನನ್ನು ವಧಿಸಿದ್ದೀರ. ಮತ್ತು ಹಝ್ರತ್ ಪೈಗಂಬರ್(ಸ)ರು ಉಚ್ಚಧ್ವನಿಯಲ್ಲಿ ಹೇಳಿದರು, "ಓ ಅಲ್ಲಾಹ್! ಮುಹಲ್ಲಿಮ್ ಅವರನ್ನು ಕ್ಷಮಿಸಬೇಡಿ." ಎಲ್ಲರೂ ಈ ವಾಕ್ಯವನ್ನು ಕೇಳಿದರು. ಮುಹಲ್ಲಿಮ್ ಮತ್ತೆ ಹೇಳಿದರು, "ಓ ಅಲ್ಲಾಹನ

ಸಂದೇಶವಾಹಕರೇ! ನಾನು ಕ್ಷಮೆ ಕೇಳುತ್ತೇನೆ. ನೀವು ನನಗಾಗಿಯೂ ಅಲ್ಲಾಹನಲ್ಲಿ ಕ್ಷಮೆ ಯಾಚಿಸಿರಿ." ಅವರು(ಸ) ಮತ್ತೊಮ್ಮೆ ಜೋರಾದ ಧ್ವನಿಯಲ್ಲಿ ಜನರಿಗೆ ಕೇಳಿಸುವಂತೆ ಹೇಳಿದರು, "ಓ ಅಲ್ಲಾಹ್! ಮುಹಲ್ಲಿಮ್ ಬಿನ್ ಜಸ್ಸಾಮರನ್ನು ಕ್ಷಮಿಸಬೇಡ. ಮತ್ತೆ ಅವರು ಅದೇ ಮಾತನ್ನು ಮೂರನೇ ಬಾರಿ ಹೇಳಿದಾಗಲೂ ಹಝ್ರತ್ ಪೈಗಂಬರ್(ಸ) ಮೂರನೇ ಬಾರಿಯೂ ಅದೇ ಮಾತನ್ನು ಹೇಳಿದರು. ನಂತರ ಹಝ್ರತ್ ಪೈಗಂಬರ್(ಸ)ರು ಅವರಿಗೆ, "ನನ್ನಿಂದ ಎದ್ದು ದೂರ ಹೋಗು" ಎಂದು ಹೇಳಿದರು. ಆದ್ದರಿಂದ ಅವನು ಅವರಿಂದ ಎದ್ದು ತನ್ನ ಮೇಲಂಗಿಯಿಂದ ಕಣ್ಣೀರು ಒರೆಸುತ್ತಿದ್ದನು. ಇಬ್ನ್ ಇಸ್‌ಹಾಕ್ ಅವರಿಂದ ಒಂದು ವರದಿಯು ಇದೆ. ಅವರು ಹೇಳುತ್ತಾರೆ ಮುಹಲ್ಲಿಮ್‌ನ ಜನರು ನಂತರ ಹಝ್ರತ್ ಪೈಗಂಬರ್(ಸ) ಅವರ ಕ್ಷಮೆಗಾಗಿ ಪ್ರಾರ್ಥಿಸಿದರು ಎಂದು ಹೇಳಿದರು.
(ಸಬ್ಲುಲ್-ಹುದಾ ವರ್‌ರಶಾದ್ ಫೀ ಸೀರತ್ ಖೈರುಲ್ ಇಬಾದ್, ಸಂಪುಟ-5, ಪುಟಗಳು 339-340, ದಾರುಲ್ ಕುತುಬ್ ಅಲ್-ಇಲ್ಮಿಯಾ, ಬೈರುತ್, 1993) (ಸುನನ್ ಅಬು ದಾವೂದ್, ಕಿತಾಬ್ ಅಲ್-ದೀಯತ್, ಬಾಬ್ ಅಲ್-ಇಮಾಮ್ ಯಾಮರ್ ಬಿಲ್-ಅಫು' ಫಿ ಅಲ್-ದಮ್, ಹದೀಸ್ ಸಂಖ್ಯೆ 4503) (ಸುನನ್ ಇಬ್ನ್ ಮಾಜಾ, ಕಿತಾಬ್ ಅಲ್-ದೀಯತ್, ಬಾಬ್ ಮಿನ್ ಕುಲ್ 'ಅದ್ಮಾ... ಹದೀಸ್ ಸಂಖ್ಯೆ-2625)

ಅವ್ತಾಸ್ ದಂಡಯಾತ್ರೆಯ ವಿವರಣೆ ಹೀಗಿದೆ. ಹುನೈನ್ ಯುದ್ಧಭೂಮಿಯಲ್ಲಿ ಕೆಟ್ಟದಾಗಿ ಸೋತ ನಂತರ, ಬನೂ ಹವಾಝಿನ್‌ನ ಸೈನ್ಯವು ಅವರು ಎದುರಿಸುತ್ತಿದ್ದ ದಿಕ್ಕಿನಲ್ಲಿ ಓಡಿಹೋದರು. ಬನು ಹವಾಝಿನ್‌ನ ಕಮಾಂಡರ್ ಮಾಲಿಕ್ ಬಿನ್ ಅವ್ಫ್ ಸೇರಿದಂತೆ ಅದರ ಒಂದು ಭಾಗವು ತಾಯಿಫ್ ಗೆ ಓಡಿಹೋಗಿ ತಾಯಿಫ್ ಕೋಟೆಯಲ್ಲಿ ಆಶ್ರಯ ಪಡೆದರು, ಮತ್ತು ಅದರ ಒಂದು ಭಾಗವು ಅವ್ತಾಸ್ ಕೋಟೆಗೆ ಓಡಿಹೋಯಿತು. ಮತ್ತು ಅದರ ಒಂದು ಭಾಗವು ಅವ್ತಾಸ್‌ನ ಕಣಿವೆಯಲ್ಲಿ ಒಟ್ಟುಗೂಡಿದರು ಮತ್ತು ಒಂದು **ನಖ್ಲ** ಅಂದರೆ **ನುಖೈಲದ** ಕಡೆಗೆ ಓಡಿಹೋದರು. ಅವ್ತಾಸ್ ಎಂಬುದು ಹುನೈನ್ ಬಳಿಯ ಕಣಿವೆಯ ಹೆಸರಾಗಿದೆ. ಬನು ಹವಾಝಿನ್ ತನ್ನ ಹೆಂಡತಿ, ಮಕ್ಕಳು ಮತ್ತು ತನ್ನ ಎಲ್ಲಾ ಜಾನುವಾರುಗಳೊಂದಿಗೆ ದಾಳಿ ಮಾಡಿದ್ದರಿಂದ ಮತ್ತು ಅವರು ಸ್ವತಃ ಓಡಿಹೋಗಿದ್ದರು, ಮತ್ತು ಈಗ ಇದೆಲ್ಲವೂ ಮುಸ್ಲಿಮರ ಕೈಗೆ ಯುದ್ಧಸಂಪತ್ತಾಗಿ ಲಭಿಸಿತು. ಇದು ಇಸ್ಲಾಮಿನ ಇತಿಹಾಸದಲ್ಲಿ ಮುಸ್ಲಿಮರು ಪಡೆದ ಅತಿದೊಡ್ಡ ಯುದ್ಧ ಸಂಪತ್ತಾಗಿತ್ತು.

ಹಝ್ರತ್ ಪೈಗಂಬರ್(ಸ) ಎಲ್ಲಾ ಕೈದಿಗಳು ಮತ್ತು ಯುದ್ಧಸಂಪತ್ತನ್ನು ಹಝ್ರತ್ ಮಸ್‌ಊದ್ ಬಿನ್ ಅಮ್ರ್ ಗಿಫಾರಿ ಅವರ ಮೇಲ್ವಿಚಾರಣೆಯಲ್ಲಿ ಜಿರಾನಾ ಸ್ಥಳಕ್ಕೆ ಕಳುಹಿಸಿದರು ಮತ್ತು ಸ್ವತಃ ಇಡೀ ಸೈನ್ಯವನ್ನು ತೆಗೆದುಕೊಂಡು ತಾಯಿಫ್ ಕಡೆಗೆ ಹೊರಟರು ಮತ್ತು ಹಝ್ರತ್ ಅಬು ಅಮೀರ್ ಅಶ್'ಅರಿ ಅವರ ನೇತೃತ್ವದಲ್ಲಿ ಉಬೈದ್ ಬಿನ್ ಸುಲೈಮ್ ಅವರನ್ನು ಅವ್ತಾಸ್ ಕಡೆಗೆ ಕಳುಹಿಸಿದರು. ಅಬು ಮೂಸಾ ಅಲ್-ಅಶ್'ಅರಿ ಮತ್ತು ಸಲಮಾ ಬಿನ್ ಅಕ್ವಾ' ಕೂಡ ಈ ಸೈನ್ಯದಲ್ಲಿದ್ದರು. ಹಝ್ರತ್ ಅಬು ಅಮೀರ್(ರ.ಅ) ಶತ್ರುವನ್ನು ಹೋರಾಡಲು ಆಹ್ವಾನಿಸಿದರು. ತಮ್ಮ ಅಪ್ರತಿಮ ಹೋರಾಟದ ಕೌಶಲ್ಯಕ್ಕೆ ಹೆಸರುವಾಸಿಯಾದ ಶತ್ರುಗಳ ಹತ್ತು ಸಹೋದರರು ಇದ್ದರು. ಈ ಹತ್ತು ಸಹೋದರರು ಮೊದಲು ಯುದ್ಧಕ್ಕೆ ಹೋದರು. ಮೊದಲು ಒಬ್ಬ ಸಹೋದರ ಬಂದನು. ಅಬು ಅಮೀರ್ ಮೊದಲು ಅವನನ್ನು ಇಸ್ಲಾಂಗೆ ಆಹ್ವಾನಿಸಿದನು ಆದರೆ ಅವನು ಹೋರಾಡಲು ಇಷ್ಟಪಟ್ಟನು. ಅಬು ಅಮೀರ್ **ಅಲ್ಲಾಹುಮ್ಮ ಅಶ್‌ಹದ್ ಅಲೈಹ**- ಓ ಅಲ್ಲಾಹನೇ, ಇದರ ಬಗ್ಗೆ ಸಾಕ್ಷಿಯಾಗಿರು ಎಂದು ಹೇಳಿದರು. ಹೀಗೆ ಹೇಳುತ್ತಾ ಅವರು ತನ್ನ ಕತ್ತಿಯಿಂದ ಹೇಗೆ ಹೊಡೆದರು ಎಂದರೆ ಅದರ ಹೊಡೆತದಿಂದ ಅವರು ಎರಡು ತುಂಡುಗಳಾಗಿ ಮುರಿದು ನೆಲಕ್ಕೆ ಬಿದ್ದನು. ನಂತರ ಇನ್ನೊಬ್ಬ ಸಹೋದರ ಬಂದನು. ಅಬು ಅಮೀರ್ ಅವನನ್ನು ಕೂಡ ಮೊದಲು ಇಸ್ಲಾಮಿಗೆ ಆಹ್ವಾನಿಸಿದರು ಮತ್ತು ಅವನು ನಿರಾಕರಿಸಿದಾಗ ಅವನೊಂದಿಗೆ ಹೋರಾಡಿದರು ಮತ್ತು ಅವನೂ ಕೊಲ್ಲಲ್ಪಟ್ಟನು. ಈ ರೀತಿಯಾಗಿ, ಹತ್ತನೇ ಸಹೋದರ ಬಂದಾಗ ಒಂಬತ್ತು ಸಹೋದರರು ಒಬ್ಬರ ನಂತರ ಒಬ್ಬರಂತೆ ಕೊಲ್ಲಲ್ಪಟ್ಟರು ಮತ್ತು ಅಬು ಅಮೀರ್ ಮೊದಲಿನಂತೆ **ಅಲ್ಲಾಹುಮ್ಮ ಅಶ್‌ಹದ್ ಅಲೈಹ**- "ಓ ಅಲ್ಲಾಹ್, ನನಗೆ ಸಾಕ್ಷಿಯಾಗು" ಎಂದು ಹೇಳುವ ಮೂಲಕ ಅವನ ಮೇಲೆ ದಾಳಿ ಮಾಡಲು ಹೊರಟಿದ್ದರು. ಅಷ್ಟರಲ್ಲಿ ಅವನು **ಅಲ್ಲಾಹುಮ್ಮ ಲಾ ತಶ್‌ಹದ್ ಅಲೈಯ**- ಓ ಅಲ್ಲಾಹ್, ನನ್ನ ವಿರುದ್ಧ ಸಾಕ್ಷಿಯಾಗಬೇಡ ಎಂದು ಹೇಳಿದನು. ಹೀಗೆ ಅವನು ಇಸ್ಲಾಂ ಅನ್ನು ಸ್ವೀಕರಿಸುತ್ತಿದ್ದೇನೆ ಎಂದು ನಟಿಸಿದನು. ಇದನ್ನು ಕೇಳಿದ ನಂತರ, ಅಬು ಅಮೀರ್ ತನ್ನ ಕತ್ತಿಯನ್ನು ಕೆಳಗಿಳಿಸಿ ಅವನನ್ನು ಬಿಟ್ಟುಬಿಟ್ಟರು, ಆದರೆ ಅವನು ತಿರುಗಿ ಅಬು ಅಮೀರ್ ಮೇಲೆ ದಾಳಿ ಮಾಡಿದನು. ಅವನು ಅವರನ್ನು ವಂಚಿಸಿದನು. ಕೆಲವು ವರದಿಗಳ ಪ್ರಕಾರ, ಅವನು ಅಬು ಅಮೀರ್ ಅನ್ನು ಹುತಾತ್ಮರನ್ನಾಗಿ ಮಾಡಿದನು, ಆದರೆ ಇತರ ವರದಿಗಳ ಪ್ರಕಾರ, ಇದು ಸರಿಯಲ್ಲ ಏಕೆಂದರೆ ಅಬು ಅಮೀರ್ ಅನ್ನು ಹುತಾತ್ಮರನ್ನಾಗಿ ಮಾಡಿದವನನ್ನು ಆ ಸಮಯದಲ್ಲಿ ಹಝ್ರತ್ ಅಬು ಮೂಸಾ ಅಲ್-ಅಶ್'ಅರಿ ವಧಿಸಿದ್ದರು. ಹೆಚ್ಚು ಸರಿಯಾದ ವರದಿಯೆಂದರೆ, ಅಲ್ಲಿದ್ದ ಹತ್ತನೇ ಸಹೋದರ ನಂತರ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ್ದನು ಮತ್ತು ಅವನು ತುಂಬಾ ಒಳ್ಳೆಯ ಮುಸ್ಲಿಮ್ ಆಗಿದ್ದನು ಎಂದು ಸಾಬೀತಾಯಿತು ಎಂದು ಹೇಳಲಾಗುತ್ತದೆ. ನಂತರ, ಹಝ್ರತ್ ಪೈಗಂಬರ್(ಸ) ಅವರನ್ನು ನೋಡಿದಾಗ, ಅವರು(ಸ) **ಹಾಝ್ಞಾ ಶರೀದು ಅಬೀ ಆಮಿರಿ**- ಎಂದು ಹೇಳುತ್ತಿದ್ದರು. ಅಂದರೆ, ಅವರು ಅಬು ಆಮಿರ್ ಅವರ ಕತ್ತಿಯಿಂದ ತಪ್ಪಿಸಿಕೊಂಡಿದ್ದಾರೆ. ಆದಾಗ್ಯೂ, ಹಝ್ರತ್ ಅಬು ಆಮಿರ್(ರ.ಅ) ಯಾವುದೇ ಭಯವಿಲ್ಲದೆ ಹೋರಾಡುತ್ತಲೇ ಇದ್ದರು ಮತ್ತು ಅವರ ಕತ್ತಿಯ ಮುಂದೆ ಬಂದವರನ್ನು ಕೊಲ್ಲಲಾಯಿತು. ಅಂತಿಮವಾಗಿ, ಹಾರಿಸ್ ಜುಶ್ಮಿಯ ಇಬ್ಬರು ಪುತ್ರರಾದ ಅಲಾ ಮತ್ತು ಅವ್ಫಾ ಅವರನ್ನು ಬಾಣಗಳಿಂದ ಹೊಡೆದರು. ಒಂದು ಬಾಣ ಅವರ ಎದೆಗೆ ಮತ್ತು ಇನ್ನೊಂದು ಮೊಣಕಾಲಿಗೆ ತಗುಲಿತು. ಕೆಲವು ವರದಿಗಳ ಪ್ರಕಾರ, ಬಾಣ ಹಾರಿಸಿದವನು ದುರೈದ್ ಬಿನ್ ಸಿಮ್ಮ ಅವರ ಮಗ ಸಲಮಾ ಆಗಿದ್ದನು. ಅಬು ಮೂಸಾ ಅಶ್'ಅರಿ ಹೇಳುವಂತೆ, ನಾನು ಅಬು ಆಮಿರ್ ಅವರನ್ನು ಬಾಣದಿಂದ ಹೊಡೆದವರು ಯಾರು ಎಂದು ಕೇಳಿದೆ. ಅವರು ಒಬ್ಬ ವ್ಯಕ್ತಿಯನ್ನು ತೋರಿಸಿದರು ಮತ್ತು ನಾನು ಅವರನ್ನು ಬೆನ್ನಟ್ಟಿದೆ. ನಾನು ಅವರಿಗೆ ಸವಾಲು ಹಾಕಿದಾಗ ಅವರು ಓಡಿಹೋಗಿ ನಿಲ್ಲಿಸಿದರು. ನಾವು ಹೋರಾಡಿದೆವು ಮತ್ತು ನಾನು ಅವನನ್ನು ವಧಿಸಿದೆನು. ಹಿಂದಿರುಗಿದ ನಂತರ, ನಾನು ಅಬು ಆಮಿರ್‌ಗೆ, "ಅಲ್ಲಾಹನು ನಿಮ್ಮ ಕೊಲೆಗಾರನನ್ನು ನರಕಕ್ಕೆ ಕಳುಹಿಸಲಿ" ಎಂದು ಹೇಳಿದೆ. ಅಬು ಆಮಿರ್ ನನ್ನ ಬಾಣವನ್ನು ಹೊರತೆಗೆಯಲು ಹೇಳಿದರು. ಬಾಣ ಇನ್ನೂ ಅವರ ದೇಹದಲ್ಲಿತ್ತು. ನಾನು ಬಾಣವನ್ನು ಹೊರತೆಗೆದಾಗ, ಗಾಯದಿಂದ ನೀರು ಹರಿಯಿತು ಎಂದು ಹೇಳಲಾಗುತ್ತದೆ. ಅದರಿಂದ ಗಾಯವು ಆಳವಾಗಿದೆ ಎಂದು ಸ್ಪಷ್ಟವಾಯಿತು. ಮತ್ತು ಜೀವನದ ಬಗ್ಗೆ ಯಾವುದೇ ಭರವಸೆ ಇರಲಿಲ್ಲ. ಅಬು ಆಮಿರ್ ನನಗೆ ಹಝ್ರತ್ ಪೈಗಂಬರ್(ಸ) ರವರಿಗೆ ನನ್ನ ಸಲಾಮ್ ಅನ್ನು ತಿಳಿಸಲು ಮತ್ತು ಹಝ್ರತ್ ಪೈಗಂಬರ್(ಸ) ರವರ ಸಮ್ಮುಖದಲ್ಲಿ ನನಗಾಗಿ ಇಸ್ತಿಗ್‌ಫಾರ್ ಮತ್ತು ಮಗ್‌ಫಿರತ್‌ಗಾಗಿ ದುಆ ಮಾಡಲು ಹೇಳಿದರು ಎಂದು ಅಬು ಮೂಸಾ ಅಲ್-ಅಶ್'ಅರಿ ಹೇಳುತ್ತಾರೆ. ಮತ್ತು ನನ್ನ ಕುದುರೆ ಮತ್ತು ನನ್ನ ಆಯುಧಗಳನ್ನು ಹಝ್ರತ್ ಪೈಗಂಬರ್(ಸ) ರವರಿಗೆ ಅರ್ಪಿಸಿ ಮತ್ತು ಅದೇ ಸಮಯದಲ್ಲಿ ಅವರು ನನ್ನನ್ನು ಅವರ ಉತ್ತರಾಧಿಕಾರಿಯಾಗಿ ನೇಮಿಸಿದರು ಮತ್ತು ಧ್ವಜವನ್ನು ನನಗೆ ಒಪ್ಪಿಸಿದರು. ಅವರು ಸ್ವಲ್ಪ ಸಮಯದ ನಂತರ ನಿಧನರಾದರು. ಅಬು ಮೂಸಾ ಅಲ್-ಅಶ್'ಅರಿ ಈ ಜನರೊಂದಿಗೆ ಹೋರಾಡಿದರು ಮತ್ತು ಶತ್ರುಗಳು ಸೋತ ನಂತರ ಶತ್ರುಗಳು ಅಲ್ಲಿಂದ ಓಡಿಹೋದರು. ಅವರಲ್ಲಿ ಕೆಲವರು ಕೊಲ್ಲಲ್ಪಟ್ಟರು ಮತ್ತು ಅಬು ಮೂಸಾ ಕೂಡ ಯುದ್ಧ ಸಂಪತ್ತು ಮತ್ತು ಕೈದಿಗಳೊಂದಿಗೆ ಹಝ್ರತ್ ಪೈಗಂಬರ್(ಸ) ರವರ ಬಳಿಗೆ ಬಂದರು. ಅಬು ಮೂಸಾ ಅಲ್-ಅಶ್'ಅರಿ ಹೇಳುತ್ತಾರೆ, ನಾನು ಹಝ್ರತ್ ಪೈಗಂಬರ್(ಸ) ರವರ ಬಳಿಗೆ ಬಂದಾಗ, ಅವರು ಹಾಸಿಗೆ ಇಲ್ಲದ ಹಗ್ಗಗಳಿಂದ ನೇಯ್ದ ಹಾಸಿಗೆಯ ಮೇಲೆ ಮಲಗಿದ್ದರು, ಆದರೆ ಬುಖಾರಿ ಮತ್ತು ಇತರ ಕೆಲವು ವರದಿಗಳ ಪ್ರಕಾರ, ಅದರ ಮೇಲೆ ಹಾಸಿಗೆ ಇತ್ತು, ಆದರೆ ಅದು ತುಂಬಾ ತೆಳುವಾಗಿತ್ತು. ಒಂದು ಚಾದರವನ್ನು ಹರಡಲಾಗಿತ್ತು. ಆ ಹಗ್ಗಗಳ ಗುರುತುಗಳು ಹಝ್ರತ್ ಪೈಗಂಬರ್(ಸ) ರವರ ಪವಿತ್ರ ದೇಹದ ಮೇಲೆ ಗೋಚರಿಸುತ್ತಿದ್ದವು. ನಾನು ಅವ್ತಾಸ್ ಯುದ್ಧದ ವಿವರಗಳನ್ನು ನಿಮಗೆ ಪ್ರಸ್ತುತಪಡಿಸಿದೆ ಮತ್ತು ಅಬು ಆಮಿರ್ ಅವರ ಹುತಾತ್ಮತೆಯ ವಿವರಗಳನ್ನು ವಿವರಿಸುವಾಗ ನಿಮ್ಮ ಪ್ರಾರ್ಥನೆಯನ್ನು ಸಹ ಕೇಳಿದೆ ಎಂದು ಅವರು ಹೇಳುತ್ತಾರೆ. ಇದರ ನಂತರ, ಹಝ್ರತ್ ಪೈಗಂಬರ್(ಸ) ನೀರು ಕೇಳಿದರು ಮತ್ತು ಸ್ನಾನ ಮಾಡಿದರು. ನಂತರ ಅವರು ತಮ್ಮ ಎರಡೂ ಕೈಗಳನ್ನು ಮೇಲಕ್ಕೆತ್ತಿ ಹೀಗೆ ಪ್ರಾರ್ಥಿಸಿದರು: **ಅಲ್ಲಾಹುಮ್ಮಗ್‌ಫ಼ರ್ ಲಿಉಬೈದಿನ್ ಅಬೀ ಆಮಿರಿನ್- ಅಲ್ಲಾಹುಮ್ಮಜ್‌ಅಲ್ ಯೌಮಲ್ ಖಿಯಾಮತಿ ಫೌಖ ಕಸೀರಿಮ್ಮಿನ್ ಖಲ್‌ಖಿಕ ಮಿನನ್ನಾಸಿ**- ಓ ಸರ್ವಶಕ್ತನಾದ ಅಲ್ಲಾಹನೇ, ಉಬೈದ್ ಅಬು ಆಮಿರ್‌ನನ್ನು ಕ್ಷಮಿಸು. ಓ ಅಲ್ಲಾಹ್, ಪುನರುತ್ಥಾನ ದಿನದಂದು ಅವರನ್ನು ನಿನ್ನ ಸೃಷ್ಟಿಗಳಲ್ಲಿ ಅತ್ಯುನ್ನತರನ್ನಾಗಿ ಮಾಡು. ಅಬು ಮೂಸಾ ಅಲ್-ಅಶ್'ಅರಿ ವಿವರಿಸಿದ್ದಾರೆ: ಓ ಅಲ್ಲಾಹ್ ನ ಸಂದೇಶವಾಹಕರೇ! ನನಗೂ ಕ್ಷಮೆಗಾಗಿ ಪ್ರಾರ್ಥಿಸಿ, ಆಗ ಅಲ್ಲಾಹ್‌ನ ಸಂದೇಶವಾಹಕರು(ಸ) ಅವರಿಗಾಗಿಯೂ ಪ್ರಾರ್ಥಿಸಿದರು ಮತ್ತು ಹೇಳಿದರು: **ಅಲ್ಲಾಹುಮ್ಮಗ್‌ಫ಼ಿರ್ ಲಿಉಬೈದಿನ್ ಅಬೀ ಆಮಿರಿನ್- ಅಲ್ಲಾಹುಮ್ಮಜ್‌ಅಲ್ ಯೌಮಲ್ ಖಿಯಾಮತಿ ಫೌಖ ಕಸೀರಿಮ್ಮಿನ್**

**ಖಲ್‌ಖಿಕ ಮಿನನ್ನಾಸಿ–** ಓ ಅಲ್ಲಾಹ್, ಅಬ್ದುಲ್ಲಾ ಬಿನ್ ಕೈಸ್ ಅಂದರೆ ಅಬೂಮೂಸ ಅಲ್‌ಅಶ್‌ಅರಿ ಅವರ ಪಾಪಗಳನ್ನು ಕ್ಷಮಿಸು ಮತ್ತು ಪುನರುತ್ಥಾನ ದಿನದಂದು ಅವರನ್ನು ಉದಾತ್ತ ಪ್ರವೇಶದೊಂದಿಗೆ ಪ್ರವೇಶಿಸಿ.

(ಸೀರತ್ ಇಬ್ನ್ ಹಿಶಾಮ್, ಪುಟ 772, ದಾರುಲ್ ಕುತುಬ್ ಅಲ್–ಇಲ್ಮಿಯ, ಬೈರುತ್) (ಸಬ್ಲುಲ್–ಹುದಾ, ಸಂಪುಟ 6, ಪುಟಗಳು 206–207 ಮತ್ತು ಸಂಪುಟ 5, ಪುಟಗಳು 333 ಮತ್ತು 339, ದಾರುಲ್ ಕುತುಬ್ ಅಲ್–ಇಲ್ಮಿಯ, ಬೈರುತ್ 2001) (ದಾಎರಾ ಮಾರಿಫ್, ಸೀರತ್ ಮುಹಮ್ಮದ್ ರಸೂಲುಲ್ಲಾ (ಸ.ಅ.), ಸಂಪುಟ 9, ಪುಟಗಳು 331–334, ಬಾಜ್ಮ್ ಇಕ್ಬಾಲ್, ಲಾಹೋರ್) (ಮೂಲ: ಶರ್ಹ್ ಝುರ್ಕಾನಿ, ಸಂಪುಟ 3, ಪುಟಗಳು 532–533, ದಾರುಲ್ ಕುತುಬ್ ಅಲ್–ಇಲ್ಮಿಯ, ಬೈರುತ್, 1996) (ತಾರಿಖ್ ಅಲ್–ಖಾಮಿಸ್, ಸಂಪುಟ 2, ಪುಟಗಳು 523, ದಾರುಲ್ ಕುತುಬ್ ಅಲ್–ಇಲ್ಮಿಯ, 2009) (ಬುಖಾರಿ, ಕಿತಾಬ್ ಅಲ್–ಮಘಾಜಿ, ಅಧ್ಯಾಯ ಘಜ್ವತ್ ಅಲ್–ಅವ್ತಾಸ್, ಹದೀಸ್–4323)

ನಂತರ, **ಧುಲ್–ಕಫ್ಫೈನ್** ಕಡೆಗೆ ಇರುವ **ತುಫೈಲ್ ಬಿನ್ ಅಮ್ರುದ್ ದೌ**ಸಿಯವರ ದಂಡಯಾತ್ರೆಯ ಪ್ರಸ್ತಾಪವಿದೆ. ಇದು ಶವ್ವಾಲ್ 8 ಹಿಜರಿಯಲ್ಲಿ ನಡೆಯಿತು. ಹಝ್ರತ್ ಪೈಗಂಬರ್(ಸ) ಹುನೈನ್ ನಿಂದ ತಾಯಿಫ್ ಕಡೆಗೆ ನಡೆಯಲು ಪ್ರಾರಂಭಿಸಿದಾಗ, ಅವರು ಧುಲ್–ಕಫ್ಫೈನ್ ಎಂಬ ವಿಗ್ರಹವನ್ನು ಕೆಡವಲು ತುಫೈಲ್ ದೌಸಿಯನ್ನು ಕಳುಹಿಸಿದರು. ಹಝ್ರತ್ ತುಫೈಲ್ ದಾವ್ಸ್ ಗೋತ್ರಕ್ಕೆ ಸೇರಿದವರು ಮತ್ತು ಅವರ ಜನರ ಪ್ರಸಿದ್ಧ ಕವಿ, ಮತ್ತು ವಿದ್ವಾಂಸರಾಗಿದ್ದರು. ಅವರು ಹಝ್ರತ್ ಪೈಗಂಬರ್(ಸ)ರ ಮಕ್ಕದಲ್ಲಿ ವಾಸಿಸಿದ ಅವಧಿಯಲ್ಲಿ ಅವರು ಹಝ್ರತ್ ಪೈಗಂಬರ್(ಸ)ರು ಅವರನ್ನು ಭೇಟಿಯಾಗಿ ಆ ಸಮಯದಲ್ಲಿ ಮುಸ್ಲಿಮರಾದರು. ಹುನೈನ್ ಯುದ್ಧದ ನಂತರ, ಅವರು ಸ್ವತಃ ಹಝ್ರತ್ ಪೈಗಂಬರ್(ಸ) ಅವರನ್ನು ದುಲ್–ಕಫ್ಫೈನ್ ಎಂಬ ವಿಗ್ರಹವನ್ನು ಕೆಡವಲು ಕಳುಹಿಸುವಂತೆ ವಿನಂತಿಸಿಕೊಂಡರು ಎಂದು ಹೇಳಲಾಗುತ್ತದೆ. ಹಝ್ರತ್ ಪೈಗಂಬರ್(ಸ) ಅವರನ್ನು ಈ ದಂಡಯಾತ್ರೆಯ ನಾಯಕನನ್ನಾಗಿ ನೇಮಿಸಿ ಹೀಗೆ ಸಲಹೆಯನ್ನು ನೀಡಿದರು:

ಸಲಾಮ್ ಅನ್ನು ಹೆಚ್ಚಾಗಿ ಹರಡಬೇಕು. ಅಂದರೆ, ಶಾಂತಿಯನ್ನು ಹರಡಿರಿ, ಜನರಿಗೆ ಆಹಾರವನ್ನು ನೀಡಿ, ಅವರನ್ನು ಹಸಿವಿನಿಂದ ಸಾಯಿಸಬಾರದು, ಓರ್ವ ಗೌರವಾನ್ವಿತ ವ್ಯಕ್ತಿಯು ತನ್ನ ಕುಟುಂಬದ ಮುಂದೆ ನಾಚಿಕೆಪಡುವಂತೆ, ಸರ್ವಶಕ್ತನಾದ ಅಲ್ಲಾಹನ ಮುಂದೆ ನಾಚಿಕೆಪಡಬೇಕು. ತಪ್ಪು ಅಥವಾ ಪಾಪ ನಡೆದಾಗಲೆಲ್ಲಾ, ಅದರ ನಂತರ ತಕ್ಷಣವೇ ಒಳ್ಳೆಯ ಕಾರ್ಯವನ್ನು ಮಾಡಿ, ಏಕೆಂದರೆ ಒಳ್ಳೆಯ ಕಾರ್ಯಗಳು ಪಾಪಗಳನ್ನು ಅಳಿಸಿಹಾಕುತ್ತವೆ.

ಹೀಗೆ ಹಝ್ರತ್ ಪೈಗಂಬರ್(ಸ) ಅವರಿಗೆ ಸಲಹೆ ನೀಡಿದರು ಮತ್ತು ನಂತರ ತಮ್ಮ ಸಮುದಾಯದ ಜನರನ್ನು ತಮ್ಮೊಂದಿಗೆ ಕರೆದುಕೊಂಡು ಹೋಗಿ ಈ ಕೆಲಸವನ್ನು ಪೂರ್ಣಗೊಳಿಸಿದ ನಂತರ, ತಾಯಿಫ್‌ಗೆ ಹಿಂತಿರುಗಿ ಎಂದು ಹೇಳಿದರು. ಆದ್ದರಿಂದ, ಹಝ್ರತ್ ತುಫೈಲ್ ತಮ್ಮ ಸಮುದಾಯದ ನಾಲ್ಕು ನೂರು ಜನರನ್ನು ತಮ್ಮೊಂದಿಗೆ ಕರೆದುಕೊಂಡು ಹೋಗಿ ಈ ಮರದ ವಿಗ್ರಹಕ್ಕೆ ಬೆಂಕಿ ಹಚ್ಚಿದರು ಮತ್ತು ಆ ಸಮಯದಲ್ಲಿ ಈ ವಚನಗಳನ್ನು ಪಠಿಸಿದರು: ಓ ದುಲ್–ಕಫ್ಫೈನ್! ನೀವು ಈಗ ಸೃಷ್ಟಿಸಲ್ಪಟ್ಟಿರುವುದರಿಂದ ನಾನು ನಿಮ್ಮ ಆರಾಧಕರಲ್ಲಿ ಇಲ್ಲ, ಆದರೆ ನಮ್ಮ ಸೃಷ್ಟಿ ನಿಮ್ಮ ಸೃಷ್ಟಿಗಿಂತ ಮುಂಚೆಯೇ ಸಂಭವಿಸಿದೆ. ಇಗೋ, ನಾನು ನಿಮ್ಮ ಇಡೀ ಅಸ್ತಿತ್ವವನ್ನು ಒಳಗಿನಿಂದ ಬೆಂಕಿಯ ಜ್ವಾಲೆಗಳಿಂದ ತುಂಬಿಸಿದ್ದೇನೆ. ಈ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ, ಅವರು ತಾಯಿಫ್‌ಗೆ ಹಿಂತಿರುಗಿದರು. ಹಝ್ರತ್ ಪೈಗಂಬರ್(ಸ) ನಾಲ್ಕು ದಿನಗಳ ಹಿಂದೆ ತಾಯಿಫ್‌ಗೆ ಮರಳಿದರು.

ಹಝ್ರತ್ ಪೈಗಂಬರ್(ಸ) ಅವರು ನಾಲ್ಕು ನೂರು ವೀರ ಯೋಧರನ್ನು ತಮ್ಮೊಂದಿಗೆ ಕರೆತಂದರು ಮತ್ತು ಆ ಕಾಲಕ್ಕೆ ಈ ಆಧುನಿಕ ಯುದ್ಧ ಆಯುಧಗಳಾದ ಕವಣೆ ಮತ್ತು ಡಬ್ಬಾಬಾವನ್ನು ಸಹ ತಂದರು. ಕವಣೆಯು ದೊಡ್ಡ ಕಲ್ಲುಗಳನ್ನು ಎಸೆಯಲು ಬಳಸುವ ಸಾಧನವಾಗಿದೆ, ಅಂದರೆ ಅದು ಫಿರಂಗಿಯಂತಿದೆ, ಮತ್ತು ಡಬ್ಬಾಬಾವು ಇಂದಿನ ಶಸ್ತ್ರಸಜ್ಜಿತ ಕಾರುಗಳಂತಹ ಬಲವಾದ ಮತ್ತು ಮುಚ್ಚಿದ ಮರದ ಪೆಟ್ಟಿಗೆಯಾಗಿದೆ, ಅದು ಆ ದಿನಗಳಲ್ಲಿ ಹಾಗೆ ಇತ್ತು, ಇದರಲ್ಲಿ ಹಲವಾರು ಪುರುಷರು ಕೆಳಗಿನಿಂದ ಪ್ರವೇಶಿಸಿ ಕೋಟೆಯ ಗೋಡೆಯನ್ನು ತಲುಪಿ ಶತ್ರುಗಳಿಂದ ಸುರಕ್ಷಿತವಾಗಿದ್ದಾಗ ಗೋಡೆಯನ್ನು ಭೇದಿಸುತ್ತಿದ್ದರು. ಈ ಆಯುಧಗಳನ್ನು ಮೊದಲ ಬಾರಿಗೆ ತಾಯಿಫ್ ಯುದ್ಧದಲ್ಲಿ ಬಳಸಲಾಯಿತು.

(ದಾಎರಾ ಮಾ'ಆರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾಹ್(ಸ), ಸಂಪುಟ 9, ಪುಟಗಳು 337–339, ಬಾಜ್ಮ್ ಇಕ್ಬಾಲ್ ಲಾಹೋರ್) (ತಬಕಾತ್ ಅಲ್–ಕುಬ್ರಾ ಸಂಪುಟ 2, ಪುಟಗಳು 119–120 ದಾರುಲ್ ಕುತುಬ್ ಅಲ್–ಇಲ್ಮಿಯಾ, ಬೈರುತ್ 1990) (ಫರ್ಹಂಗ್ ಸೀರತ್, ಪುಟ–120, ಝುವಾರ್ ಅಕಾಡೆಮಿ ಕರಾಚಿ 2003) (ಫಿರೋಝುಲ್ ಲುಗ್ಹಾತ್, ಪುಟ 1291. ಫಿರೋಜ್ ಸನ್ಸ್ ಲಾಹೋರ್)

ತಾಯಿಫ್ ಕದನವು ಶವ್ವಾಲ್ 8 ಹಿಜರಿಯಲ್ಲಿ ನಡೆಯಿತು. ಇದರ ಇತಿಹಾಸವೆಂದರೆ ತಾಯಿಫ್ ಮಕ್ಕಾದಿಂದ ಪೂರ್ವಕ್ಕೆ ತೊಂಬತ್ತು ಕಿಲೋಮೀಟರ್‌ಗಳಷ್ಟು ಪ್ರಸಿದ್ಧ ನಗರವಾಗಿದೆ. ತಾಯಿಫ್ ಬಹಳ ಬಲವಾದ ಸ್ಥಳವಾಗಿದೆ. ರಕ್ಷಣೆಗಾಗಿ ಅದರ ಸುತ್ತಲೂ ನಾಲ್ಕು ಗೋಡೆಗಳನ್ನು ಹೊಂದಿದ್ದರಿಂದ ತಾಯಿಫ್ ಅನ್ನು ಹೀಗೆ ಕರೆಯಲಾಗುತ್ತದೆ. ಇಲ್ಲಿ ವಾಸಿಸುತ್ತಿದ್ದ ಸಖೀಫ್ ಗೋತ್ರದವರು ತುಂಬಾ ಧೈರ್ಯಶಾಲಿಗಳು. ತುಂಬಾ ಧೈರ್ಯಶಾಲಿಗಳು. ಇದು ಇಡೀ ಅರೇಬಿಯಾದಲ್ಲಿ ಪ್ರಮುಖವಾಗಿತ್ತು ಮತ್ತು ಖುರೈಶ್‌ನ ಗೆಳೆಯರಂತೆ ಇತ್ತು. ಇಲ್ಲಿನ ಮುಖ್ಯಸ್ಥ ಉರ್ವಾ ಬಿನ್ ಮಸ್‌ಊದ್, ಅಬು ಸುಫ್ಯಾನ್ ಅವರ ಮಗಳನ್ನು ವಿವಾಹವಾದರು. ಮಕ್ಕಾದ ಅವಿಶ್ವಾಸಿಗಳು ಹೇಳುತ್ತಿದ್ದರು: ಖುರ್‌ಆನ್ ಅವತರಿಸಿದರೆ ಅದು ಮಕ್ಕಾ ಅಥವಾ ತಾಯಿಫ್ ನಾಯಕರಿಗೆ ಅವತರಿಸುತ್ತದೆ. ಹಝ್ರತ್ ಪೈಗಂಬರ್(ಸ) ರ ಬದಲಿಗೆ, ಅದನ್ನು ಯಾರಾದರೂ ಮಹಾನ್ ವ್ಯಕ್ತಿಗೆ ಅವತರಿಸಬೇಕಾಗಿತ್ತು ಎಂದು ಅವರು ಹೇಳುತ್ತಿದ್ದರು. ಈ ಎರಡು ಸ್ಥಳಗಳಲ್ಲಿ ಮಹಾನ್ ಪುರುಷರು ವಾಸಿಸುತ್ತಿದ್ದರು. ಇಲ್ಲಿನ ಜನರು ಯುದ್ಧ ಕಲೆಯ ಬಗ್ಗೆಯೂ ಪರಿಚಿತರಾಗಿದ್ದರು. ಏನೇ ಇರಲಿ, ಇಲ್ಲಿ ಸುರಕ್ಷಿತ ಕೋಟೆ ಇತ್ತು. ನಗರದ ಜನರು ಇಡೀ ವರ್ಷಕ್ಕೆ ಬೇಕಾದಷ್ಟು ಸಾಮಗ್ರಿಗಳನ್ನು ಸಂಗ್ರಹಿಸಿದ್ದರು. ಅವರು ಎಲ್ಲೆಡೆ ಕವಣೆಯಂತ್ರಗಳು ಮತ್ತು ನುರಿತ ಬಿಲ್ಲುಗಾರರನ್ನು ಹೊಂದಿದ್ದರು.

ಈ ಯುದ್ಧವು ವಾಸ್ತವವಾಗಿ ಹುನೈನ್ ಕದನದ ಮುಂದುವರಿಕೆಯಾಗಿದೆ, ಏಕೆಂದರೆ ಹವಾಝಿನ್ ಮತ್ತು ಸಖೀಫ್‌ನ ಹೆಚ್ಚಿನ ಸೋತ ಪುರುಷರು ತಮ್ಮ ನಾಯಕ ಮಾಲಿಕ್ ಬಿನ್ ಅವ್ಫ್ ನಸ್ರಿಯೊಂದಿಗೆ ತಾಯಿಫ್‌ಗೆ ಓಡಿಹೋಗಿ ಅಲ್ಲಿ ವಾಸಿಸುತ್ತಿದ್ದರು. ಆದ್ದರಿಂದ, ಹುನೈನ್ ತೊರೆದ ನಂತರ, ಹಝ್ರತ್ ಪೈಗಂಬರ್(ಸ) ಎಲ್ಲಾ ಯುದ್ಧ ಸಂಪತ್ತನ್ನು ಮತ್ತು ಆರು ಸಾವಿರಕ್ಕೂ ಹೆಚ್ಚು ಬಂಧಿತ ಗುಲಾಮರು ಮತ್ತು ಸೇವಕರನ್ನು ಮಕ್ಕಾದ ಬಳಿಯ ಜಿ'ರಾನಾ ಎಂಬ ಕಣಿವೆಗೆ ಕಳುಹಿಸಿದರು ಮತ್ತು ಸ್ವತಃ ತಾಯಿಫ್‌ಗೆ ಹೊರಟರು. ಜಿ'ರಾನಾ ಎಂಬುದು ಮಕ್ಕಾ ಮತ್ತು ತಾಯಿಫ್ ನಡುವಿನ ಮಾರ್ಗದಲ್ಲಿ ಮಕ್ಕಾದ ಬಳಿಯ ಬಾವಿಯ ಹೆಸರಾಗಿದೆ. ಮಕ್ಕಾದಿಂದ ಇದರ ದೂರ ಸುಮಾರು ಹದಿನೇಳು ಮೈಲುಗಳು. ಅವರು ಬುದೈಲ್ ಬಿನ್ ವರ್ಕಾ ಅಥವಾ ಹಝ್ರತ್ ಮಸ್‌ಊದ್ ಬಿನ್ ಅಮ್ರ್ ಅಲ್–ಘಿಫಾರಿ ಅವರನ್ನು ಯುದ್ಧ ಸಂಪತ್ತಿನ ರಕ್ಷಕರನ್ನಾಗಿ ನೇಮಿಸಿದರು.

(ಶಿಬ್ಲಿ ಅಲ್–ನುಮಾನಿ, ಭಾಗ 1, ಪುಟ 360, ಮಕ್ತಬ ಇಸ್ಲಾಮಿಯಾ 2012 ರಿಂದ ಸೀರತ್ ಅಲ್–ನಬಿ (ಸ)) (ಅಲ್–ರಹೀಕ್ ಅಲ್–ಮಖ್ತುಮ್ (ಮುದ್ರೆ) ಪುಟ 567, ಮಕ್ತಬ ಅಲ್–ಸಲಾಫಿಯಾ ಲಾಹೋರ್ 2002) (ಸಬ್ಲುಲ್ ಹುದಾ ವರ್‌ಶಾದ್ ಫಿ ಸೀರತ್ ಖೈರ್ ಅಲ್–ಇಬಾದ್, ಸಂಪುಟ 5, ಪುಟಗಳು 338–339, ಮಕ್ತಬ ದಾರ್ ಅಲ್–ಕುತುಬ್ ಅಲ್–ಇಲ್ಮಿಯ ಬೈರುತ್ 1993) (ಫರ್ಹಾಂಗ್ ಅಲ್–ಸೀರತ್, ಪುಟಗಳು 88–178, ಝುವಾರ್ ಅಕಾಡೆಮಿ ಕರಾಚಿ 2003)

ಆದಾಗ್ಯೂ, ಹಝ್ರತ್ ಪೈಗಂಬರ್(ಸ) ಹಝ್ರತ್ ಖಾಲಿದ್ ಬಿನ್ ವಲೀದ್(ರ) ರ ನೇತೃತ್ವದಲ್ಲಿ ಒಂದು ಸಾವಿರ ಸೈನಿಕರ ಮುಂಚೂಣಿ ಪಡೆಯನ್ನು ಕಳುಹಿಸಿದರು. ಅವರು ಅಲ್ಲಿಗೆ ತಲುಪಿದಾಗ, ಕೋಟೆಯ ಜನರೊಂದಿಗೆ, ಅಂದರೆ ತಾಯಿಫ್ ಜನರೊಂದಿಗೆ ಮಾತುಕತೆ ನಡೆಸಲು ಪ್ರಯತ್ನಿಸಿದರು, ಆದರೆ ಕೋಟೆಯ ಜನರು ಇದಕ್ಕೆ ಸಿದ್ಧರಿರಲಿಲ್ಲ. ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರನ್ನು ಕಳುಹಿಸಿದ ನಂತರ, ಹಝ್ರತ್ ಪೈಗಂಬರ್(ಸ) ಸ್ವತಃ ತಾಯಿಫ್‌ಗೆ ತೆರಳಿದರು. ಅವರೊಂದಿಗೆ ಈ ಮಾರ್ಗಗಳ ತಜ್ಞರು ಸೈನ್ಯವನ್ನು ಮುನ್ನಡೆಸುತ್ತಲೇ ಇದ್ದರು. ದಾರಿಯಲ್ಲಿ, ಹುನೈನ್ ಯುದ್ಧದ ಸಮಯದಲ್ಲಿ, ಶತ್ರು ಸೈನ್ಯದ ಕಮಾಂಡರ್ ಮಾಲಿಕ್ ಬಿನ್ ಅವ್ಫ್‌ಗೆ ಸೇರಿದ ಕೋಟೆ ಇತ್ತು. ಆ ಸಮಯದಲ್ಲಿ ಯಾರಾದರೂ ಅದರಲ್ಲಿ ವಾಸಿಸುತ್ತಿದ್ದಾರೆಯೇ ಎಂದು ಅವರು(ಸ) ಕೇಳಿದರು. ಅದು ಖಾಲಿಯಾಗಿದೆ ಎಂದು ಅವರಿಗೆ ತಿಳಿಸಲಾಯಿತು, ಆದ್ದರಿಂದ ಅವರು(ಸ) ಅದನ್ನು ಕೆಡವಿದರು. ನಂತರ, ತನ್ನ ಪ್ರಯಾಣವನ್ನು ಮುಂದುವರೆಸುತ್ತಾ, ತಾಯಿಫ್ ತಲುಪಿ ತಾಯಿಫ್ ಕೋಟೆಯ ಬಳಿ ಬೀಡುಬಿಟ್ಟು ಅದನ್ನು ಮುತ್ತಿಗೆ ಹಾಕಿದರು. (ಸಬ್ಲ್ ಅಲ್–ಹುದಾ ಅಲ್–ರಶಾದ್, ಸಂಪುಟ 5, ಪುಟ 382, ದಾರುಲ್–ಕುತ್ಬ್ ಅಲ್–ಇಲ್ಮಿಯಾ, ಬೈರುತ್, 1993) (ಅಲ್–ರಹೀಕ್ ಅಲ್–ಮಖ್ತುಮ್, ಪುಟ 567, ಅಲ್–ಮುಕ್ತಾಬ್ ಅಲ್–ಸಲಾಫಿಯಾ, ಲಾಹೋರ್, 2002) (ಅಲ್–ಲು'ಲ್–ಮುಕ್ನೂನ್, ಸೀರತ್ ಅಲ್–ಎನ್‌ಸೈಕ್ಲೋಪೀಡಿಯಾ, ಸಂಪುಟ. 9, ಪುಟ. 305, ದರ್ಬ್ರಾ ಅಲ್–ಸಲಾಮ್ ಗ್ರಂಥಾಲಯ) (ಕಿತಾಬ್ ಅಲ್–ಮಘಜಿ ಅಲ್–ವಾಕಿದಿ, ಸಂಪುಟ.

3, ಪುಟ. 924-925 ಆಲಮ್ ಅಲ್-ಕಿತ್ಬ್ 1984) (ದಾಏರ ಮಾರಿಫ್ ಸೀರತ್ ಮುಹಮ್ಮದ್(ಸ), ಸಂಪುಟ-9, ಪುಟ-347, ಬಾಜ್ಮ್ ಇಕ್ಬಾಲ್ ಲಾಹೋರ್)

ತಾಯಿಫ್‌ನ ಜನರು ಈ ಯುದ್ಧಕ್ಕೆ ಬಹಳ ಸಮಯದಿಂದ ತಯಾರಿ ನಡೆಸುತ್ತಿದ್ದರು. ಅವರು ಕೋಟೆಯನ್ನು ನಿರ್ಮಿಸಿ ದುರಸ್ತಿ ಮಾಡಿದ್ದರು ಮತ್ತು ಒಂದು ವರ್ಷದ ಧವಸ, ಧಾನ್ಯ ಇತ್ಯಾದಿಗಳನ್ನು ಸಂಗ್ರಹಿಸಿದ್ದರು. ಹುನೈನ್ ಕ್ಷೇತ್ರದಲ್ಲಿ ಅನಿರೀಕ್ಷಿತ ಸೋಲನ್ನು ಅನುಭವಿಸಿದ ನಂತರ, ತಪ್ಪಿಸಿಕೊಳ್ಳಲು ಸಾಧ್ಯವಾದವರೆಲ್ಲರೂ ಓಡಿಹೋಗಿ ಈ ಕೋಟೆಯಲ್ಲಿ ಆಶ್ರಯ ಪಡೆದು ಕೋಟೆಯ ದ್ವಾರಗಳನ್ನು ಮುಚ್ಚಿದರು.

(ಸಬ್ಲುಲ್ ಹುದಾ ವರ್ರಶಾದ್, ಸಂಪುಟ-5, ಪುಟ-382, ದಾರುಲ್ ಕುತುಬ್ ಅಲ್-ಇಲ್ಮಿಯಾ ಬೈರುತ್ 1993) (ಅಲ್-ಲು'ಲ್-ಮುಕ್ನುನ್, ಸೀರತ್ ವಿಶ್ವಕೋಶ, ಸಂಪುಟ-9, ಪುಟ-309, ಮಕ್ತಬಾ ದಾರುಸ್ಸಲಾಮ್)

ಹಝ್ರತ್ ಪೈಗಂಬರ್(ಸ) ಆರಂಭದಲ್ಲಿ ತಾಯಿಫ್‌ಗೆ ಬಹಳ ಹತ್ತಿರದಲ್ಲಿ ತೆರೆದ ಸ್ಥಳದಲ್ಲಿ ಬೀಡುಬಿಟ್ಟಿದ್ದರು. ಕೋಟೆಯ ಬಿಲ್ಲುಗಾರರು ಭೀಕರ ಬಾಣಗಳನ್ನು ಹಾರಿಸಿ ಅನೇಕ ಮುಸ್ಲಿಮರನ್ನು ಗಾಯಗೊಳಿಸಿದಾಗ ಸೈನ್ಯವು ಇನ್ನೂ ಸಂಪೂರ್ಣವಾಗಿ ಸಿದ್ಧವಾಗಿರಲಿಲ್ಲ. ಅಷ್ಟರಲ್ಲಿ, ಹಝ್ರತ್ ಹುಬಾಬ್ ಬಿನ್ ಮುಂಧೀರ್ ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು, "ಓ ಅಲ್ಲಾಹನ ಸಂದೇಶವಾಹಕರೇ, ಈ ಸ್ಥಳವು ನಮ್ಮ ಶಿಬಿರಕ್ಕೆ ಸೂಕ್ತವಲ್ಲ ಏಕೆಂದರೆ ತಾಯಿಫ್ ಜನರು ನುರಿತ ಬಿಲ್ಲುಗಾರರು ಮತ್ತು ಅವರ ಬಾಣಗಳು ದೂರ ತಲುಪುತ್ತವೆ." ಎಂದು ಹೇಳಿದಾಗ ಹಝ್ರತ್ ಪೈಗಂಬರ್(ಸ) ಅವರಿಗೆ ಸೂಕ್ತವಾದ ಸ್ಥಳವನ್ನು ಆಯ್ಕೆ ಮಾಡಲು ಹೇಳಿದರು. ನಂತರ ಇಡೀ ಸೈನ್ಯವು ಹೊಸ ಸ್ಥಳಕ್ಕೆ ಸ್ಥಳಾಂತರಗೊಂಡಿತು. ಮುತ್ತಿಗೆಯ ಸಮಯದಲ್ಲಿ, ಎರಡೂ ಕಡೆಯಿಂದ ಬಿಲ್ಲುಗಾರಿಕೆ ಮತ್ತು ಕಲ್ಲು ಎಸೆಯುವ ಘಟನೆಗಳು ಸಹ ಸಂಭವಿಸಿದವು. ಈ ಪರಿಸ್ಥಿತಿಯನ್ನು ನಿಭಾಯಿಸಲು, ಹಝ್ರತ್ ಪೈಗಂಬರ್(ಸ) ಒಂದು (ಮಂಜನೀಕ್) ಕವಣೆಯನ್ನು ಸ್ಥಾಪಿಸಿ ತಾಯಿಫ್ ಜನರ ಮೇಲೆ ದೊಡ್ಡ ಕಲ್ಲುಗಳನ್ನು ಎಸೆದರು. ದುಲ್-ಕಫ್ಫೈನ್ ದಂಡಯಾತ್ರೆಯಿಂದ ಹಿಂತಿರುಗುವಾಗ ಹಝ್ರತ್ ತುಫೈಲ್ ದಾವ್ಸಿ ತಮ್ಮೊಂದಿಗೆ ತಂದಿದ್ದ ಈ ಕವಣೆಯ ಬಗ್ಗೆ ಹೇಳಲಾಗಿದೆ. ಒಂದು ದಿನ, ಕಲ್ಲುಗಳ ಎಸೆಯುವಿಕೆಯಿಂದಾಗಿ ಕೋಟೆಯ ಗೋಡೆಗಳಲ್ಲಿ ಒಂದರಲ್ಲಿ ರಂಧ್ರವಾಯಿತು. ಆದ್ದರಿಂದ ಮುಸ್ಲಿಮರ ಗುಂಪೊಂದು ದಬ್ಬಾಬಾ ಮೂಲಕ ಕೋಟೆಯ ಗೋಡೆಯ ಕಡೆಗೆ ಮುನ್ನಡೆದರು, ಆ ಪೆಟ್ಟಿಗೆಯಿಂದ ಅವರಿಗೆ ರಕ್ಷಣೆ ನೀಡಲಾಗಿತ್ತು, ಅವರು ಅದರಲ್ಲಿ ಮುನ್ನಡೆಯಲು ಮತ್ತು ಅದರ ಮೂಲಕ ಅಲ್ಲಿಗೆ ಪ್ರವೇಶಿಸಲು ಸಾಧ್ಯವಾಯಿತು, ಆದರೆ ಅವರು ಮುಂದುವರೆದಾಗ, ಕೋಟೆಯ ಜನರು ಅವರ ಮೇಲೆ ಸುಡುವ ಕಬ್ಬಿಣದ ತುಂಡುಗಳನ್ನು ಎಸೆಯಲು ಪ್ರಾರಂಭಿಸಿದರು. ದಬ್ಬಾಬಾದಲ್ಲಿ ಬಹಳಷ್ಟು ಚರ್ಮವನ್ನು ಸಹ ಬಳಸಲಾಗಿರುವುದರಿಂದ, ಅದು ಬೆಂಕಿಗೆ ಆಹುತಿಯಾಯಿತು ಮತ್ತು ಮುಸ್ಲಿಂ ಮುಜಾಹಿದೀನ್‌ಗಳು ಅದರ ಕೆಳಗಿನಿಂದ ಹೊರಬರಬೇಕಾಯಿತು ಮತ್ತು ಅವರು ಹೊರಬಂದ ತಕ್ಷಣ, ತಾಯಿಫ್‌ನ ಜನರು ಅವರ ಮೇಲೆ ಬಾಣಗಳನ್ನು ಹೊಡೆದು ಅವರಲ್ಲಿ ಹೆಚ್ಚಿನವರನ್ನು ಹುತಾತ್ಮರಾದರು. ಈ ಸಮಯದಲ್ಲಿ, ಹಝ್ರತ್ ಪೈಗಂಬರ್(ಸ) ತಾಯಿಫ್ ಜನರ ದ್ರಾಕ್ಷಿತೋಟಗಳನ್ನು ಕತ್ತರಿಸಲು ಸಹ ಆದೇಶಿಸಿದರು. ಇದು ಕೊನೆಯ ಉಪಾಯ ಎಂದು ನಾನು ಭಾವಿಸುತ್ತೇನೆ. ನಂತರ ಅದನ್ನು ರದ್ದುಗೊಳಿಸಿದ್ದರಿಂದ ಇದನ್ನು ಸಾಮಾನ್ಯವಾಗಿ ಬೆದರಿಸಲು ಬಳಸಲಾಗುತ್ತಿತ್ತು ಎಂದು ನಾನು ಭಾವಿಸುತ್ತೇನೆ. ಮೊದಲಿಗೆ, ಕೋಟೆಯ ಜನರು ನಮ್ಮ ತೋಟಗಳನ್ನು ನೀವು ಸುಡಬೇಕು ಎಂದು ಬಯಸಿದರೆ ನೀವು ಅದನ್ನು ಸುಟ್ಟುಹಾಕಿ ಎಂದು ತುಂಬಾ ದರ್ಪದಿಂದ ಹೇಳಿದರು. ನೀವು ನಮ್ಮ ಮಣ್ಣು ಮತ್ತು ನೀರನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ. ಅವರು ತಮ್ಮ ಪ್ರದೇಶದ ಫಲವತ್ತತೆಯ ಬಗ್ಗೆ ತುಂಬಾ ವಿಶ್ವಾಸ ಹೊಂದಿದ್ದರು ಮತ್ತು ನಾವು ಮತ್ತೆ ನೆಡುತ್ತೇವೆ ಎಂಬುದು ಅವರ ಉದ್ದೇಶವಾಗಿತ್ತು, ನಾವು ಹೆದರುವುದಿಲ್ಲ, ಆದರೆ ಅವರು ನಿಜವಾಗಿಯೂ ತೋಟಗಳನ್ನು ನಾಶಮಾಡಲು ಪ್ರಾರಂಭಿಸಿದಾಗ. ಮತ್ತು ನೀವು ಹಾಗೆ ಹೇಳುತ್ತಿದ್ದೀರಿ ಎಂದು ತೋರಿಸಲು ಅವರು ಕೆಲವು ಭಾಗಗಳನ್ನು ಕತ್ತರಿಸಿದಾಗ, ತಾಯಿಫ್‌ನ ಮುಖ್ಯಸ್ಥ ಸುಫ್ಯಾನ್ ಬಿನ್ ಅಬ್ದುಲ್ಲಾ ಹಝ್ರತ್ ಪೈಗಂಬರ್(ಸ) ಅವರನ್ನು ಕೇಳಿದರು, ನೀವು ನಮ್ಮ ತೋಟಗಳನ್ನು ಏಕೆ ನಾಶಪಡಿಸುತ್ತಿದ್ದೀರಿ? ನೀವು ನಮ್ಮನ್ನು ಗೆದ್ದರೆ, ಇದೆಲ್ಲವೂ ನಿಮ್ಮದಾಗುತ್ತದೆ. ಇಲ್ಲದಿದ್ದರೆ, ಅಲ್ಲಾಹನ ಸಲುವಾಗಿ ಮತ್ತು ರಕ್ತಸಂಬಂಧವನ್ನು ಉಳಿಸಿಕೊಳ್ಳುವಾಗ, ಇದನ್ನು ಮಾಡಬೇಡಿ. ಅಲ್ಲಾಹನ ಸಲುವಾಗಿ, ನೀವು ನಮ್ಮೊಂದಿಗೆ ರಕ್ತಸಂಬಂಧವನ್ನು ಸಹ ಕಾಪಾಡಿಕೊಳ್ಳಬೇಕು ಮತ್ತು ಇದನ್ನು ಮಾಡಬೇಡಿ ಎಂದು ಅವರು ವಿನಂತಿಸಿದರು. ಮಕ್ಕಾದ ಖುರೈಷಿಗಳು ತಾಯಿಫ್ ಜನರೊಂದಿಗೆ ಅನೇಕ ಸಂಬಂಧಿಕರನ್ನು ಹೊಂದಿದ್ದರು. ಅವರು ಹಾಗೆ ಮಾಡದಿದ್ದರೂ, ಹಝ್ರತ್ ಪೈಗಂಬರ್(ಸ) ಕಠಿಣವಾಗಿರದ ತಮ್ಮದೇ ಆದ ಉದಾಹರಣೆಯನ್ನು ಹೊಂದಿದ್ದರು. ಆದ್ದರಿಂದ, ಸುಫ್ಯಾನ್ ಅವರ ಕೋರಿಕೆಯ ಮೇರೆಗೆ, ಹಝ್ರತ್ ಪೈಗಂಬರ್(ಸ) ಈ ತೋಟಗಳನ್ನು ತೊರೆದರು ಮತ್ತು ಅವುಗಳನ್ನು ಕತ್ತರಿಸಲಿಲ್ಲ.

(ಇಬ್ನ್ ಹಿಶಾಮ್‌ನ ಸೀರತ್ ಅಲ್-ನಬವಿಯಾ, ಪುಟ 793, ಅಲ್-ತಾರಿಕ್ ಅಲ್-ತಾಯಿಫ್, ದಾರುಲ್-ಕುತುಬ್ ಅಲ್-ಇಲ್ಮಿಯಾ, 2001) (ಶರ್ಹ ಅಲ್-'ಅಲ್ಲಾಮಾ ಅಲ್-ಜರ್ಕಾನಿ ಅಲಲ್ ಮವಾಹಿಬ್ ಲಿದ್ದುನಿಯಾ, ಭಾಗ-4, ಪುಟ-10, ದಾರುಲ್ ಕುತುಬ್ ಇಲ್ಮಿಯಾ, ಬೈರುತ್, 1996) (ಘಜ್ವಾ ಅಲ್-ಹುನೈನ್, ಇಜ್ಬಾಶಿಲ್, ಪುಟಗಳು 227-229, 242, ನಫೀಸ್ ಅಕಾಡೆಮಿ) (ದಾಏರಾ ಮಾರಿಫ್ ಸೀರತ್ ಮುಹಮ್ಮದ್ ರಸುಲುಲ್ಲಾಹ್(ಸ), ಸಂಪುಟ 9, ಪುಟ 349, ಇರ್ಫುಬಲ್, ಲಾಲ್ಹೋರೆ) (ಅಲ್-ಲುಲ್ ಅಲ್-ಮುಕ್ನುನ್ ಸೀರತ್ ಎನ್‌ಸೈಕ್ಲೋಪೀಡಿಯಾ, ಸಂಪುಟ 9, ಪುಟ 312, ದಾರ್ ಅಲ್-ಸಲಾಮ್ ಲೈಬ್ರರಿ)

ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಹಾಬಗಳು ತಾಯಿಫ್ ಜನರೊಂದಿಗೆ ಅರ್ಧ ತಿಂಗಳು ಅಥವಾ ಅದಕ್ಕಿಂತ ಹೆಚ್ಚು ಕಾಲ ಯುದ್ಧದಲ್ಲಿ ತೊಡಗಿದ್ದರು, ಆದರೆ ವಾಸ್ತವವಾಗಿ, ಹುನೈನ್‌ನ ಸೋಲಿನ ಭಯ ಮತ್ತು ಭೀತಿಯು ತಾಯಿಫ್ ಜನರ ಹೃದಯಗಳನ್ನು ಆವರಿಸಿತ್ತು, ಅವರು ಕೋಟೆಯ ಒಳಗಿನಿಂದ ಹೋರಾಡುತ್ತಲೇ ಇದ್ದರು ಮತ್ತು ಹೊರಬರಲಿಲ್ಲ. ಈ ಸಮಯದಲ್ಲಿ, ಅವರಲ್ಲಿ ಒಬ್ಬರೂ ಮುತ್ತಿಗೆಯಿಂದ ಹೊರಬಂದು ಹೋರಾಡಲಿಲ್ಲ.

(ತಾರಿಖ್ ಅಲ್-ತಬರಿ, ಸಂಪುಟ 2, ಪುಟ 171. ದಾರುಲ್ ಕುತುಬ್ ಅಲ್-ಇಲ್ಮಿಯಾ, ಬೈರುತ್, 1987) (ಮೂಲ: ಬಶೀಲ್ ಅವರಿಂದ ಘಜ್ವಾ ಹುನೈನ್, ಪುಟ 244, ನಫೀಸ್ ಅಕಾಡೆಮಿ)

ಒಮ್ಮೆ ಖಾಲಿದ್ ಬಿನ್ ವಲೀದ್ ಮೈದಾನಕ್ಕೆ ಬಂದು ಸಖೀಫ್‌ನ ಧೈರ್ಯಶಾಲಿ ಪುರುಷರನ್ನು ಸವಾಲು ಮಾಡಿ ಅವರನ್ನು ಹೋರಾಡಲು ಆಹ್ವಾನಿಸಿದರು, ಆದರೆ ಪದೇ ಪದೇ ಕರೆ ನೀಡಿದರೂ, ಸಖೀಫ್‌ನ ಮುಖ್ಯಸ್ಥ ಅಬ್ದುಲ್-ಯಲೀಲ್, ಹಝ್ರತ್ ಖಾಲಿದ್ ಅವರನ್ನು ಜೋರಾಗಿ ಕರೆದು ನಮ್ಮಲ್ಲಿ ಯಾರೂ ನಿಮ್ಮ ವಿರುದ್ಧ ಹೋರಾಡಲು ಬರುವುದಿಲ್ಲ. ನಾವು ನಮ್ಮ ಕೋಟೆಯಲ್ಲಿ ಸುರಕ್ಷಿತರಾಗಿದ್ದೇವೆ ಮತ್ತು ಇಡೀ ವರ್ಷ ನಮ್ಮಲ್ಲಿ ಆಹಾರ ಮತ್ತು ಸರಬರಾಜುಗಳಿವೆ. ನಮಗೆ ಚಿಂತೆ ಮಾಡಲು ಏನೂ ಇಲ್ಲ ಎಂದು ಹೇಳಿದನು. ಅದೇ ಸಮಯದಲ್ಲಿ, ಹಝ್ರತ್ ಯಝೀದ್ ಬಿನ್ ಝುಮ್‌ಅ ಒಮ್ಮೆ ಕೋಟೆಯ ಜನರೊಂದಿಗೆ ನೀವು ನನಗೆ ಸುರಕ್ಷತೆ ನೀಡಿದರೆ ನಾನು ನಿಮ್ಮೊಂದಿಗೆ ಮಾತನಾಡಲು ಬಯಸುತ್ತೇನೆ ಎಂದು ಕೇಳಿಕೊಂಡರು, ನೀವು ನನಗೆ ಹಾನಿ ಮಾಡುವುದಿಲ್ಲ ಎಂದು ನನಗೆ ಖಾತರಿ ನೀಡಿ. ನಾನು ರಾಯಭಾರಿಯಾಗಿ ಬರಲು ಬಯಸುತ್ತೇನೆ. ಅವರು ಅವನಿಗೆ ಸುರಕ್ಷತೆ ನೀಡಿ, "ಸರಿ, ನಾವು ಅವನಿಗೆ ಸುರಕ್ಷತೆ ನೀಡುತ್ತೇವೆ" ಎಂದು ಹೇಳಿದರು. ಅವರು ಕೋಟೆಯನ್ನು ಸಮೀಪಿಸಿದರು, ಆದರೆ ಅವರು ತಮ್ಮ ವಾಗ್ದಾನವನ್ನು ಮುರಿದು ಅವರ ಮೇಲೆ ಬಾಣಗಳನ್ನು ಹೊಡೆಯಲು ಪ್ರಾರಂಭಿಸಿದರು, ಹೀಗೆ ಅವರು ಹುತಾತ್ಮರಾದರು. ಇವರು ಈ ದಂಡಯಾತ್ರೆಯ ಮೊದಲ ಶಹೀದ್ ಆದರು. ಅವರು ಉಮ್ಮುಲ್ ಮು'ಮಿನೀನ್ ಹಝ್ರತ್ ಉಮ್ಮೆ ಸಲಮಾ(ರ) ಅವರ ಸೋದರಳಿಯರಾಗಿದ್ದರು. ಅವರನ್ನು ಶಹೀದ್ ಮಾಡಿದವನು ಹುದೈಲ್ ಬಿನ್ ಅಬಿ ಸಲತ್. ಅವನು ಅವರನ್ನು ಶಹೋದ್ ಮಾಡಿದ ನಂತರ, ಮುಸ್ಲಿಮರು ಈ ಘಟನೆಯಿಂದ ಭಯಭೀತರಾಗುತ್ತಾರೆ ಮತ್ತು ಏನನ್ನೂ ಮಾಡಲು ಸಾಧ್ಯವಾಗುವುದಿಲ್ಲ ಎಂದು ಭಾವಿಸಿ ಅವನು ಸೊಕ್ಕಿನಿಂದ ಕೋಟೆಯನ್ನು ತೊರೆದನು. ಆದರೆ ಅವರು ಕೋಟೆಯ ದ್ವಾರದಿಂದ ಹೊರಬಂದ ತಕ್ಷಣ, ಕೋಟೆಯ ದ್ವಾರದ ಬಳಿ ನಿಂತಿದ್ದ ಹಝ್ರತ್ ಉಝೀದ್ ಬಿನ್ ಝುಮ್‌ಅ ಅವರ ಸಹೋದರ ಯಾಖೂಬ್ ಬಿನ್ ಝುಮ್‌ಅ, ಅವನು ಅಲ್ಲಿ ಅಡಗಿಕೊಂಡಿದ್ದರು, ಆದ್ದರಿಂದ ಅವರು ಅವನನ್ನು ಹಿಡಿದು ಹಝ್ರತ್ ಪೈಗಂಬರ್(ಸ) ರವರ ಬಳಿ ಹಾಜರುಪಡಿಸಿ ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ! ಇವನು ನನ್ನ ಸಹೋದರನ ಕೊಲೆಗಾರ. ಆದ್ದರಿಂದ ಅವನನ್ನು ಕೊಲ್ಲಲಾಯಿತು. (ದಾಏರಾ ಮಾರಿಫ್ ಸೀರತ್ ಮುಹಮ್ಮದ್(ಸ), ಸಂಪುಟ-9, ಪುಟಗಳು 351 ರಿಂದ 354, ಬಾಜ್ಮ್ ಇಕ್ಬಾಲ್ ಲಾಹೋರ್) (ಬಶ್ಮಿಲ್ ಅವರಿಂದ ಘಜ್ವಾ ಹುನೈನ್, ಪುಟಗಳು 229 ರಿಂದ 230, ನಫೀಸ್ ಅಕಾಡೆಮಿ)

ಈ ವಿವರಗಳು ಇನ್ನೂ ಮುಂದುವರೆಯುತ್ತವೆ. ಇನ್‌ಶಾಅಲ್ಲಾಹ್, ಇದನ್ನು ಮುಂದೆ ವಿವರಿಸಲಾಗುವುದು.

ನಮಾಝಿನ ನಂತರ, ನಾನು ಎರಡು ನಮಾಝ್ಝು ಜನಾಝ್ಝು ಗಾಯಿಬ್‌ಗಳನ್ನು ನಿರ್ವಹಿಸುವೆನು. ಅವರಲ್ಲಿ ಮೊದಲನೆಯದು ಗೌರವಾನ್ವಿತ

ಡಾ. ಸೈಯದ್ ಶಹಾಬ್ ಅಹ್ಮದ್ ಸಾಹಿಬ್ ಅವರದ್ದಾಗಿದೆ, ಅವರು ಪ್ರಸ್ತುತ ಕೆನಡಾದಲ್ಲಿದ್ದಾರೆ. ಅವರು ಮೂಲತಃ ಭಾರತದವರು. ಅವರು ಇತ್ತೀಚೆಗೆ ತೊಂಬತ್ತಾರು ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಮೃತರು ವಸಿಯ್ಯತ್ ಮಾಡಿದ್ದರು. ಅವರಿಗೆ ಒಬ್ಬ ಮಗ ಮತ್ತು ಮೂವರು ಹೆಣ್ಣು ಮಕ್ಕಳು, ಮೊಮ್ಮಕಳು ಇದ್ದಾರೆ. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿಯಾದ ಬಿಹಾರ ಪ್ರಾಂತ್ಯದ ಹಝ್ರತ್ ಸೈಯದ್ ಇರಾದತ್ ಹುಸೇನ್ ಸಾಹಿಬ್(ರ) ಅವರ ಮೊಮ್ಮಗ ಆಗಿದ್ದರು.

ಅವರು ಅಲಿಗಡ್ ಮುಸ್ಲಿಂ ವಿಶ್ವವಿದ್ಯಾಲಯದಿಂದ ಮನೋವಿಜ್ಞಾನದಲ್ಲಿ ಎಂಎಸ್ಸಿ ಮಾಡಿದರು. ನಂತರ ಅವರು ಮುಜಫರ್ಪುರದ ಬಿಹಾರ ವಿಶ್ವವಿದ್ಯಾಲಯದಿಂದ ಎಂಎ ಮಾಡಿದರು. ನಂತರ, ಅವರು ಸ್ಕಾಟ್ಲೆಂಡ್‌ನ ಗ್ಲಾಸ್ಗೋ ವಿಶ್ವವಿದ್ಯಾಲಯದಿಂದ ಅದೇ ವಿಷಯದಲ್ಲಿ ಡಾಕ್ಟರೇಟ್ ಪಡೆದರು. 1968 ರಲ್ಲಿ, ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್) ಅವರ ಸಲಹೆಯ ಮೇರೆಗೆ, ಅವರು ಕೆನಡಾಗೆ ಹೋಗಿ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕ್ಲಿನಿಕಲ್ ಸೈಕಾಲಜಿಯನ್ನು ಕಲಿಸಿದರು. ಅವರು ಒಂಬತ್ತು ವರ್ಷಗಳ ಕಾಲ ಕ್ಲಿನಿಕಲ್ ಮನಶ್ಶಾಸ್ತ್ರಜ್ಞರಾಗಿ ಅಭ್ಯಾಸ ಮಾಡಿದರು. ಮೃತರು ಭಾರತ ಮತ್ತು ಕೆನಡಾದಲ್ಲಿ ವಿವಿಧ ಸಮಯಗಳಲ್ಲಿ ಜಮಾಅತ್‌ಗೆ ಸೇವೆ ಸಲ್ಲಿಸುವ ಅವಕಾಶವನ್ನು ಹೊಂದಿದ್ದರು. ಅವರು ದೀರ್ಘಕಾಲದವರೆಗೆ ಸಸ್ಕಟೂನ್ ಜಮಾಅತ್‌ನ ಅಧ್ಯಕ್ಷರಾಗಿದ್ದರು. ಅದಕ್ಕೂ ಮೊದಲು, ಅವರು ಸೆಕ್ರೇಟರಿ ತಬ್ಲೀಗ್ ಆಗಿ ಸಕ್ರಿಯವಾಗಿ ಸೇವೆ ಸಲ್ಲಿಸುವ ಅವಕಾಶವನ್ನು ಸಹ ಹೊಂದಿದ್ದರು. ನಂತರ, ಎಡ್ಮಂಟನ್‌ನಲ್ಲಿ, ಸೆಕ್ರೇಟರಿ ಇಶಾಅತ್ ಆಗಿ ಸೇವೆ ಸಲ್ಲಿಸುವುದರ ಜೊತೆಗೆ, ಅವರು ತರಬೇತಿ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದರು. ಅವರು ಯಶಸ್ವಿ ದಾಯಿ ಇಲಲ್ಲಾಹ್ ಆಗಿದ್ದರು. ಅವರು ಅನೇಕ ಬೈಅತ್‌ಗಳನ್ನು ಮಾಡಿಸಲು ಸಾಧ್ಯವಾಯಿತು. ಕೆನಡಾದಲ್ಲಿ ಅಹ್ಮದಿಯಾ ಜಮಾಅತ್‌ನ ಇತಿಹಾಸವನ್ನು ಇಂಗ್ಲಿಷ್‌ನಲ್ಲಿ ಬರೆಯಲಾಗುತ್ತಿದೆ ಮತ್ತು ಅವರು ಅದನ್ನು ಸ್ವಲ್ಪ ಮಟ್ಟಿಗೆ ಸರಿಪಡಿಸಲು ಸಹ ಸಾಧ್ಯವಾಯಿತು. ಕೆನಡಾದ ಸಸ್ಕಟೂನ್‌ನಲ್ಲಿ ಹಲವಾರು ಅಂತರ್ಧರ್ಮೀಯ ಸಮ್ಮೇಳನಗಳನ್ನು ಆಯೋಜಿಸಲು ಅವರಿಗೆ ಸಾಧ್ಯವಾಯಿತು, ಅದು ಅಲ್ಲಿನ ವಿದ್ಯಾವಂತ ವರ್ಗವನ್ನು ತಲುಪಿತು. ವಿವಿಧ ಸಂಸ್ಥೆಗಳಲ್ಲಿ ಇಸ್ಲಾಂ ಮತ್ತು ಅಹ್ಮದಿಯಾತ್ ಕುರಿತು ಭಾಷಣಗಳನ್ನು ನೀಡುವ ಅವಕಾಶವೂ ಅವರಿಗೆ ಸಿಕ್ಕಿತು. ಅವರು ವಿವಿಧ ಗ್ರಂಥಾಲಯಗಳಲ್ಲಿ ಜಮಾಅತ್‌ನ ಪುಸ್ತಕಗಳನ್ನು ಸಹ ಇರಿಸಿದ್ದರು. ಅವರು ವಿದ್ವಾಂಸರಾಗಿದ್ದರು. ಇಸ್ಲಾಂ ಅಹ್ಮದಿಯಾತ್ ಅನ್ನು ಬೆಂಬಲಿಸುವ ಇಂಗ್ಲಿಷ್ ಮತ್ತು ಉರ್ದು ಭಾಷೆಗಳಲ್ಲಿ ಅವರ ವಿವಿಧ ಲೇಖನಗಳು ಜಮಾಅತ್ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳು ಮತ್ತು ಇತರ ಪತ್ರಿಕೆಗಳಲ್ಲಿ ಪ್ರಕಟವಾದವು. ಅವರ ಪ್ರಮುಖ ಸಾಧನೆಗಳಲ್ಲಿ ಒಂದು ಭಾರತದ ಬಿಹಾರ ಪ್ರಾಂತ್ಯದಲ್ಲಿ ಅಹ್ಮದಿಯಾತ್‌ನ ಇತಿಹಾಸವನ್ನು ಸಂಕಲಿಸುವುದು. ಅವರ ಎರಡು ಪುಸ್ತಕಗಳು ಬಿಹಾರ ಪ್ರಾಂತ್ಯದ ಅಸ್‌ಹಾಬ್–ಎ–ಅಹ್ಮದ್ ಮತ್ತು ಬಿಹಾರ ಪ್ರಾಂತ್ಯದ ಶುಹದಾ–ಎ–ಅಹ್ಮದ್ ಮತ್ತು ಕೆಲವು ಆರಂಭಿಕ ಭಕ್ತರು. ಈ ಎರಡು ಪುಸ್ತಕಗಳನ್ನು ಸಹ ಪ್ರಕಟಿಸಲಾಗಿದೆ. ಅವು ಉತ್ತಮ ಪುಸ್ತಕಗಳಾಗಿವೆ. ಅವರು ಬಿಹಾರ ಪ್ರಾಂತ್ಯದ ಅಹ್ಮದೀಯರೊಂದಿಗೆ ನಿರಂತರ ಸಂಪರ್ಕದಲ್ಲಿದ್ದರು ಮತ್ತು ಅವರ ಕಥೆಗಳನ್ನು ಸಂಗ್ರಹಿಸಿದರು ಮತ್ತು ಅವರ ಮೂರನೇ ಪುಸ್ತಕ "ಬಿಹಾರ ಪ್ರಾಂತ್ಯದಲ್ಲಿ ಅಹ್ಮದೀಯತ್" ಅನ್ನು ಸಹ ಇಂಗ್ಲಿಷ್‌ನಲ್ಲಿ ಪೂರ್ಣಗೊಳಿಸಲಾಗಿದೆ. ಒಬ್ಬ ಧರ್ಮನಿಷ್ಠ ಹಿರಿಯ ಮತ್ತು ಅನುಕರಣೀಯ ಅಹ್ಮದಿ ಆಗಿದ್ದರು. ಅವರು ಯಾವಾಗಲೂ ಇಸ್ಲಾಮಿನ ಆದೇಶಗಳನ್ನು ಪಾಲಿಸುವುದು ತಮ್ಮ ಮೊದಲ ಕರ್ತವ್ಯವೆಂದು ಪರಿಗಣಿಸಿದ್ದರು. ಹಝ್ರತ್ ಪೈಗಂಬರ್(ಸ), ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಖಿಲಾಫತ್ ಬಗ್ಗೆ ಅವರಿಗೆ ಆಳವಾದ ಭಕ್ತಿ ಮತ್ತು ಶ್ರದ್ಧೆ ಇತ್ತು. ಅವರ ಪುತ್ರ ಸೈಯದ್ ಮುಬಾರಕ್ ಹೇಳುವಂತೆ ಅವರ ಇಡೀ ಜೀವನದಲ್ಲಿ ಅವರಿಗೆ ಒಂದೇ ಒಂದು ಗುರಿ ಇತ್ತು ಮತ್ತು ಅದು ಸರ್ವಶಕ್ತನಾದ ಅಲ್ಲಾಹನ ಸಂತೃಪ್ತಿಯನ್ನು ಪಡೆಯುವುದು. ಆದ್ದರಿಂದ, ಅವರು ದೈನಂದಿನ ಐದು ಹೊತ್ತಿನ ನಮಾಝುನ್ನು ಕಟ್ಟುನಿಟ್ಟಾಗಿ ನಿರ್ವಹಿಸುತ್ತಿದ್ದರು. ಅವರಿಗೆ ಆರಾಧನೆಯ ಬಗ್ಗೆ ವಿಶೇಷ ಉತ್ಸಾಹವಿತ್ತು. ಅವರು ಓದುವುದು, ಬರೆಯುವುದು ಮತ್ತು ಕಲಿಯುವುದರಲ್ಲಿಯೂ ತುಂಬಾ ಇಷ್ಟಪಡುತ್ತಿದ್ದರು. ಅವರ ಜೀವನದ ಕೊನೆಯ ದಿನಗಳಲ್ಲಿಯೂ ಸಹ, ಅವರು ಹೊಸ ಪುಸ್ತಕಗಳನ್ನು ಖರೀದಿಸುತ್ತಿದ್ದರು ಮತ್ತು ಅವರ ವೃದ್ಧಾಪ್ಯದ ಹೊರತಾಗಿಯೂ, ಅವರು ನಿಯಮಿತವಾಗಿ ಜುಮುಆ ನಮಾಝ್‌ಗಳಿಗೆ ಹೋಗುತ್ತಿದ್ದರು ಮತ್ತು ಅವರ ಸಾವಿಗೆ ಒಂದು ವಾರದ ಮೊದಲು, ಅವರು ಪಶ್ಚಿಮ ಕೆನಡಾ ಜಲ್ಸಾಗೆ ಸೇರಿದರು. ಅವರು ತಬ್ಲೀಗ್ ಅನ್ನು ತುಂಬಾ ಇಷ್ಟಪಡುತ್ತಿದ್ದರು ಮತ್ತು ವಿವಿಧ ಪಟ್ಟಣಗಳಿಗೆ ಹೋಗಿ ತಬ್ಲೀಗ್ ಮಾಡುತ್ತಿದ್ದರು. ಪ್ರತಿಯೊಂದು ವಿಷಯದಲ್ಲೂ, ಖಲೀಫರ ಮಾರ್ಗದರ್ಶನ ಪಡೆಯುತ್ತಿದ್ದರು. ಅವರ ಬಹಳ ಪತ್ರಗಳು ನನಗೂ ಬರುತ್ತಿದ್ದವು. ಅವರು ಬರೆದ ಪುಸ್ತಕಗಳನ್ನು ಸಹ ಕಳುಹಿಸುತ್ತಿದ್ದರು. ಅವರು ಯಾವಾಗಲೂ ದೇಣಿಗೆಗಳಲ್ಲಿ ಮುಂಚೂಣಿಯಲ್ಲಿರುತ್ತಿದ್ದರು. ಅವರ ಜೀವನದ ಕೊನೆಯ ನಾಲ್ಕು ವರ್ಷಗಳಲ್ಲಿ, ಅವರು ತಮ್ಮ ಆದಾಯದ ಐದನೇ ಒಂದು ಭಾಗವನ್ನು ತಮ್ಮ ವಸಿಯ್ಯತ್‌ನಲ್ಲಿ ಬರೆಸಿದರು. ಸರ್ವಶಕ್ತನಾದ ಅಲ್ಲಾಹನು ಅವರನ್ನು ಕ್ಷಮಿಸಲಿ ಮತ್ತು ಅವರಿಗೆ ಕರುಣೆ ತೋರಿಸಲಿ.

ಎರಡನೇ ಉಲ್ಲೇಖವೆಂದರೆ ಲಾಹೋರ್‌ನ ಮುಬಾರಕ್ ಖೋಖರ್ ಸಾಹಿಬ್ ಅವರದ್ದಾಗಿದೆ, ಅವರು ಇನ್ಶಾ ಅಲ್ಲಾಹ್ ಖೋಖರ್ ಸಾಹಿಬ್ ಅವರ ಪುತ್ರ ಆಗಿದ್ದರು. ಅವರು ಇತ್ತೀಚೆಗೆ ಎಂಬತ್ತೊಂದನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಮೃತರು ಮೂಸಿಯಾಗಿದ್ದರು. ಅಫ್ಜಲ್ ಖೋಖರ್ ಸಾಹಿಬ್ ಶಹೀದ್ ಗುಜ್ರಾನ್‌ವಾಲಾ ಅವರ ಕಿರಿಯ ಸಹೋದರ ಮತ್ತು ಅಶ್ರಫ್ ಖೋಖರ್ ಸಾಹಿಬ್ ಶಹೀದ್ ಅವರ ಚಿಕ್ಕಪ್ಪ ಆಗಿದ್ದರು. ಅವರ ಕುಟುಂಬದಲ್ಲಿ ಇಬ್ಬರು ಹುತಾತ್ಮರಿದ್ದಾರೆ. ಅವರು ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ಅವರೊಂದಿಗೆ ವಿಶೇಷ ಸಂಬಂಧವನ್ನು ಹೊಂದಿದ್ದರು. ಅವರೇ ಅವರ ವಿವಾಹವನ್ನು ಮಾಡಿಸಿದ್ದರು. ಅವರು ಖಿಲಾಫತ್‌ಗೆ ಮುಂಚೆಯೇ ಅವರೊಂದಿಗೆ ಬಹಳ ನಿಕಟ ಸಂಬಂಧವನ್ನು ಹೊಂದಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ಅವರ ಪ್ರೇರಣೆಯ ಮೇರೆಗೆ ಅವರು ಕರಾಚಿಯಲ್ಲಿ ತಮ್ಮ ವ್ಯವಹಾರವನ್ನು ಪ್ರಾರಂಭಿಸಿದರು ಮತ್ತು ಅದು ಅತ್ಯಂತ ಯಶಸ್ವಿ ವ್ಯವಹಾರವಾಗಿತ್ತು. ಜಮಾಅತ್‌ನ ವಿಷಯದಲ್ಲಿ ಅವರಿಗೆ ಯಾವುದೇ ಪ್ರಮುಖ ಸೇವೆಯನ್ನು ವಹಿಸಲಾಗಿಲ್ಲ, ಆದರೆ ಜಮಾಅತ್‌ನ ಸೇವೆಗೆ ಕರೆದಾಗಲೆಲ್ಲಾ ಅವರು ತಕ್ಷಣ ಕಾಣಿಸಿಕೊಳ್ಳುತ್ತಿದ್ದರು. ಅವರಿಗೆ ಜಮಾಅತ್ ಮತ್ತು ಖಿಲಾಫತ್ ಬಗ್ಗೆ ಆಳವಾದ ಭಕ್ತಿ ಇತ್ತು. ಅವರು ತುಂಬಾ ಸ್ನೇಹಪರರು, ಕರುಣಾಮಯಿಗಳು ಮತ್ತು ಜನರ ನೋವನ್ನು ಅನುಭವಿಸುತ್ತಿದ್ದರು, ಅದನ್ನು ತೆಗೆದುಹಾಕಲು ಪ್ರಯತ್ನಿಸುತ್ತಿದ್ದರು. ಅವರು ಸಾರ್ವಜನಿಕ ಕಲ್ಯಾಣ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಅವರು ತಮ್ಮ ದಿವಂಗತ ತಾಯಿಯ ಹೆಸರಿನಲ್ಲಿ ಶೈಕ್ಷಣಿಕ ವಿದ್ಯಾರ್ಥಿವೇತನವನ್ನು ಸಹ ನೀಡಿದ್ದರು. ಅವರ ಪತ್ನಿಯ ಹೊರತಾಗಿ, ಬದುಕುಳಿದವರಲ್ಲಿ ಒಬ್ಬ ಮಗಳು ಮತ್ತು ಇಬ್ಬರು ಗಂಡು ಮಕ್ಕಳು ಸೇರಿದ್ದಾರೆ. ಸರ್ವಶಕ್ತನಾದ ಅಲ್ಲಾಹನು ಅವರನ್ನು ಕ್ಷಮಿಸಲಿ ಮತ್ತು ಕರುಣಿಸಲಿ.

**(ಅಲ್–ಫಝ್ಲ್ ಇಂಟರ್ನ್ಯಾಷನಲ್ 3 ಅಕ್ಟೋಬರ್ 2025, ಪುಟಗಳು 2 ರಿಂದ 7)**

—————————*****—————————

***(ಪುಟ ಸಂಖ್ಯೆ 01ರ ತಫ್ಸೀರ್‌ನ ಉಳಿದ ಭಾಗ)***

ಎಂದು ಭಾವಿಸುತ್ತಾರೆ. ಅದಕ್ಕಾಗಿಯೇ ಸರ್ವಶಕ್ತನಾದ ಅಲ್ಲಾಹನ ಪ್ರವಾದಿಗಳು ಸರ್ವಶಕ್ತನಾದ ಅಲ್ಲಾಹನ ಸಂದೇಶದೊಂದಿಗೆ ಅವರ ಬಳಿಗೆ ಬಂದಾಗ, ಅವರು ತಮ್ಮ ನಂಬಿಕೆಗಳು ಮತ್ತು ಕಾರ್ಯಗಳಲ್ಲಿ ದೊಡ್ಡ ಬದಲಾವಣೆಯನ್ನು ತರಲು ಬಯಸುತ್ತಾರೆ ಮತ್ತು ಅವರು "ಸರ್ವಶಕ್ತನಾದ ಅಲ್ಲಾಹನ ಶಿಕ್ಷೆಯ ಬಗ್ಗೆ ನೀವು ನಮಗೆ ಏಕೆ ಬೆದರಿಕೆ ಹಾಕುತ್ತಿದ್ದೀರಿ?" ಎಂದು ಕೂಗಲು ಪ್ರಾರಂಭಿಸುತ್ತಾರೆ. ಮರಣದ ನಂತರ ನಾವು ಪುನರುತ್ಥಾನಗೊಳ್ಳುತ್ತೇವೆ ಎಂದು ನಾವು ನಂಬುವುದಿಲ್ಲ. ಆದ್ದರಿಂದ, ಯಾವುದೇ ಹೊಣೆಗಾರಿಕೆಯಿಂದ ನಾವು ಯಾವ ಅಪಾಯವನ್ನು ಎದುರಿಸಬಹುದು? ನಾವು ಯಾವುದೇ ಕ್ರಿಯೆಯನ್ನು ಮಾಡಿದರೂ, ನಮ್ಮ ಜೀವನದ ಈ ಕೆಲವು ದಿನಗಳವರೆಗೆ ನಾವು ಮಾಡುತ್ತೇವೆ ಮತ್ತು ನಮ್ಮ ಸ್ವಂತ ಲಾಭ ಮತ್ತು ನಷ್ಟವನ್ನು ಅರ್ಥಮಾಡಿಕೊಳ್ಳಲು ನಾವು ಸಂಪೂರ್ಣವಾಗಿ ಸಮರ್ಥರಾಗಿದ್ದೇವೆ. ಆದ್ದರಿಂದ, ಪರಲೋಕದ ಶಿಕ್ಷೆಯ ಬಗ್ಗೆ ನಮಗೆ ಬೆದರಿಕೆ ಹಾಕಬೇಡಿ.

ವಾಸ್ತವವೆಂದರೆ ಮರಣದ ನಂತರ ಪುನರುತ್ಥಾನದ ನಂಬಿಕೆಯು ಒಬ್ಬ ವ್ಯಕ್ತಿಯಲ್ಲಿ ಸರ್ವಶಕ್ತನಾದ ಅಲ್ಲಾಹನ ಬಗ್ಗೆ ಭಯ ಮತ್ತು ಪ್ರೀತಿಯನ್ನು ಉಂಟುಮಾಡುತ್ತದೆ ಮತ್ತು ಅವನ ಕ್ರಿಯೆಗಳನ್ನು ಸರಿಪಡಿಸುವ ಪ್ರಮುಖ ಸಾಧನವಾಗಿದೆ. ಮುಂದಿನ ಜೀವನದಲ್ಲಿ ನಂಬಿಕೆ ಇಲ್ಲದಿದ್ದರೆ, ಇಡೀ ವಿಶ್ವವನ್ನು ವ್ಯರ್ಥ ಮತ್ತು ಅರ್ಥಹೀನ ವಿಷಯವೆಂದು ಒಪ್ಪಿಕೊಳ್ಳಬೇಕಾಗುವುದಲ್ಲದೆ, ಒಳ್ಳೆಯತನ ಮತ್ತು ಧರ್ಮನಿಷ್ಠೆಯಲ್ಲಿ ಪ್ರಗತಿಯು ಸಹ ನಿಷ್ಪ್ರಯೋಜಕ ಕ್ರಿಯೆ ಎಂದು ಹೇಳಬೇಕಾಗುತ್ತದೆ. ಆದರೆ ಸರ್ವಶಕ್ತನಾದ ಅಲ್ಲಾಹನು ಸೂರ್ಯ, ಚಂದ್ರ, ನಕ್ಷತ್ರಗಳು, ಗ್ರಹಗಳು ಮತ್ತು ಆಕಾಶ ಮತ್ತು ಭೂಮಿಯ ನಡುವಿನ ಅಸಂಖ್ಯಾತ ವಸ್ತುಗಳನ್ನು ಸೃಷ್ಟಿಸುವ ಮೂಲಕ ಮತ್ತು ತನ್ನ ಶಕ್ತಿಯ ಅಸಂಖ್ಯಾತ ರಹಸ್ಯಗಳನ್ನು ಅವುಗಳಲ್ಲಿ ಠೇವಣಿ ಮಾಡುವ ಮೂಲಕ, ಕೆಲವು ವರ್ಷಗಳ ಕಾಲ ಬದುಕಿದ ನಂತರ ಶಾಶ್ವತವಾಗಿ ನಾಶವಾಗುವ ಮತ್ತು ಅವನ ಜೀವನಕ್ಕೆ

ಯಾವುದೇ ಪ್ರಮುಖ ಉದ್ದೇಶವಿಲ್ಲ ಎಂಬ ಕಲ್ಪನೆಯು ಯಾವುದೇ ಬುದ್ಧಿಶಕ್ತಿಗೆ ಒಪ್ಪಿಕೊಳ್ಳಲು ಸಾಧ್ಯವಾಗದ ಕಲ್ಪನೆಯಾಗಿದೆ. ಮನುಷ್ಯನಿಗೆ ಅಂತಹ ವಿಶಾಲವಾದ ವಿಶ್ವವನ್ನು ಸೃಷ್ಟಿಸುವುದು ಮತ್ತು ಬುದ್ಧಿಶಕ್ತಿಯ ಮೂಲಕ ಅದರ ಮೇಲೆ ಮನುಷ್ಯನಿಗೆ ಪ್ರಭುತ್ವವನ್ನು ನೀಡುವುದು ಈ ಸೀಮಿತ ಜೀವನವನ್ನು ಹೊರತುಪಡಿಸಿ ಅವನಿಗೆ ಬೇರೆ ಉದ್ದೇಶವಿದೆ ಎಂದು ತೋರಿಸುತ್ತದೆ. ಮತ್ತು ಆ ಉದ್ದೇಶವೆಂದರೆ ಅವನು ಶಾಶ್ವತ ಜೀವನಕ್ಕಾಗಿ ಸೃಷ್ಟಿಸಲ್ಪಟ್ಟಿದ್ದಾನೆ ಎಂದು ಇಸ್ಲಾಂ ಹೇಳುತ್ತದೆ. ಮತ್ತು ಅವನಿಗೆ ಶಾಶ್ವತ ಆಧ್ಯಾತ್ಮಿಕ ಪ್ರಗತಿಯ ಹಾದಿಯನ್ನು ತೆರೆಯಲಾಗಿದೆ. ಆದ್ದರಿಂದ, ಮರಣಕ್ಕೆ ಕೇವಲ ಎರಡು ಅರ್ಥಗಳಿವೆ: ಮಾನವ ಆತ್ಮವು ದೇಹದಿಂದ ಬೇರ್ಪಟ್ಟಿದೆ, ಇಲ್ಲದಿದ್ದರೆ ಆತ್ಮದ ವಿನಾಶವಿಲ್ಲ ಮತ್ತು ಅದು ಶಾಶ್ವತವಾಗಿ ಜೀವಂತವಾಗಿರುತ್ತದೆ ಮತ್ತು ಸರ್ವಶಕ್ತನಾದ ಅಲ್ಲಾಹನಿಗೆ ಅನಂತ ಮಟ್ಟದ ಸಾಮೀಪ್ಯವನ್ನು ಪಡೆಯುತ್ತದೆ.

ಆದಾಗ್ಯೂ, ಪ್ರವಾದಿಗಳ ನಿರಾಕರಣೆಗೆ ಒಂದು ಪ್ರಮುಖ ಕಾರಣವೆಂದರೆ ಮರಣದ ನಂತರ ಪುನರುತ್ಥಾನದ ನಿರಾಕರಣೆ, ಇದನ್ನು ಈ ವಚನಗಳಲ್ಲಿ ಸೂಚಿಸಲಾಗಿದೆ.

**(ತಫ್ಸೀರೆ ಕಬೀರ್, ಸಂಪುಟ-6, ಪುಟ-171, ಖಾದಿಯಾನ್ ಪಬ್ಲಿಕೇಶನ್ 2010)**

------------*****------------

**ಬದ್ರ್ ಪತ್ರಿಕೆಯನ್ನು ನೀವೂ ಓದಿರಿ ಮತ್ತು ನಿಮ್ಮ ಸ್ನೇಹಿತರನ್ನೂ ಓದಲು ಪ್ರೋತ್ಸಾಹಿಸಿ.**

ಡಿಸೆಂಬರ್ 2014 ರ ಬದರ್ ಪತ್ರಿಕೆಯ ವಿಶೇಷ ಸಂಚಿಕೆಗಾಗಿ ತಮ್ಮ ಸಂದೇಶವನ್ನು ಕಳುಹಿಸುತ್ತಾ ಸಯ್ಯಿದುನಾ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಹೀಗೆ ಹೇಳಿದರು:

"ಬದರ್ ವಾರಪತ್ರಿಕೆಯ ಸಂಸ್ಥೆ ಮತ್ತು ಓದುಗರು ಈ ಪತ್ರಿಕೆಯನ್ನು ಜಮಾಅತ್‌ನ ಸದಸ್ಯರ ಆಧ್ಯಾತ್ಮಿಕ ಸುಧಾರಣೆ ಮತ್ತು ಅಭಿವೃದ್ಧಿಗಾಗಿ ಪ್ರಕಟಿಸಲಾಗಿದೆ ಎಂಬುದನ್ನು ಯಾವಾಗಲೂ ನೆನಪಿನಲ್ಲಿಡಬೇಕು ಮತ್ತು ನಮ್ಮ ಹಿರಿಯರು ಪ್ರತಿಕೂಲ ಪರಿಸ್ಥಿತಿಗಳ ಹೊರತಾಗಿಯೂ ಅದನ್ನು ತಮ್ಮ ಎಲ್ಲಾ ಶಕ್ತಿಯಿಂದ ಮುಂದುವರಿಸಲು ಪ್ರಯತ್ನಿಸಿದರು ಮತ್ತು ಅವರ ಪ್ರಾರ್ಥನೆ ಮತ್ತು ಶುದ್ಧ ಪ್ರಯತ್ನಗಳ ಅನುಗ್ರಹಗಳಿಂದ ಮಾತ್ರ ಇದು ಇಂದಿಗೂ ಮುಂದುವರೆದಿದೆ ಮತ್ತು ಇದು ಸಾಧ್ಯವಾದಷ್ಟು ಅಹ್ಮದೀಯರು ಇದನ್ನು ಓದಬೇಕು ಮತ್ತು ಅದರಿಂದ ಪ್ರಯೋಜನ ಪಡೆಯಬೇಕು. ಸರ್ವಶಕ್ತನಾದ ಅಲ್ಲಾಹನು ತನ್ನ ಕೃಪೆಯಿಂದ, ವಿಶೇಷವಾಗಿ ಭಾರತದ ಅಹ್ಮದೀಯರಿಗೆ ಮತ್ತು ಸಾಮಾನ್ಯವಾಗಿ ಪ್ರಪಂಚದ ಉಳಿದ ಭಾಗಗಳಲ್ಲಿ ವಾಸಿಸುವ ಅಹ್ಮದೀಯರಿಗೆ ಇದನ್ನು ಅಧ್ಯಯನ ಮಾಡುವ ಮತ್ತು ಅದಕ್ಕೆ ಸಂಬಂಧಿಸಿದ ಅನುಗ್ರಹಗಳನ್ನು ಪಡೆಯುವ ಸಾಮರ್ಥ್ಯವನ್ನು ನೀಡಲಿ. ಆಮೀನ್."

ಸಯ್ಯಿದುನಾ ಹಝ್ರತ್ ಅಖುದ್ದಸ್ ಅಮೀರ್-ಉಲ್-ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಪ್ರತಿ ಮನೆಯೂ ಬದರ್ ವಾರಪತ್ರಿಕೆಯನ್ನು ಓದುವುದನ್ನು ಖಚಿತಪಡಿಸಿಕೊಳ್ಳುವುದು ಬಹಳ ಮುಖ್ಯ ಎಂದು ಅಹ್ಮದಿಯಾ ಜಮಾಅತ್ತಿಗೆ ಇಲ್ಲಿ ತಿಳಿಸಲಾಗಿದೆ. ಬದರ್ ಪತ್ರಿಕೆಯಲ್ಲಿ, ಪವಿತ್ರ ಖುರ್‌ಆನ್, ಹದೀಸ್ ಶರೀಫ್, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು, ಮತ್ತು ಹುಝೂರ್ ಅನ್ವರ್(ಅತಬಿಅ) ಅವರ ಖುತ್‌ಬ ಜುಮುಅಗಳು, ಭಾಷಣಗಳು ಮತ್ತು ಹುಝೂರ್ ಅನ್ವರ್(ಅತಬಿಅ) ಅವರ ವಿವಿಧ ದೇಶಗಳಿಗೆ ಮಾಡಿದ ಅನುಗ್ರಹದಾಯಕ ಭೇಟಿಗಳ ಕುತೂಹಲಕಾರಿ ಮತ್ತು ವಿಶ್ವಾಸವರ್ಧಕ ವರದಿಗಳನ್ನು ಬದರ್ ಪತ್ರಿಕೆಯಲ್ಲಿ ನಿಯಮಿತವಾಗಿ ಪ್ರಕಟಿಸಲಾಗುತ್ತದೆ, ಇದು ಪ್ರತಿಯೊಬ್ಬ ಅಹ್ಮದಿಯೂ ಓದಲೇಬೇಕಾದ ವಿಷಯವಾಗಿದೆ. ಸರ್ವಶಕ್ತನಾದ ಅಲ್ಲಾಹನ ಅನುಗ್ರಹ ಮತ್ತು ಸಯ್ಯಿದುನಾ ಹುಝೂರ್ ಅನ್ವರ್(ಅತಬಿಅ) ಅವರ ಕರುಣೆಯಿಂದ, ಈ ಪತ್ರಿಕೆಯು ಈಗ ಉರ್ದು ಬಾಷೆಯ ಜೊತೆಗೆ ಹಿಂದಿ, ಬಂಗಾಳಿ, ತಮಿಳು, ತೆಲುಗು, ಮಲಯಾಳಂ, ಒರಿಯಾ ಮತ್ತು ಕನ್ನಡ ಭಾಷೆಗಳಲ್ಲಿಯೂ ಪ್ರಕಟವಾಗುತ್ತಿದೆ. ಬದರ್ ಪತ್ರಿಕೆಗೆ ಇನ್ನೂ ಚಂದಾದಾರರಾಗದ ಅಹ್ಮದಿ ಸ್ನೇಹಿತರು ಇದಕ್ಕೆ ಚಂದಾದಾರರಾಗಲು ಮತ್ತು ಅದನ್ನು ಸ್ವತಃ ಓದಲು ಮತ್ತು ಅವರ ಮಕ್ಕಳು ಮತ್ತು ಇತರ ಕುಟುಂಬ ಸದಸ್ಯರಿಗೆ ಅದನ್ನು ಓದಲು ಅವಕಾಶವನ್ನು ಒದಗಿಸುವಂತೆ ವಿನಂತಿಸಲಾಗಿದೆ. ಸಯ್ಯಿದುನಾ ಹಝ್ರತ್ ಅಮೀರುಲ್ ಮುಮಿನೀನ್(ಅತಬಿಅ) ಅವರ ಸೂಚನೆಗಳ ಮೇರೆಗೆ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಅಲ್ಲಾಹನು ನಮಗೆ ನೀಡಲಿ. ಆಮೀನ್. ಬದರ್ ಪತ್ರಿಕೆ ಸಮಯಕ್ಕೆ ಸರಿಯಾಗಿ ಬರದಿದ್ದರೆ, ಅಥವಾ ದೇಣಿಗೆ ನೀಡಲು ಅಥವಾ ಯಾವುದೇ ರೀತಿಯ ಮಾಹಿತಿಗಾಗಿ, ದಯವಿಟ್ಟು ಬದರ್ ವಾರಪತ್ರಿಕೆಯ ಕಚೇರಿ ವ್ಯವಸ್ಥಾಪಕರಿಗೆ ಸಂಪರ್ಕಿಸಿ. ಜಝಾಕುಮುಲ್ಲಾಹ್. **(ಪತ್ರಿಕಾಂಗ)**

## ನಝ್ಘಾಮತ್ ತಅ್‌ಮಿರಾತ್ ಖಾದಿಯಾನ್‌ಗೆ ಓರ್ವ ವಿದ್ಯುತ್ ಮೇಲ್ವಿಚಾರಕನ **ಅಗತ್ಯವಿದೆ**

**ಅಗತ್ಯವಿರುವ ಡೇಟಾ/ಶೈಕ್ಷಣಿಕ ಅರ್ಹತೆ/ಅನುಭವ**

(1) ಅಭ್ಯರ್ಥಿಯು 18 ವರ್ಷಕ್ಕಿಂತ ಕಡಿಮೆಯಿರಬಾರದು ಮತ್ತು 30 ವರ್ಷಗಳಿಗಿಂತ ಹೆಚ್ಚಿರಬಾರದು. (ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು ವಿನಾಯಿತಿಗಳನ್ನು ಪರಿಗಣಿಸಬಹುದು)

(2) ಅಭ್ಯರ್ಥಿಯು ವಿದ್ಯುತ್ ಕ್ಷೇತ್ರದಲ್ಲಿ ಪ್ರಮಾಣಪತ್ರ ಅಥವಾ Trade Qualification ಅರ್ಹತೆಯನ್ನು ಹೊಂದಿರಬೇಕು (ಉದಾ. ಕೈಗಾರಿಕಾ ಸಂಸ್ಥೆ ಅಥವಾ ವೃತ್ತಿಪರ ಶಾಲೆಯಿಂದ).

(3) ಅಭ್ಯರ್ಥಿಯು ವಿದ್ಯುತ್ ಮೇಲ್ವಿಚಾರಕ ಪರವಾನಗಿಯನ್ನು ಹೊಂದಿರಬೇಕು.

(4) ಅಭ್ಯರ್ಥಿಯು ಸುರಕ್ಷತಾ ಪ್ರಮಾಣಪತ್ರ, ಪ್ರಥಮ ಚಿಕಿತ್ಸೆ/ಸಿಪಿಆರ್ ತರಬೇತಿ ಪ್ರಮಾಣಪತ್ರ, ಎಚ್‌ವಿ/ಎಲ್‌ವಿ ಸ್ವಿಚಿಂಗ್ ಕಾರ್ಯಾಚರಣೆಗಳಂತಹ ಹೆಚ್ಚುವರಿ ಪ್ರಮಾಣಪತ್ರಗಳನ್ನು ಹೊಂದಿರಬೇಕು.

(5) ಅಭ್ಯರ್ಥಿಯು ವಿದ್ಯುತ್ ಸ್ಥಾಪನೆ, ದುರಸ್ತಿ ಅಥವಾ ಯೋಜನಾ ಕೆಲಸದಲ್ಲಿ ಕನಿಷ್ಠ 02 ವರ್ಷಗಳ ಪ್ರಾಯೋಗಿಕ ಅನುಭವವನ್ನು ಹೊಂದಿರಬೇಕು.

(6) ಮೇಲ್ವಿಚಾರಕ ಅಥವಾ ಪ್ರಮುಖ ತಂತ್ರಜ್ಞ ಪಾತ್ರದಲ್ಲಿ ಕನಿಷ್ಠ 1 ವರ್ಷದ ಅನುಭವ ಇರಬೇಕು.

(7) ಕೈಗಾರಿಕಾ ವಿದ್ಯುತ್ ವ್ಯವಸ್ಥೆಗಳು, ನಿಯಂತ್ರಣ ಫಲಕಗಳು, ಸ್ವಿಚ್‌ಗೇರ್, ವಿದ್ಯುತ್ ವಿತರಣಾ ವ್ಯವಸ್ಥೆಗಳು, ವೈರಿಂಗ್ ಮತ್ತು ವಾಹಕ ವ್ಯವಸ್ಥೆಗಳಲ್ಲಿ ಕೆಲಸ ಮಾಡುವ ಅನುಭವ ಇರಬೇಕು.

(8) ಎಲೆಕ್ಟ್ರಿಷಿಯನ್ ಅಥವಾ ತಂತ್ರಜ್ಞರ ತಂಡವನ್ನು ನಿರ್ವಹಿಸುವ ಅನುಭವ ಇರಬೇಕು.

(9) ಅಭ್ಯರ್ಥಿಯು ವಿದ್ಯುತ್ ಸಂಕೇತಗಳು Codes ಮತ್ತು ಸುರಕ್ಷತಾ ಮಾನದಂಡಗಳ ಬಗ್ಗೆ ಆಳವಾದ ತಿಳುವಳಿಕೆಯನ್ನು ಹೊಂದಿರಬೇಕು.

(10) ವಿದ್ಯುತ್ ರೇಖಾಚಿತ್ರಗಳು ಮತ್ತು ನೀಲನಕ್ಷೆಗಳನ್ನು ಓದುವ ಮತ್ತು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಇರಬೇಕು.

(11) ವಿದ್ಯುತ್ ಸಮಸ್ಯೆಗಳನ್ನು ನಿವಾರಿಸುವಲ್ಲಿ ಅನುಭವ ಇರಬೇಕು.

(12) ಉತ್ತಮ ಸಂವಹನ ಮತ್ತು ತಂಡದ ನಾಯಕತ್ವ ಕೌಶಲ್ಯಗಳು ಇರಬೇಕು.

(13) ಅಭ್ಯರ್ಥಿಯು ಉತ್ತಮ ಆರೋಗ್ಯ ಹೊಂದಿರಬೇಕು. ಉತ್ತಮ ಧಾರ್ಮಿಕ ಮತ್ತು ನೈತಿಕ ನಿಲುವು. ಕೆಲಸದ ಸಹೋದ್ಯೋಗಿಗಳ ಬಗ್ಗೆ ಸೌಜನ್ಯ ಮತ್ತು ತಾಳ್ಮೆಯ ಮನೋಭಾವವನ್ನು ಹೊಂದಿರಬೇಕು.

**ಪ್ರಮುಖ ಸೂಚನೆಗಳು:**

(1) ವಾರಪತ್ರಿಕೆ ಬದ್ರ್ ಪತ್ರಿಕೆಯಲ್ಲಿ ಪ್ರಕಟವಾದ ಕೊನೆಯ ಜಾಹೀರಾತಿನ 2 ತಿಂಗಳೊಳಗೆ ಸ್ವೀಕರಿಸಿದ ಅರ್ಜಿಗಳನ್ನು ಪರಿಗಣಿಸಲಾಗುತ್ತದೆ.

(2) ಆಸಕ್ತ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ತಮ್ಮ ಜಿಲ್ಲಾ ಅಮೀರ್/ಸ್ಥಳೀಯ ಅಮೀರ್/ಸದರ್ ಜಮಾಅತ್/ಮುಬಲ್ಲಿಗ್ ಇಂಚಾರ್ಜ್ ಅವರ ಸಹಿ ಮತ್ತು ಮುದ್ರೆಯೊಂದಿಗೆ ಮುದ್ರಿತ ನಮೂನೆಯಲ್ಲಿ ಕಳುಹಿಸಬೇಕು.

(3) ಸಂದರ್ಶನದಲ್ಲಿ ಯಶಸ್ವಿಯಾದರೆ, ಅಭ್ಯರ್ಥಿಯು ನೂರ್ ಆಸ್ಪತ್ರೆ, ಖಾದಿಯಾನ್‌ನಿಂದ ವೈದ್ಯಕೀಯ ಪರೀಕ್ಷೆಗೆ ಒಳಗಾಗಬೇಕಾಗುತ್ತದೆ ಮತ್ತು ನೂರ್ ಆಸ್ಪತ್ರೆಯ ವೈದ್ಯಕೀಯ ಮಂಡಳಿಯ ವರದಿಯ ಪ್ರಕಾರ ಆರೋಗ್ಯವಂತ ಮತ್ತು ಸದೃಢರಾಗಿರುವ ಅಭ್ಯರ್ಥಿಗಳು ಮಾತ್ರ ಸೇವೆಗೆ ಅರ್ಹರಾಗಿರುತ್ತಾರೆ.

(4) ಖಾದಿಯನ್‌ಗೆ ಪ್ರಯಾಣ ವೆಚ್ಚ, ಸಾರಿಗೆ ಮತ್ತು ವೈದ್ಯಕೀಯ ಪ್ರಮಾಣಪತ್ರವನ್ನು ಅಭ್ಯರ್ಥಿಯೇ ಭರಿಸಬೇಕಾಗುತ್ತದೆ.

(5) ಸಂದರ್ಶನದ ಸಮಯದಲ್ಲಿ ತಮ್ಮ ಮೂಲ ಶೈಕ್ಷಣಿಕ ಪ್ರಮಾಣಪತ್ರಗಳನ್ನು ತಮ್ಮೊಂದಿಗೆ ತರುವುದು ಅವಶ್ಯಕ.

**ಗಮನಿಸಿ: ಸಂದರ್ಶನದ ದಿನಾಂಕದ ಬಗ್ಗೆ ಅಭ್ಯರ್ಥಿಗಳಿಗೆ ನಂತರ ತಿಳಿಸಲಾಗುವುದು.**

**ಹೆಚ್ಚಿನ ಮಾಹಿತಿಗಾಗಿ, ಸಂಪರ್ಕಿಸಿ:**

ನಝ್ಘಾರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್,
ಗುರುದಾಸ್ಪುರ್ ಪಂಜಾಬ್. ಪಿನ್ ಕೋಡ್: 143516
ಮೊಬೈಲ್: 9682587713,9888232530,9682627592 ಕಚೇರಿ: 01872-501130
ಈಮೇಲ್: diwan@qadian.in

*(ಬದರ್ ಸಂಚಿಕೆ-42ರ, ಪುಟ ಸಂಖ್ಯೆ-12ರ ಖುತ್‌ಬ ಜುಮುಅ 05-09-2025ರ ಉಳಿದ ಭಾಗ ಮುಂದುವರಿಸಲಾಗಿದೆ)*

ಇನ್ನೊರ್ವ ಧೈರ್ಯಶಾಲಿ ಸಹಾಬಿಯಾ ಹಝ್ರತ್ ಉಮಾರಾ(ರ) ಅವರಿಂದ ವರದಿಯಾಗಿದೆ, ಹುನೈನ್ ಯುದ್ಧದ ದಿನ ಜನರು ಓಡಿಹೋದಾಗ ನಾವು ನಾಲ್ಕು ಮಹಿಳೆಯರಿದ್ದೆವು. ನನ್ನ ಬಳಿ ಚೂಪಾದ ಖಡ್ಗವಿತ್ತು ಮತ್ತು ಉಮ್ಮು ಸುಲೈಮ್(ರ)ರ ಬಳಿ ಚೂಪಾದ ಚೂರಿಯಿತ್ತು. ಅವರು ಅದನ್ನು ಸೊಂಟಕ್ಕೆ ಕಟ್ಟಿಕೊಂಡಿದ್ದರು ಹಾಗೂ ಅವರು ಗರ್ಭಿಣಿಯಾಗಿದ್ದರು. ಇವರಲ್ಲದೆ ಇನ್ನೂ ಇಬ್ಬರು ಮಹಿಳೆಯರಿದ್ದರು. ಹಝ್ರತ್ ಉಮ್ಮು ಅಮ್ಮಾರ(ರ) ಕೂಗಿ ಹೇಳಿದರು: 'ಎಲೈ ಅನ್ಸಾರರೇ, ನೀವು ಓಡಿಹೋಗಲು ಕಾರಣವೇನು?' ಅವರು ಹೇಳುತ್ತಾರೆ, 'ನಾನು ಹವಾಝಿನ್ ಗೋತ್ರದ ಒಬ್ಬ ವ್ಯಕ್ತಿಯನ್ನು ಕಂಡೆ, ಅವನು ಧ್ವಜವನ್ನು ಹಿಡಿದು ಕಂದು ಬಣ್ಣದ ಒಂಟೆಯ ಮೇಲೆ ಸವಾರನಾಗಿದ್ದನು. ಅವನು ಮುಸ್ಲಿಮರನ್ನು ಬೆನ್ನಟ್ಟುತ್ತಿದ್ದನು. ನಾನು ಅವನ ಎದುರಿಗೆ ಬಂದು ಅವನ ಒಂಟೆಯ ಕಾಲುಗಳ ಮೇಲೆ ಹಲ್ಲೆ ಮಾಡಿದೆ. ಆ ಸವಾರ ಕೆಳಗೆ ಬಿದ್ದಾಗ, ನಾನು ಅವನ ಮೇಲೆ ದಾಳಿ ಮಾಡಿದೆ ಮತ್ತು ಅವನು ಸಾಯುವ ತನಕ ಹಲ್ಲೆ ನಡೆಸುತ್ತಲೇ ಹೋದೆ. ಅನಂತರ ನಾನು ಅವನ ಖಡ್ಗವನ್ನು ತೆಗೆದುಕೊಂಡು ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋದೆ. ಆ ವೇಳೆ ಚದುರಿ ಹೋಗಿದ್ದ ಸಹಾಬಿಯರನ್ನು ಹಝ್ರತ್ ಪೈಗಂಬರ್(ಸ) ಮರಳಿ ಕರೆಯುತ್ತಿದ್ದರು ಮತ್ತು ಆ ಸಹಾಬಿಯರು ಹಿಂದಿರುಗಿ ಬರುತ್ತಿದ್ದರು. ಅನಂತರ ಮುಸ್ಲಿಮರು ಶತ್ರುಗಳ ಮೇಲೆ ಪುನಃ ದಾಳಿ ಮಾಡಿದರು. ಈ ದಾಳಿಯನ್ನು ಹೆಚ್ಚು ಸಮಯಕ್ಕೆ ಪ್ರತಿರೋಧಿಸಲು ಶತ್ರುಗಳಿಗೆ ಸಾಧ್ಯವಾಗಲಿಲ್ಲ. ಶತ್ರುಗಳ ಇಂತಹ ಅವಮಾನಕರ ಸೋಲನ್ನು ಎಂದಿಗೂ ನಾನು ನೋಡಿರಲಿಲ್ಲ, ಅವರು ತಲೆಯೆತ್ತಿ ಅತ್ತಿತ್ತ ಓಡುತ್ತಿದ್ದರು. ನನ್ನ ಮಕ್ಕಳಾದ ಹುಬೈಬ್ ಮತ್ತು ಅಬ್ದುಲ್ಲಾ ನನ್ನ ಬಳಿಗೆ ಹಿಂತಿರುಗಿದರು ಮತ್ತು ಅವರ ಕೈಯಲ್ಲಿ ಕೈದಿಗಳಿದ್ದರು.

(ಸಹೀಹ್ ಮುಸ್ಲಿಂ, ಕಿತಾಬುಲ್ ಜಿಹಾದ್ ವಸ್ಸೈರ್, ಪುರುಷರೊಂದಿಗಿನ ಮಹಿಳೆಯರ ಯುದ್ಧದ ಅಧ್ಯಾಯ, ಹದೀಸ್ 3360, ನೂರ್ ಫೌಂಡೇಶನ್‌ನಿಂದ ಅನುವಾದಿಸಲಾಗಿದೆ, ಸಂಪುಟ 9, ಪುಟಗಳು 241, 242) (ಸಬಲ್ ಅಲ್-ಹುದಾ ಅಲ್-ರಶೀದ್ ಫಿ ಸೀರತ್ ಖೈರ್ ಅಲ್-ಇಬಾದ್, ಸಂಪುಟ 5, ಪುಟಗಳು 330-331, ದಾರ್ ಅಲ್-ಕುತ್ಬ್ ಅಲ್-ಇಲ್ಮಿಯಾ, ಬೈರುತ್) (ಸೀರತ್ ಅಲ್-ಹಲಬೀಯಾ, ಸಂಪುಟ 3, ಪುಟ 139, ದಾರುಲ್ ಕುತುಬ್ ಇಲ್ಮಿಯಾ, ಬೈರುತ್) (ಕಿತಾಬುಲ್ ಮಗ್ಝಾಝಿ (ಅನುವಾದಕ), ಸಂಪುಟ 2, ಪುಟ 316, ಮಕ್ತಬಾ ಅಲ್-ರಹಮಾನಿಯಾ)

ಹಝ್ರತ್ ಅಬೂಬಶೀರ್ ಮಾಝಿನೀ(ರ) ವರದಿ ಮಾಡುತ್ತಾರೆ, ಹುನೈನ್ ದಿನದಂದು ನಾವು ಬೆಳಗಿನ ನಮಾಝನ್ನು ನಿರ್ವಹಿಸಿದೆವು. ನಂತರ ಹಝ್ರತ್ ಪೈಗಂಬರ್(ಸ) ನಮ್ಮನ್ನು ನಿಲ್ಲುವಂತೆ ಮಾಡಿದ ಸ್ಥಳವನ್ನು ನಾವು ತಲುಪಿದೆವು. ಸೂರ್ಯ ಉದಯಿಸುವ ಹಂತದಲ್ಲಿತ್ತು. ನಮ್ಮ ಮೇಲೆ ಇದ್ದಕ್ಕಿದ್ದಂತೆ ದಾಳಿ ಮಾಡಲಾಗಿದೆ ಎಂದು ನಮಗೆ ತಿಳಿದಿರಲಿಲ್ಲ. ನಮ್ಮ ಸೈನ್ಯದ ಮುಂಭಾಗವು ನಮ್ಮ ಕಡೆಗೆ ಹಿಂತಿರುಗಿತು ಮತ್ತು ಅವರು ಸೋತಿದ್ದರು. ನಮ್ಮ ಶ್ರೇಣಿಗಳು ಗೊಂದಲಕ್ಕೊಳಗಾದವು ಮತ್ತು ನಾವು ಸೈನ್ಯದ ಮುಂಭಾಗದೊಂದಿಗೆ ಸೋತಿದ್ದೇವು. ನಾನು ಹಿಂತಿರುಗಿ ಮುಂದೆ ಸಾಗಿದೆ. ನಾನು ಚಿಕ್ಕ ಹುಡುಗ. ಹಝ್ರತ್ ಪೈಗಂಬರ್(ಸ) ಸೈನ್ಯದ ಮುಂಚೂಣಿಯಲ್ಲಿದ್ದಾರೆಂದು ನನಗೆ ತಿಳಿದುಬಂತು, ಆದ್ದರಿಂದ ನಾನು, "ಎಲೈ ಅನ್ಸಾರರೇ! ನನ್ನ ಹೆತ್ತವರು ಹಝ್ರತ್ ಪೈಗಂಬರ್(ಸ)ರಿಗಾಗಿ ತ್ಯಾಗವಾಡಲ್ಪಟ್ಟಿದ್ದಾರೆ. ನೀವು ಎಲ್ಲಿಗೆ ಹೋಗುತ್ತಿದ್ದೀರಿ?" ಹೀಗೆ ಅವರು ಕರೆದರು. ನಾನು ಸೋತ ಜನರನ್ನು ಹಿಂದಕ್ಕೆ ತಿರುಗಿಸುತ್ತಿದ್ದೆ. ನಾನು ಹಝ್ರತ್ ಪೈಗಂಬರ್(ಸ)ರನ್ನು ತಲುಪುವವರೆಗೂ ಹಝ್ರತ್ ಪೈಗಂಬರ್(ಸ) ಸುರಕ್ಷಿತವಾಗಿರುವುದನ್ನು ನೋಡುವುದೊಂದೇ ನನ್ನ ಪ್ರಯತ್ನವಾಗಿತ್ತು ಮತ್ತು ಅವರು "ಎಲಯ ಅನ್ಸಾರರೇ! ಎಲೈ ಅನ್ಸಾರರೇ! ಎಂದು ಹೇಳುತ್ತಿದ್ದರು. ನಾನು ಅವರ ಸವಾರಿಯ ಬಳಿಗೆ ಹೋದೆ ಮತ್ತು ನಾನು ನನ್ನ ಹಿಂದೆ ನೋಡಿದೆ ಅನ್ಸಾರುಗಳು ತಕ್ಷಣವೇ ಹಿಂತಿರುಗುತ್ತಿದ್ದರು ಮತ್ತು ಹಝ್ರತ್ ಪೈಗಂಬರ್(ಸ) ತಮ್ಮ ಸವಾರಿಯ ಮೇಲೆ ಶತ್ರುಗಳ ಮುಂದೆ ನಿಂತಿದ್ದರು ಮತ್ತು ಅನ್ಸಾರುಗಳು ಹಝ್ರತ್ ಪೈಗಂಬರ್(ಸ)ರ ಮುಂದೆ ಹೋರಾಡಲು ಪ್ರಾರಂಭಿಸಿದರು ಮತ್ತು ಹಝ್ರತ್ ಪೈಗಂಬರ್(ಸ)ರು ಅವರೊಂದಿಗೆ ಇದ್ದರು. ಆದ್ದರಿಂದ ಅನ್ಸಾರುಗಳು ಶತ್ರುವನ್ನು ಓಡಿಸುತ್ತಿದ್ದರು, ನಾವು ಅವರನ್ನು ಫರ್ಸಖ್ (ಮೂರು ಮೈಲುಗಳು) ತಳ್ಳಿದೆವು. ಅವರು ನಮ್ಮ ಮುಂದೆ ಸೋಲುವವರೆಗೂ ಅವರು ಕಣಿವೆಗಳಲ್ಲಿ ಹರಡಿಕೊಂಡರು. ನಂತರ ಹಝ್ರತ್ ಪೈಗಂಬರ್(ಸ)ರು ತಮ್ಮ ಗಮ್ಯಸ್ಥಾನಕ್ಕೆ ಹಿಂತಿರುಗಿದರು ಮತ್ತು ಅವರ ಡೇರೆ ಮತ್ತು ಕೈದಿಗಳನ್ನು ಅವರ ಸುತ್ತಲೂ ಕಟ್ಟಲಾಯಿತು. ಅವರ ಡೇರೆಯ ಸುತ್ತಲೂ ಒಂದು ಗುಂಪು ಇತ್ತು ಮತ್ತು ಅವರೊಂದಿಗೆ ಅವರ ಇಬ್ಬರು ಪತ್ನಿಯರಾದ ಹಝ್ರತ್ ಉಮ್ ಸಲಮಾ(ರ) ಮತ್ತು ಹಝ್ರತ್ ಝೈನಬ್(ರ) ಇದ್ದರು. ಒಂದು ವರದಿಯಲ್ಲಿ, ಹಝ್ರತ್ ಉಮ್ ಸಲಮಾ(ರ) ಮತ್ತು ಹಝ್ರತ್ ಮೈಮುನಾ(ರ) ಅವರನ್ನು ಉಲ್ಲೇಖಿಸಲಾಗಿದೆ. ಅವರ ಸುತ್ತಲೂ ಹಝ್ರತ್ ಪೈಗಂಬರ್(ಸ)ರನ್ನು ಕಾವಲು ಕಾಯುತ್ತಿದ್ದ ಜನರ ಗುಂಪಿತ್ತು, ಮತ್ತು ಅವರು ಅಬ್ದುಲ್ ಇಬ್ನ್ ಬಿಶ್ರ್, ಅಬು ನಯಿಲಾ ಮತ್ತು ಮುಹಮ್ಮದ್ ಇಬ್ನ್ ಮಸ್ಲಾಮಾ ಆಗಿದ್ದರು.

ಇಬ್ನ್ ಉಕ್ಬಾ ವಿವರಿಸುತ್ತಾರೆ, ಒಬ್ಬ ಖುರೈಶ್ ವ್ಯಕ್ತಿ ಸಫ್ವಾನ್ ಇಬ್ನ್ ಉಮಯ್ಯ ಅವರನ್ನು ಹಾದುಹೋದರು. (ಇವರು ಇನ್ನೂ ಬಹುದೇವತಾವಾದಿಯಾಗಿದ್ದರು ಮತ್ತು ಹುನೈನ್ ಯುದ್ಧವನ್ನು ವೀಕ್ಷಿಸಲು ಅವರೊಂದಿಗೆ ಬಂದಿದ್ದರು) ಮತ್ತು ಹೇಳಿದರು "ನಿಮಗೆ ಶುಭವಾಗಲಿ, ಮುಹಮ್ಮದ್(ಸ) ಮತ್ತು ಅವರ ಸಹಚರರು ಸೋತಿದ್ದಾರೆ." ಹಿಂದಿನ ದಾಳಿಯಿಂದಾಗಿ ಅವನು ಈ ಸೋಲನ್ನು ವರದಿ ಮಾಡಿದನು, ಮತ್ತು ನಂತರ ಬಹುದೇವತಾವಾದಿ ಹೀಗೆ ಹೇಳತೊಡಗಿದನು, "ಅಲ್ಲಾಹನ ಆಣೆ! ಅವರು ಎಂದಿಗೂ ತಮ್ಮ ಹಿಂದಿನ ಸ್ಥಿತಿಗೆ ಮರಳಲು ಸಾಧ್ಯವಾಗುವುದಿಲ್ಲ, ಅಂದರೆ ಅವರು ಮತ್ತೆ ಗೆಲ್ಲಲು ಸಾಧ್ಯವಾಗುವುದಿಲ್ಲ." ಸಫ್ವಾನ್ ಹೇಳಿದನು, "ನೀವು ನನಗೆ ಬೆಡೋಯಿನ್‌ಗಳ ಪ್ರಾಬಲ್ಯದ ಬಗ್ಗೆ ಶುಭ ಸುದ್ದಿ ನೀಡುತ್ತಿದ್ದೀರಾ. ಅಲ್ಲಾಹನ ಆಣೆ! ಬೆಡೋಯಿನ್‌ಗಳ ನಾಯಕನಾಗುವುದಕ್ಕಿಂತ ಖುರೈಶ್ ನಾಯಕನಾಗಿರುವುದನ್ನು ನಾನು ಹೆಚ್ಚು ಇಷ್ಟಪಡುತ್ತೇನೆ." ಇದರಿಂದ ಸಫ್ವಾನ್ ಕೋಪಗೊಂಡನು. ಶತ್ರುಗಳ ಮಾತುಗಳನ್ನು ಕೇಳಿದಾಗ, ಅವನು ತನ್ನ ಗುಲಾಮರಲ್ಲಿ ಒಬ್ಬನನ್ನು ಸುದ್ದಿ ತರಲು ಕಳುಹಿಸಿದನು ಮತ್ತು "ಇದು ಯಾರ ಘೋಷಣೆ ಎಂದು ಎಚ್ಚರಿಕೆಯಿಂದ ಆಲಿಸಿ, ಏಕೆಂದರೆ ಆ ಸಮಯದಲ್ಲಿ ಘೋಷಣೆಗಳ ಶಬ್ದವೂ ಪ್ರಾರಂಭವಾಗಿತ್ತು" ಎಂದು ಹೇಳಿದನು. ಅವನು ಅವನ ಬಳಿಗೆ ಹಿಂತಿರುಗಿ ಹೇಳಿದನು, "ಓ ಬನು ಅಬ್ದುರ್ ರಹಮಾನ್! ಓ ಬನು ಉಬೈದುಲ್ಲಾ! ಓ ಬನು ಅಬ್ದುಲ್ಲಾ! ಎಂದು ಅವರು ಹೇಳುವುದನ್ನು ನಾನು ಕೇಳಿದೆ" ಎಂದು ಹೇಳಿದನು. ಅವನು ಹೇಳಿದನು, 'ಮುಹಮ್ಮದ್(ಸ) ವಿಜಯಶಾಲಿಯಾಗಿದ್ದಾರೆ, ಮತ್ತು ಇದು ಯುದ್ಧದಲ್ಲಿ ಅವರ ಘೋಷಣೆಯಾಗಿದೆ.' ಇದು ಸಫ್ವಾನ್‌ಗೆ ಸಾಂತ್ವನ ನೀಡಿತು ಮತ್ತು ಅವರು ಹೇಳಿದರು, 'ಮುಹಮ್ಮದ್(ಸ) ವಿಜಯಶಾಲಿಯಾಗಿದ್ದಾರೆ.'"

(ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ 5, ಪುಟಗಳು 318-320, ದಾರುಲ್ ಕುತುಬ್ ಇಲ್ಮಿಯಾ, ಬೈರುತ್) (ದಾಏರಾ ಮಾರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾ (ಸ), ಸಂಪುಟ 9, ಪುಟ 260, ಬಾಜ್ಮ್ ಅಲ್-ಇಕ್ಬಾಲ್ ರಸ್ತೆ, ಲಾಹೋರ್)

ಈ ಯುದ್ಧದಲ್ಲಿ, ಹಝ್ರತ್ ಪೈಗಂಬರ್(ಸ)ರು ಅವಿಶ್ವಾಸಿಗಳ ಮೇಲೆ ಕಲ್ಲುಗಳನ್ನು ಎಸೆದು ಪ್ರಾರ್ಥಿಸಿದ ಬಗ್ಗೆಯೂ ಉಲ್ಲೇಖವಿದೆ, ಮೊದಲೇ ಹೇಳಿದಂತೆ, 'ನನಗೆ ಸ್ವಲ್ಪ ಮಣ್ಣನ್ನು ಕೊಡಿ, ನಾನು ಅದನ್ನು ಎಸೆಯುತ್ತೇನೆ'. ಇನ್ನಷ್ಟು ವಿವರವಾಗಿ ಹೇಳುವುದಾದರೆ, ಯುದ್ಧವು ಪೂರ್ಣಗೊಳ್ಳುತ್ತಿದ್ದಾಗ, ಸಹಾಬಿಯರು ಹಿಂತಿರುಗಿ ಬಂದು ಯುದ್ಧ ತೀವ್ರಗೊಂಡಾಗ, ಹಝ್ರತ್ ಪೈಗಂಬರ್(ಸ) ತಮ್ಮ ಹೇಸರಗತ್ತೆಯ ಮೇಲೆ ಸವಾರರಾಗಿ ಯುದ್ಧದ ದೃಶ್ಯವನ್ನು ನೋಡಿದರು. 'ಯುದ್ಧವು ತೀವ್ರಗತಿಯಲ್ಲಿ ನಡೆಯುತ್ತಿದೆ' ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ವರದಿಗಾರರು ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರು ಕೆಲವು ಕಲ್ಲುಗಳನ್ನು ತೆಗೆದು ಸತ್ಯನಿಷೇಧಿಗಳ ಕಡೆಗೆ ಎಸೆಯುತ್ತಾ ಹೀಗೆ ಹೇಳಿದರು: 'ಮುಹಮ್ಮದ್‌ನ(ಸ) ಪ್ರಭುವಿನಾಣೆ, ಮತ್ತೊಂದು ವರದಿಯಲ್ಲಿ, ಹಝ್ರತ್ ಪೈಗಂಬರ್(ಸ) ಹೇಳಿದರು, "ಕಅ್‌ಬಾ ಭವನದ ಪ್ರಭುವಿನಾಣೆ! ಈ ಜನರು ಸೋತುಹೋದರು."

ಹಝ್ರತ್ ಅಬ್ಬಾದ್(ರ) ಹೇಳುತ್ತಾರೆ: ಹಝ್ರತ್ ಅಬ್ಬಾಸ್(ರ) ಹೇಳುತ್ತಾರೆ: 'ಯುದ್ಧವು ಆರಂಭದಲ್ಲಿ ನಡೆಯುತ್ತಿದ್ದ ರೀತಿಯಲ್ಲೇ ಪುನಃ ಪ್ರಾರಂಭವಾಗಿತ್ತು. ಅಲ್ಲಾಹನಾಣೆ! ಹಝ್ರತ್ ಪೈಗಂಬರ್(ಸ) ಕಲ್ಲುಗಳನ್ನು ಎಸೆದ ತಕ್ಷಣ, ಸತ್ಯನಿಷೇಧಿಗಳ ವೇಗ ಕಡಿಮೆಯಾಗಲು ತೊಡಗಿತು ಮತ್ತು ಪರಿಸ್ಥಿತಿ ತಲೆಕೆಳಗಾಯಿತು.' ಅಂದರೆ, ಶತ್ರುಗಳ ದಾಳಿ, ಅದು ಕಡಿಮೆಯಾಗಲು ಪ್ರಾರಂಭಿಸಿತು ಮತ್ತು ಅವರ ಪರಿಸ್ಥಿತಿ ಹಿಮ್ಮುಖವಾಯಿತು, ಅಂದರೆ, ಶತ್ರುಗಳ ಸೋಲು. (ಸಹೀಹ್ ಮುಸ್ಲಿಂ, ಕಿತಾಬುಲ್ ಜಿಹಾದ್ ವಸ್ಸೈರ್, ಹುನೈನ್ ಯುದ್ಧದ ಅಧ್ಯಾಯ. ಹದೀಸ್ 1775)

ಅದರ ಮತ್ತಷ್ಟು ವಿವರಣೆ ಹೀಗಿದೆ: ಹಝ್ರತ್ ಪೈಗಂಬರ್(ಸ)ರು ತಮ್ಮ ಸವಾರಿಯ ಎರಡೂ ಸ್ಟಿರಪ್‌ಗಳಲ್ಲಿ ತಮ್ಮ ಪಾದಗಳನ್ನು ಹಿಡಿದು ತಮ್ಮ ಹೇಸರಗತ್ತೆಯ ಮೇಲೆ ಸವಾರಿ ಮಾಡುತ್ತಿದ್ದರು. ಅವರು ತಮ್ಮ

ಕೈಗಳನ್ನು ಮೇಲಕ್ಕೆತ್ತಿ ಪ್ರಾರ್ಥಿಸುತ್ತಾ ಹೀಗೆ ಹೇಳಿದರು: **ಅಲ್ಲಾಹುಮ್ಮ ಇನ್ನೀ ಅನ್‌ಶುದುಕ ಮಾ ವಅದ್‌ತನೀ ಅಲ್ಲಾಹುಮ್ಮ ಲಾ ಯಂಬಗ್ೀ ಲಹುಮ್ ಅನ್ ಯಝ್‌ಹರು ಅಲೈನಾ–** 'ಹೇ ಅಲ್ಲಾಹ್, ನೀನು ನನಗೆ ಮಾಡಿದ ವಾಗ್ದಾನದ ಹೆಸರಿನಲ್ಲಿ ನಾನು ನಿನ್ನಲ್ಲಿ ಕೇಳುತ್ತೇನೆ. ಹೇ ಅಲ್ಲಾಹ್, ಅವರು ನಮ್ಮ ಮೇಲೆ ಮೇಲುಗೈ ಸಾಧಿಸುವುದು ಮತ್ತು ನಾವು ಸೋಲುವುದು ಸೂಕ್ತವಲ್ಲ.'

ಯಾಝೀದ್ ಬಿನ್ ಅಮೀರ್ ಅವರಿಂದ ವರದಿಯಾಗಿದೆ, ಅವರು ಹುನೈನ್‌ನಲ್ಲಿ ಬಹುದೇವತಾವಾದಿಗಳೊಂದಿಗೆ ಇದ್ದರು ಮತ್ತು ನಂತರ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ಹಝ್ರತ್ ಪೈಗಂಬರ್(ಸ)ರು ಹುನೈನ್ ಸಂದರ್ಭದಲ್ಲಿ ನೆಲದಿಂದ ಒಂದು ಹಿಡಿ ಜೇಡಿಮಣ್ಣನ್ನು ತೆಗೆದುಕೊಂಡರು ಎಂದು ಅವರು ಹೇಳುತ್ತಾರೆ. ನಂತರ ಅವರು ಬಹುದೇವತಾವಾದಿಗಳ ಕಡೆಗೆ ತಿರುಗಿ ಅವರ ಮುಖಗಳಿಗೆ ಎಸೆದು ಹೇಳಿದರು: ಹಿಂತಿರುಗಿ. ಅವರ ಮುಖಗಳು ಕಪ್ಪಾದವು. ತನ್ನ ಸಹೋದರನನ್ನು ಭೇಟಿಯಾದ ಯಾರಾದರೂ ಅವನ ಕಣ್ಣುಗಳಲ್ಲಿ ಕುಟುಕುವ ಬಗ್ಗೆ ದೂರು ನೀಡುತ್ತಿದ್ದರು ಮತ್ತು ಅವನು ತನ್ನ ಕಣ್ಣುಗಳನ್ನು ಉಜ್ಜುತ್ತಿದ್ದಾಗ, ಅಂದರೆ, ಶತ್ರುಗಳ ಕಣ್ಣುಗಳು ಉರಿಯಲು ಪ್ರಾರಂಭಿಸುತ್ತಿದ್ದವು. ಆ ಸಮಯದಲ್ಲಿ, ಅವರು ದುಲ್‌ದುಲ್ ಎಂಬ ಹೇಸರಗತ್ತೆಯ ಮೇಲೆ ಸವಾರಿ ಮಾಡುತ್ತಿದ್ದರು.

(ಸಬ್ಲುಲ್ ಹುದಾ ವರ್‍ರಶಾದ್, ಸಂಪುಟ. 5, ಪುಟಗಳು. 322, 324, ದಾರುಲ್ ಕುತುಬ್ ಅಲ್–ಇಲ್ಮಿಯಾ ಬೈರುತ್) (ಸಿರತ್ ಅಲ್–ಹಲಾಬಿಯಾಹ್ ಸಂಪುಟ. 3, ಪುಟ 154, ದಾರುಲ್ ಕುತುಬ್ ಅಲ್–ಇಲ್ಮಿಯಾ ಬೈರುತ್)

ಶೈಬ ಬಿನ್ ಉಸ್ಮಾನ್ ಒಬ್ಬ ಗೌರವಾನ್ವಿತ ಖುರೈಶಿ ವ್ಯಕ್ತಿಯಾಗಿದ್ದನು, ಆತನ ತಂದೆ ಉಹುದ್ ಯುದ್ಧದಲ್ಲಿ ಕೊಲ್ಲಲ್ಪಟ್ಟಿದ್ದನು. ಅವರು ಮಕ್ಕಾದಿಂದ ಹುನೈನ್ ಸೈನ್ಯವನ್ನು ಸೇರಿದರು. ಕೆಲವರ ಪ್ರಕಾರ, ಮಕ್ಕಾ ವಿಜಯದ ಸಮಯದಲ್ಲಿ ಅವರು ಮುಸಲ್ಮಾನರಾದರು. ಅವನು ಸ್ವತಃ ಹೇಳುತ್ತಾನೆ: ನನಗೆ ಅವಕಾಶ ಸಿಕ್ಕಾಗಲೆಲ್ಲಾ (ಅಂದರೆ ಅವರು ಮುಸ್ಲಿಂ ಆಗಿರಲಿಲ್ಲ), ನನ್ನ ತಂದೆಯ ಹತ್ಯೆಗೆ ಪ್ರತೀಕಾರವಾಗಿ ನಾನು ಮುಹಮ್ಮದ್(ಸ) ಅವರನ್ನು ಕೊಲ್ಲುತ್ತೇನೆ ಮತ್ತು ನೌಝುಬಿಲ್ಲಾಹ್, ನನ್ನ ಹೃದಯವನ್ನು ಸಮಾಧಾನಪಡಿಸುತ್ತೇನೆ ಎಂಬ ಉದ್ದೇಶದಿಂದ ಅವರು ಸೇರಿಕೊಂಡರು. ಅವರು ಇಸ್ಲಾಂ ವಿರೋಧಿ ವಿದ್ವಾಂಸರಾಗಿದ್ದರು, 'ಇಡೀ ಅರಬ್ ದೇಶವಾಸಿಗಳು ಮುಸ್ಲಿಮರಾದರೂ ನಾನು ಮುಸ್ಲಿಮನಾಗಲಾರೆನು." ಅವರು ಹೇಳುತ್ತಾರೆ: 'ಯುದ್ಧಭೂಮಿಯಲ್ಲಿ ಹಝ್ರತ್ ಪೈಗಂಬರ್(ಸ)ರ ಸುತ್ತ ಕೇವಲ ಕೆಲವು ಜನರು ಮಾತ್ರ ಉಳಿದಿದ್ದಾಗ, ಹಝ್ರತ್ ಪೈಗಂಬರ್(ಸ)ರನ್ನು ವಧಿಸಲು ಇದು ಉತ್ತಮ ಅವಕಾಶ ಎಂದು ನಾನು ಯೋಚಿಸಿದೆ. ಹೀಗೆ ಯೋಚಿಸಿ ನಾನು ಬಲಭಾಗದಿಂದ ದಾಳಿ ಮಾಡಲು ಪ್ರಯತ್ನಿಸಿದಾಗ ನಾನು ಅಲ್ಲಿ ಅಬ್ಬಾಸ್ ನಿಂತಿರುವುದನ್ನು ಕಂಡೆನು. ಅಬ್ಬಾಸ್ ಇರುವಾಗ ಹಝ್ರತ್ ಪೈಗಂಬರ್(ಸ)ರ ಮೇಲೆ ದಾಳಿ ಮಾಡಲು ಸಾಧ್ಯವಲ್ಲ ಎಂದು ನಾನು ಯೋಚಿಸಿದೆ. ಅನಂತರ ನಾನು ಎಡಭಾಗದಿಂದ ದಾಳಿ ಮಾಡಲು ಪ್ರಯತ್ನಿಸಿದಾಗ ಅಲ್ಲಿ ನಾನು ಅಬೂ ಸುಫ್‌ಯಾನ್ ಬಿನ್ ಹಾರಿಸ್ ನಿಂತಿದ್ದನ್ನು ಕಂಡೆನು. ಆದ್ದರಿಂದ ನಾನು ಹಿಂದಿರುಗಿದೆ. ಅನಂತರ ನಾನು ಹಝ್ರತ್ ಪೈಗಂಬರ್(ಸ)ರ ಹಿಂದಿನಿಂದ ದಾಳಿ ಮಾಡಲು ಬಯಸಿದೆ. ಆದರೆ ನಾನು ಭಯಗೊಂಡು ನನ್ನ ಕಣ್ಣುಗಳ ಮೇಲೆ ಕೈ ಇಟ್ಟು ಓಡಿಹೋದೆ. ನಂತರದ ಕಾಲದಲ್ಲಿ ಅವರು ಹೇಳುತ್ತಾರೆ ಆಗ ನಾನು ಬೆಂಕಿಯ ಜ್ವಾಲೆಗಳು ಏರುತ್ತಿರುವುದನ್ನು ಕಂಡೆನು. ಅದು ನನ್ನನ್ನು ಸುಟ್ಟುಹಾಕುವಂತಿದ್ದವು. ಆಗ ಹಝ್ರತ್ ಪೈಗಂಬರ್(ಸ) ನನ್ನನ್ನು ಹೀಗೆ ಕರೆದರು: 'ಎಲೈ ಶೈಬ, ನನ್ನ ಹತ್ತಿರ ಬಾ'. ನಾನು ಅವರ ಸಮೀಪಕ್ಕೆ ಹೋದಾಗ ಅವರು ಮುಗುಳ್ನಕ್ಕು ನನ್ನ ಎದೆಯ ಮೇಲೆ ಕೈಯನ್ನು ಇಟ್ಟು ಹೀಗೆ ದುಆ ಮಾಡಿದರು: 'ಹೇ ಅಲ್ಲಾಹ್, ಶೈತಾನನನ್ನು ಇವನಿಂದ ದೂರ ಸರಿಸು'. ಶೈಬ ಹೇಳುತ್ತಾರೆ: 'ದೇವನಾಣೆ! ಆ ಕ್ಷಣದಿಂದಲೇ ಅಲ್ಲಾಹನ ರಸೂಲ್ ನನ್ನ ಕಿವಿಗಳಿಗಿಂತ, ನನ್ನ ಕಣ್ಣುಗಳಿಗಿಂತ ಮತ್ತು ನನ್ನ ಪ್ರಾಣಕ್ಕಿಂತಲೂ ಹೆಚ್ಚು ಪ್ರಿಯರಾದರು ಹಾಗೂ ನನ್ನ ಹೃದಯ ಶುದ್ಧವಾಯಿತು.'

ಅನಂತರ ಹಝ್ರತ್ ಪೈಗಂಬರ್(ಸ) ಶೈಬರೊಡನೆ ಹೀಗೆ ಹೇಳಿದರು: 'ಎಲೈ ಶೈಬ, ಸತ್ಯನಿಷೇಧಿಗಳ ವಿರುದ್ಧ ಯುದ್ಧ ಮಾಡು.' ಶೈಬ ಹೇಳುತ್ತಾರೆ: 'ಈಗ ನಾನು ಹಝ್ರತ್ ಪೈಗಂಬರ್(ಸ)ರ ರಕ್ಷಣೆಗಾಗಿ ಖಡ್ಗವನ್ನು ಎತ್ತಿ ಮುಂದಕ್ಕೆ ಸಾಗಿದೆ ಮತ್ತು ಹಝ್ರತ್ ಪೈಗಂಬರ್(ಸ)ರ ಪ್ರೀತಿಯಲ್ಲಿ ನಾನು ಹೇಗೆ ಹೋರಾಡಲು ತೊಡಗಿದನು ಎಂದರೆ, ಆ ಸಮಯದಲ್ಲಿ ನನ್ನ ತಂದೆ ನನ್ನ ಮುಂದೆ ಬಂದರೆ ಕೂಡ ನಾನು ಅವರನ್ನೂ ಕೊಂದುಬಿಡುತ್ತಿದ್ದೆ.'

(ದಾಏರಾ ಮಾರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾ(ಸ), ಸಂಪುಟ–9, ಪುಟಗಳು 256 ರಿಂದ 258, ಬಾಜ್ಮ್ ಇಕ್ಬಾಲ್, ಲಾಹೋರ್)

(ಫಜ್ವಾತ್ ಅಲ್–ನಬಿ(ಸ), ಅಲ್ಲಮಾ ಅಲಿ ಬುರ್ಹಾನ್ ಹಲಬಿ, ಅನುವಾದಕ, ಪುಟ 639, ಮಕ್ತಬಾ ದಾರುಲ್ ಇಶಾಅತ್, ಕರಾಚಿ)

(ಅಲ್–ಲು'ಲ್–ಉಲ್–ಮಕ್ನುನ್ ಸೀರತ್ ವಿಶ್ವಕೋಶ, ಸಂಪುಟ 9, ಪುಟ 272, ಮಕ್ತಾಬಾ ದಾರ್–ಎ–ಸಲಾಮ್)

ಹಝ್ರತ್ ಮುಸ್ಲೆಹ್ ಮೌಊದ್(ರ.ಅ) ಈ ಘಟನೆಯನ್ನು ತಮ್ಮದೇ ಶೈಲಿಯಲ್ಲಿ ವಿವರಿಸಿದ್ದಾರೆ: "ಹಝ್ರತ್ ಪೈಗಂಬರ್(ಸ)ರ ಬಗ್ಗೆ ಒಂದು ಘಟನೆ ಇದೆ, ಒಬ್ಬ ವ್ಯಕ್ತಿ ಸ್ಪಷ್ಟವಾಗಿ ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದನು. ಮತ್ತು ಹುನೈನ್ ಯುದ್ಧದಲ್ಲಿ ಭಾಗವಹಿಸಿದನು, ಆದರೆ ಸೈನ್ಯಗಳು ಭೇಟಿಯಾದಾಗ, ಹಝ್ರತ್ ಪೈಗಂಬರ್(ಸ) ಅವರನ್ನು ಹುತಾತ್ಮರನ್ನಾಗಿ ಮಾಡುವ ಅವಕಾಶವನ್ನು ಪಡೆದುಕೊಳ್ಳುವುದು ಅವನ ಉದ್ದೇಶವಾಗಿತ್ತು. ಯುದ್ಧವು ತೀವ್ರಗೊಂಡಾಗ, ಈ ವ್ಯಕ್ತಿ ತನ್ನ ಕತ್ತಿಯನ್ನು ಹಿಂತೆಗೆದುಕೊಂಡನು. ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ಒಬ್ಬಂಟಿಯಾಗಿದ್ದರು, ಹಝ್ರತ್ ಅಬ್ಬಾಸ್(ರ.ಅ) ಮಾತ್ರ ಅವರೊಂದಿಗೆ ಇದ್ದರು. ಈ ವ್ಯಕ್ತಿ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಮುನ್ನಡೆಯಲು ಮತ್ತು ದಾಳಿ ಮಾಡಲು ಬಯಸಿದನು. ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಪೈಗಂಬರ್(ಸ) ಅವರಿಗೆ ಈ ವ್ಯಕ್ತಿಯೊಳಗೆ "ಕಪಟ್" (ಅಂದರೆ ದ್ವೇಷ) ಇದೆ ಎಂದು ಹೇಳಲು ಪ್ರೇರೇಪಿಸಿದನು. ಆ ವ್ಯಕ್ತಿ ಸ್ವತಃ ಹೇಳುತ್ತಾನೆ: ನಾನು ಅವರ ಕಡೆಗೆ ಚಲಿಸುತ್ತಲೇ ಇದ್ದೆ ಮತ್ತು ನನ್ನ ಕತ್ತಿ ಈಗ ಅವರ ಕುತ್ತಿಗೆಯನ್ನು ಕತ್ತರಿಸುತ್ತದೆ ಎಂದು ನಾನು ಭಾವಿಸಿದೆ, ಆದರೆ ನಾನು ಅವರನ್ನು ತಲುಪಿದಾಗ, ಅವರು ತನ್ನ ಕೈಯನ್ನು ನನ್ನ ಕಡೆಗೆ ಚಾಚಿ ನನ್ನ ಎದೆಯ ಮೇಲೆ ಇಟದ್ದಿ, "ಓ ದೇವರೇ! ಅವನನ್ನು ದುಷ್ಟ ಆಲೋಚನೆಗಳಿಂದ ರಕ್ಷಿಸು ಮತ್ತು ಅವನ ದ್ವೇಷವನ್ನು ತೆಗೆದುಹಾಕು" ಎಂದು ಹೇಳಿದರು. ಆ ವ್ಯಕ್ತಿ ಹೇಳುತ್ತಾನೆ, "ಅವರಷ್ಟು ನನಗೆ ಹೆಚ್ಚು ಪ್ರಿಯವಾದದ್ದು ಯಾವುದೂ ಇಲ್ಲ ಎಂದು ನನಗೆ ಇದ್ದಕ್ಕಿದ್ದಂತೆ ಅನಿಸಿತು." ತದನಂತರ, ಹಝ್ರತ್ ಪೈಗಂಬರ್(ಸ) ಹೇಳಿದರು: ಮುಂದೆ ಸಾಗಿ ಯುದ್ಧವಾಡಿ, ಆಗ ನಾನು ನನ್ನ ಕತ್ತಿಯನ್ನು ತೆಗೆದುಕೊಂಡೆ ಮತ್ತು ದೇವರಾಣೆ, ಆ ಸಮಯದಲ್ಲಿ ನನ್ನ ತಂದೆ ಜೀವಂತವಾಗಿದ್ದರೆ ಮತ್ತು ಅವರು ನನ್ನ ಮುಂದೆ ಬಂದಿದ್ದರೆ, ನಾನು ನನ್ನ ಕತ್ತಿಯನ್ನು ಅವರ ಎದೆಗೆ ಹಾಕುತ್ತಿದ್ದೆ ಮತ್ತು ಹಾಗೆ ಮಾಡಲು ಹಿಂಜರಿಯುತ್ತಿರಲಿಲ್ಲ." ಇದು ಅವರ ದ್ವೇಷವನ್ನು ತೆಗೆದುಹಾಕಿದ ಪ್ರೀತಿಯಾಗಿತ್ತು.

(ಭೇರಾ ಕೀ ಸರ್‌ಝುಮೀನ್ ಮೇಂ ಇಕ್ ನಿಹಾಯತ್ ಈಮಾಣ್ ಅಫ್ರೋಝ್ ತಖ್ರೀರ್, ಅನ್ವಾರುಲ್ ಉಲೂಮ್, ಸಂಪುಟ–22, ಪುಟ–114) ಅಂದರೆ, ಹಝ್ರತ್ ಪೈಗಂಬರ್(ಸ) ಅವರ ಪ್ರೀತಿ ಆತನಲ್ಲಿದ್ದ ಹಗೆಯನ್ನು ತೆಗೆದುಹಾಕಿತು.

ಯುದ್ಧ ಮುಗಿದ ನಂತರ, ಹಝ್ರತ್ ಪೈಗಂಬರ್(ಸ) ಅವರು ತಮ್ಮ ಗುಡಾರದಲ್ಲಿ ಕುಳಿತಿದ್ದಾಗ ಶೈಬಾ ಬಿನ್ ಉಸ್ಮಾನ್ ಹಝ್ರತ್ ಪೈಗಂಬರ್(ಸ) ಅವರನ್ನು ಭೇಟಿ ಮಾಡಲು ಬಂದರು ಮತ್ತು ಹಝ್ರತ್ ಪೈಗಂಬರ್(ಸ) ಅವರಿಗೆ ಹೇಳಿದರು, "ಎಲೈ ಶೈಬಾ! ಆ ಸಮಯದಲ್ಲಿ ನೀವು ಯೋಚಿಸುತ್ತಿರುವುದಕ್ಕಿಂತ ಅಲ್ಲಾಹನು ಈಗ ನಿಮಗಾಗಿ ನೀಡಿರುವುದು ಉತ್ತಮವಾಗಿದೆ." ನಂತರ ಹಝ್ರತ್ ಪೈಗಂಬರ್(ಸ)ರು ಶೈಬಾ ಯುದ್ಧಭೂಮಿಯಲ್ಲಿ ಆ ಸಮಯದಲ್ಲಿ ತನ್ನ ಮನಸ್ಸಿನಲ್ಲಿ ಅಡಗಿಕೊಂಡಿದ್ದ ಎಲ್ಲಾ ವಿಷಯಗಳನ್ನು ಶೈಬಾಗೆ ತಿಳಿಸಿದರು. ಶೈಬಾ ಹಝ್ರತ್ ಪೈಗಂಬರ್(ಸ) ರವರನ್ನು ಹಿಂದೆ ನಡೆದದ್ದಕ್ಕಾಗಿ ಕ್ಷಮೆ ಕೇಳಿದರು, ಆದ್ದರಿಂದ ಹಝ್ರತ್ ಪೈಗಂಬರ್(ಸ) ಅವರಿಗಾಗಿ ಪ್ರಾರ್ಥಿಸಿದರು ಮತ್ತು **ಘಫರಲ್ಲಾಹು ಲಕ**. ಅಲ್ಲಾಹನು ನಿಮ್ಮನ್ನು ಕ್ಷಮಿಸಲಿ ಎಂದು ಹೇಳಿದರು.

(ದಾಏರಾ ಮಾರಿಫ್, ಸೀರತ್ ಮುಹಮ್ಮದ್ ರಸೂಲುಲ್ಲಾ(ಸ), ಸಂಪುಟ–9, ಪುಟ–258, ಬಾಜ್ಮ್ ಇಕ್ಬಾಲ್, ಲಾಹೋರ್)

ಅದೇ ರೀತಿ, ನುದೈರ್ ಬಿನ್ ಹಾರಿಸ್‌ನ ದುಷ್ಟ ಉದ್ದೇಶಗಳು ಮತ್ತು ಕೆಟ್ಟ ಉದ್ದೇಶಗಳೊಂದಿಗೆ ಮಕ್ಕಾದಿಂದ ಹುನೈನ್ ಸೈನ್ಯಕ್ಕೆ ಸೇರಿದವರಲ್ಲಿ ನುದೈರ್ ಬಿನ್ ಹಾರಿಸ್ ಕೂಡ ಒಬ್ಬನಾಗಿದ್ದನು. ಅವರು ಖುರೈಶ್ ನಾಯಕರಲ್ಲಿ ಒಬ್ಬರಾಗಿದ್ದರು ಮತ್ತು ಅವರ ಸಹೋದರ ಬದ್ರ್ ಯುದ್ಧದಲ್ಲಿ ಕೊಲ್ಲಲ್ಪಟ್ಟರು. ಅವರು ಸ್ವರಃ ಹೇಳುತ್ತಾರೆ: ನಾನು ನನ್ನ ಕೆಲವು ಸಹಚರರೊಂದಿಗೆ ಹುನೈನ್ ಯುದ್ಧದಲ್ಲಿ ಭಾಗವಹಿಸಿದ ಮೂಲ ಉದ್ದೇಶ ನನಗೆ ಅವಕಾಶ ಲಭಿಸಿದ ತಕ್ಷಣ ಮುಶ್ರಿಕೀನರೊಂದಿಗೆ ಸೇರುತ್ತೇನೆ ಎಂದು ಭಾವಿಸಿದೆ ಹೀಗೆ ಮುಸ್ಲಿಮರು ಆರಂಭದಲ್ಲಿ ಚದುರಿಹೋದಾಗ ನಾನು ಹಝ್ರತ್ ಪೈಗಂಬರ್(ಸ) ಅವರನ್ನು ಕೊಲ್ಲಲು ಅವರ ಕಡೆಗೆ ಹೋದೆ, ಆದರೆ ನಾನು ಅವರ ಕಡೆಗೆ ಹೋಗಲು ನಿರ್ಧರಿಸಿದ ತಕ್ಷಣ,

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.06, Thursday, 23, 30 October 2025, Issue No. 43-44

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

ಅವರ ಸುತ್ತಲೂ ಬಿಳಿ ಮುಖಗಳನ್ನು ಹೊಂದಿರುವ ಕೆಲವು ಜನರು ನನ್ನನ್ನು ಇಲ್ಲಿಂದ ದೂರ ಹೋಗುವಂತೆ ಹೇಳುತ್ತಿರುವುದನ್ನು ನಾನು ನೋಡಿದೆ. ಅವರ ಧ್ವನಿಯಲ್ಲಿ ಎಷ್ಟು ಭಯಾನಕತೆ ಇತ್ತು ಎಂದರೆ ನನಗೆ ಭಯವಾಯಿತು ಮತ್ತು ನಾನು ನಡುಗಲು ಪ್ರಾರಂಭಿಸಿದೆ ಮತ್ತು ಮುಸ್ಲಿಮರು ಮತ್ತೆ ಒಟ್ಟುಗೂಡಲು ಮತ್ತು ಶತ್ರುಗಳ ಮೇಲೆ ದಾಳಿ ಮಾಡಲು ಪ್ರಾರಂಭಿಸುವ ಮೊದಲು ಸ್ವಲ್ಪ ಸಮಯ ಕಳೆದಿರಬೇಕು. ಈ ಮಧ್ಯೆ, ನಾನು ಅಲ್ಲಿಂದ ಹಿಂತಿರುಗಿ ಮರಗಳಲ್ಲಿ ಅಡಗಿಕೊಂಡು ಹಲವಾರು ದಿನಗಳವರೆಗೆ ಅಡಗಿಕೊಂಡೆ ಏಕೆಂದರೆ ಹಝ್ರ‌ತ್ ಪೈಗಂಬರ್(ಸ)ರು ತಾಯಿಫ್ ಕಡೆಗೆ ಹೋಗಿದ್ದಾರೆ ಮತ್ತು ನಂತರ ಅಲ್ಲಿಂದ ಅವರು ಜಿ'ರಾನಾಗೆ ಹೋಗಿದ್ದಾರೆಂದು ನನಗೆ ತಿಳಿಯುವವರೆಗೂ ನಾನು ನೋಡಿದ ಭಯಾನಕತೆ ನನ್ನಿಂದ ದೂರವಾಗಲಿಲ್ಲ. ಆದ್ದರಿಂದ ಯುದ್ಧ ಮುಗಿದ ನಂತರ, ಈಗ ಇಸ್ಲಾಂ ಮೇಲುಗೈ ಸಾಧಿಸಿದೆ ಮತ್ತು ಎಲ್ಲರೂ ಇಸ್ಲಾಂ ಅನ್ನು ಸ್ವೀಕರಿಸಿದ್ದಾರೆ ಎಂದು ನಾನು ಭಾವಿಸಿದೆ, ಆದ್ದರಿಂದ ನಾನು ಸಹ ಹಝ್ರ‌ತ್ ಪೈಗಂಬರ್(ಸ) ರ ಸೇವೆಗೆ ಬರಬೇಕು. ಹಾಗಾಗಿ ನಾನು ರಹಸ್ಯವಾಗಿ ಜಿ'ರಾನಾಗೆ ಹೋಗಿ ಮುಸ್ಲಿಮರೊಂದಿಗೆ ಸೇರಿಕೊಂಡೆ. ಹಝ್ರ‌ತ್ ಪೈಗಂಬರ್(ಸ)ರು ನನ್ನನ್ನು ನೋಡಿದಾಗ, ಅವರು ನನ್ನನ್ನು ಗುರುತಿಸಿ ನೀನು ನುದೈರ್ ಅಲ್ಲವೇ?" ಎಂದು ಕೇಳಿದರು. ನಾನು "ಹೌದು, ನಾನು ಇಲ್ಲಿದ್ದೇನೆ" ಎಂದು ಹೇಳೀದೆ. ಅವರು ಹೇಳಿದರು, "ಹುನೈನ್‌ನಲ್ಲಿ ನೀವು ಉದ್ದೇಶಿಸಿದ್ದಕ್ಕಿಂತ ಇದು ನಿಮಗೆ ಉತ್ತಮವಾಗಿದೆ, ಮತ್ತು ಅಲ್ಲಾಹನು ನಿಮ್ಮ ಮತ್ತು ಅದರ ನಡುವೆ ಬಂದನು, ಅಂದರೆ, ಅವನು ನಿಮ್ಮ ಮತ್ತು ನಿಮ್ಮ ನಡುವೆ ಬಂದನು." ಇದನ್ನು ಕೇಳಿದ ನಂತರ, ನಾನು ಹಝ್ರ‌ತ್ ಪೈಗಂಬರ್(ಸ)ರ ಕಡೆಗೆ ಧಾವಿಸಿ ಹೇಳಿದೆ, "ಯಾ ರಸೂಲಲ್ಲಾಹ್(ಸ), ಅಲ್ಲಾಹನಲ್ಲದೆ ಬೇರೆ ದೇವರು ಇದ್ದಿದ್ದರೆ, ಅವನು ನನಗೆ ಏನಾದರೂ ಪ್ರಯೋಜನವನ್ನು ನೀಡುತ್ತಿದ್ದನು" ಎಂದು ನುದೈರ್ ವಿವರಿಸುತ್ತಾರೆ. ಅವರು ಶಹಾದತ್ ಪಠಿಸಿ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ಹಝ್ರ‌ತ್ ಪೈಗಂಬರ್(ಸ)ರು ಅವರಿಗಾಗಿ ಪ್ರಾರ್ಥಿಸಿದರು ಮತ್ತು **ಅಲ್ಲಾಹುಮ್ಮ ಝಿದ್‌ಹು ಸಿಬಾತನ್**- ಅಂದರೆ: ಓ ಅಲ್ಲಾಹ್, ಅವರ ದೃಢತೆಯನ್ನು ವರ್ಧಿಸು" ಎಂದು ಹೇಳಿದರು. ನುದೈರ್ ಹೇಳಿದರು, "ಅಲ್ಲಾಹನ ಆಣೆ! ನಿಮ್ಮ ಈ ಪ್ರಾರ್ಥನೆಯಿಂದಾಗಿ, ನನ್ನ ಹೃದಯವು ದೃಢತೆಯ ದೃಷ್ಟಿಯಿಂದ ಕಲ್ಲುಬಂಡೆಯಂತೆ ಮಾರ್ಪಟ್ಟಿದೆ. ಇದರ ನಂತರ, ಹಝ್ರ‌ತ್ ಪೈಗಂಬರ್(ಸ)ರು ಹೇಳಿದರು: ಅವನ್ನು ಮಾರ್ಗದರ್ಶನ ನೀಡಿದ ಅಲ್ಲಾಹನಿಗೆ ಎಲ್ಲಾ ಸ್ತುತಿಗಳು.

(ಅಲ್-ಬಿದಾಯ ವನ್ನಿಹಾಯ, ಸಂಪುಟ-7, ಪುಟಗಳು 112-113, ದಾರ್ ಹಜರ್ ಬೈರುತ್) (ಸಬ್ಲ್ ಅಲ್-ಹುದಾ ಅಲ್-ರಶೀದ್, ಸಂಪುಟ. 5, ಪುಟಗಳು 321-322, ದಾರುಲ್ ಕುತುಬ್, ಅಲ್-ಇಲ್ಮೀಯಾ, ಬೈರುತ್)

ಹುನೈನ್ ಯುದ್ಧದ ನಂತರ ಯುದ್ಧ ಸಂಪತ್ತನ್ನು ವಿತರಿಸುವಾಗ, ಹಝ್ರ‌ತ್ ಪೈಗಂಬರ್(ಸ) ಹೃದಯಗಳನ್ನು ಸಂಗ್ರಹಿಸುವ ಉದ್ದೇಶಕ್ಕಾಗಿ ಖುರೈಶ್‌ನ ಒಂಬತ್ತು ಮುಸ್ಲಿಂ ನಾಯಕರಲ್ಲಿ ಕೆಲವರಿಗೆ ನೂರು ಒಂಟೆಗಳನ್ನು ನೀಡಿದರು. ಅವರಲ್ಲಿ ಒಬ್ಬರು ನುದೈರ್ ಬಿನ್ ಹಾರಿಸ್. ಅವರು ಎಷ್ಟು ಸಂಯಮವನ್ನು ತೋರಿಸಿದರು ಎಂದರೆ ವಾಸ್ತವವಾಗಿ ಹಝ್ರ‌ತ್ ಪೈಗಂಬರ್(ಸ) ಅವರಿಗಾಗಿ ಪ್ರಾರ್ಥಿಸಿದ ಪರಿಣಾಮವೇ ಆಗಿದೆ... ನಂಬಿಕೆಯಲ್ಲಿ ದೃಢತೆ ದೊರೆಯಲು ಕಾರಣವೆಂದರೆ, ಒಬ್ಬ ವ್ಯಕ್ತಿಯು ಅವರ ಬಳಿಗೆ ಬಂದು ಹಝ್ರ‌ತ್ ಪೈಗಂಬರ್(ಸ) ಅವರಿಗೆ ನೂರು ಒಂಟೆಗಳನ್ನು ನೀಡುವುದಾಗಿ ಘೋಷಿಸಿದ್ದಾರೆ, ಆದ್ದರಿಂದ ಅವರು ಒಂಟೆಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳಿದರು. ಇದರ ಬಗ್ಗೆ ನುದೈರ್ ಅವರಿಗೆ ಹಝ್ರ‌ತ್ ಪೈಗಂಬರ್(ಸ) ಹೃದಯದ ರಚನೆಗಾಗಿ ಇದನ್ನು ನೀಡುತ್ತಿದ್ದಾರೆ ಎಂದು ಹೇಳಿದರು. ಆದ್ದರಿಂದ, ನಾನು ಈ ಒಂಟೆಯನ್ನು ತೆಗೆದುಕೊಳ್ಳುವುದಿಲ್ಲ, ಅಂದರೆ, ಅಲ್ಲಾಹನ ಅನುಗ್ರಹದಿಂದ ನಾನು ಇಸ್ಲಾಂನಲ್ಲಿ ದೃಢವಾಗಿದ್ದೇನೆ. ಹೃದಯದ ರಚನೆಗಾಗಿ ನಾನು ಅಂತಹ ಸಂಪತ್ತನ್ನು ತೆಗೆದುಕೊಳ್ಳುವ ಅಗತ್ಯವಿಲ್ಲ. ನಂತರ ಅವರೇ ನಾನು ಹಝ್ರ‌ತ್ ಪೈಗಂಬರ್(ಸ) ಅವರನ್ನು ಈ ಸಂಪತ್ತನ್ನು ಕೇಳಲಿಲ್ಲ ಮತ್ತು ಇದು ಅವರಿಂದ ಉಡುಗೊರೆಯಾಗಿದೆ, ಆದ್ದರಿಂದ ಅವರು ಅದನ್ನು ನಿರಾಕರಿಸಬಾರದು ಎಂದು ಹೇಳಿದರು. ಇದರ ಬಗ್ಗೆ, ಅವರು ಈ ಸುದ್ದಿಯನ್ನು ತಂದ ವ್ಯಕ್ತಿಗೆ ಈ ಹತ್ತು ಒಂಟೆಗಳನ್ನು ಉಡುಗೊರೆಯಾಗಿ ನೀಡಿದರು ಮತ್ತು ಉಳಿದದ್ದನ್ನು ತನಗಾಗಿ ಇಟ್ಟುಕೊಂಡರು.

(ಅಸದ್ ಅಲ್-ಘಬಾ, ಸಂಪುಟ 5, ಪುಟ 307, ದಾರ್ ಅಲ್-ಕುತುಬ್ ಅಲ್-ಇಲ್ಮಿಯಾ)

ನಂತರ, 'ನಮ್ಮ ಪೂರ್ವಜರು ಇದ್ದಂತಹ ಆ ಶಿರ್ಕಿನಲ್ಲಿ ನಾವು ಸಾಯಲಿಲ್ಲ' ಎಂದು ಹುನೈನ್ ಸೈನ್ಯದಲ್ಲಿ ದುರುದ್ದೇಶದಿಂದ ಸೇರಿಕೊಂಡಿದ್ದ ಮಕ್ಕಾದ ಜನರಲ್ಲಿ ಹೆಚ್ಚಿನವರು ಅನಂತರ ಹೇಳುತ್ತಿದ್ದರು. ಅವರ ಇಸ್ಲಾಮಿಕ ಜೀವನ ಬಹಳ ಉತ್ತಮವಾಗಿತ್ತು. ಅವರು ಹಿಜ್ರತ್ ಮಾಡಿ ಮದೀನಾಕ್ಕೆ ಹೋದರು. ಅನಂತರ ಅಲ್ಲಿಂದ ಯುದ್ಧ ಮಾಡಲಿಕ್ಕಾಗಿ ಸಿರಿಯಾಕ್ಕೆ ಹೋದರು. ಅವರು ಹದಿನೈದನೇ ಹಿಜರಿಯಲ್ಲಿ ಯರ್ಮೂಕ್ ಯುದ್ಧದಲ್ಲಿ ಹುತಾತ್ಮರಾದರು. ಉಳಿದ ಭಾಗವನ್ನು ಮುಂದಿನ ಬಾರಿ ವಿವರಿಸಲಾಗುವುದು. ಇನ್‌ಶಾ ಅಲ್ಲಾಹ್.

**(ಅಲ್-ಫಝ್ಲ್ ಇಂಟರ್ನ್ಯಾಷನಲ್, ಸೆಪ್ಟೆಂಬರ್ 26, 2025, ಪುಟಗಳು 2 ರಿಂದ 6)**

## ಪವಿತ್ರ ಖುರ್‌ಆನ್

ಹಝ್ರ‌ತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ.ಆದರೆ ಜನರು ಅದನ್ನು ಅರಿತಿಲ್ಲ.

***(ಮಲ್‌ಫೂಝಾತ್ ಸಂಪುಟ-2, ಪುಟ-344)***

ಪವಿತ್ರ ಖುರ್‌ಆನಿನ ಮಹಿಮೆ ಎಷ್ಟು ಉನ್ನತವಾಗಿದೆಯೆಂದರೆ ಅದು ಎಲ್ಲ ಮಹಿಮೆಗಳಿಗಿಂತ ಶ್ರೇಷ್ಠವಾಗಿದೆ. ಅದು "ಹಕಮ್" ಆಗಿದೆ ಎಂದರೆ ಅಂತಿಮವಾಗಿ ತೀರ್ಮಾನ ಮಾಡುವುದು; ಅದು "ಮುಹೈಮಿನ್" ಎಂದರೆ ಅದು ಎಲ್ಲ ಮಾರ್ಗದರ್ಶನಗಳ ಸಂಗ್ರಹವಾಗಿದೆ. ಅದು ಎಲ್ಲ ಸಾಕ್ಷ್ಯಾಧಾರಗಳನ್ನು ತನ್ನಲ್ಲಿ ಜಮಾಯಿಸಿದೆ ಮತ್ತು ಶತ್ರು ಸಮೂಹವನ್ನು ಚೆಲ್ಲಾಪಲ್ಲಿಯಾಗಿ ಮಾಡಿದೆ. ಅದರಲ್ಲಿ ಎಲ್ಲ ಸಂಗತಿಗಳ ವಿವರಣೆಗಳಿವೆ. ಅದರಲ್ಲಿ ನಡೆಯಲಿರುವ ಮತ್ತು ನಡೆದ ಸಂಭವಗಳ ಸಮಾಚಾರಗಳಿವೆ. ಅಸತ್ಯವು ಅದರ ಹಿಂದಿನಿಂದಾಗಲೀ ಮುಂದಿನಿಂದಾಗಲೀ ನುಸುಳಲಾರದು. ಅದು ಸರ್ವ ಶಕ್ತನಾದ ದೇವನ ಪ್ರಕಾಶವಾಗಿದೆ. **(ಖುತ್ಬ ಇಲ್‌ಹಾಮಿಯಾ; ರೂಹಾನೀ ಖಝಾಇನ್ ಸಂಪುಟ-16, ಪುಟ-103)**

## 130ನೇ ಜಲ್ಸಾ ಸಾಲಾನ ಖಾದಿಯಾನ್ 26, 27, 28 ಡಿಸೆಂಬರ್ 2025ರಂದು ಆಯೋಜಿಸಲಾಗುವುದು

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 130ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 26, 27 ಮತ್ತು 28ನೇ ಡಿಸೆಂಬರ್ 2025 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಮರ್ಕಝಿಯ ಖಾದಿಯಾನ್)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800-103-2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ (ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.